2. ವರದಿಯನ್ನೊಪ್ಪಿಸುವುದು.

ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಮಾನ್ಯ ಉಪಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ):– ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೇ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:– ವರದಿಯನ್ನು ಒಪ್ಪಿಸಲಾಯಿತು.

3. ವಿತ್ತೀಯ ಕಾರ್ಯಕಲಾಪಗಳು

ಬೇಡಿಕೆ ಸಂಖ್ಯೆ 7: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– 2015–16ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ ಮಾನ್ಯ ಅಧ್ಯಕ್ಷರೆ, ನಿನ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದ್ದೇನೆ. ಇವತ್ತು ಮುಂದುವರೆಸುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಆದರೆ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ವಿಷಯವನ್ನು ಹೇಳಬಯಸುವುದೇನೆಂದರೆ, ನೀವೇ ಇದಕ್ಕೆ ಏನು ಎಂದು ಒಂದು ನಿರ್ಣಯ ತೆಗೆದುಕೊಳ್ಳಬೇಕು. ಮಾನ್ಯ ಹೆಚ್.ಕೆ ಪಾಟೀಲ್‌ರವರು ಒಬ್ಬರು ಈಗ ಬಂದು ಮೊದಲನೆ ಸಾಲಿನಲ್ಲಿ ಬಂದು ಕುಳಿತುಕೊಂಡಿದ್ದಾರೆ. ಮಾನ್ಯ ರೋಷನ್ ಬೇಗ್‌ರವರು ತಾವು ದಯವಿಟ್ಟು ಮುಂದಿನ ಸಾಲಿನವರಲ್ಲ. ತಾವು ಹಿಂದಿನ ಸಾಲಿನವರು. ಮುಂದಿನ ಸಾಲಿನಲ್ಲಿ ಯಾರೂ ಇಲ್ಲವೆಂದು ಆಗಬಾರದೆಂದು ಮಾನ್ಯ ರೋಷನ್ ಬೇಗ್‌ರವರು ಮುಂದಿನ ಸಾಲಿನಲ್ಲಿ ಬಂದು ಕುಳಿತುಕೊಂಡಿದ್ದಾರೆ. ಎರಡನೇ ಸಾಲಿನಲ್ಲಿ ಯಾರೂ ಇಲ್ಲ.

ಅಧ್ಯಕ್ಷರು:– ಬೇಡಿಕೆಗೆ ಸಂಬಂಧಿಸಿದಂತೆ ಇಬ್ಬರು ಸಚಿವರು ಇದ್ದಾರೆ. ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಹಾಗಾದರೆ ಸರ್ಕಾರದಲ್ಲಿ ಉಳಿದವರಿಗೆ ಯಾರಿಗೂ ಜವಾಬ್ದಾರಿ ಇಲ್ಲವೇ?

ಅಧ್ಯಕ್ಷರು:- ಇದೆ. ನಾನು ಒಂದು ಮಾತು ಹೇಳುತ್ತೇನೆ ಕೇಳಿ. ನೀವೂ ಸರ್ಕಾರ ನಡೆಸಿದವರು. ಅವರೂ ಸರ್ಕಾರ ನಡೆಸಿದವರು. ನಾವೆಲ್ಲಾ ಸರ್ಕಾರದಲ್ಲಿ ಇದ್ದವರೆ. ಈ ಸಂಸ್ಕೃತಿ ಪರಂಪರೆಯಿಂದ ಬಂದುಬಿಟ್ಟಿದೆ. ಏನೂ ಮಾಡುವುದಕ್ಕಾಗುವುದಿಲ್ಲ. ಈ ಸದನ ಎಂದರೆ ದೇವರ ಪೂಜೆ ಮಾಡಿದ ಹಾಗೆ. ನಾನು ಪೂಜೆಗೆ ಹೋಗುವುದಿಲ್ಲ. ಆದರೂ ಪೂಜೆಗೆ ಇದ್ದ ರೀತಿ ಇರಬೇಕು. ಆ ಪ್ರಜ್ಞೆ ಬರಲಿಲ್ಲವೆಂದರೆ ಅದು ದು:ಖದ ಮಾತು.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಅಧ್ಯಕ್ಷರೆ, ನಿಮ್ಮಂತಹ ಹಿರಿಯರಿದ್ದಾಗ ಸ್ವಲ್ಪವಾದರು ಬದಲಾವಣೆಯಾಗುವುದಿಲ್ಲವೆಂದಾಯಿತು. ಸ್ವಲ್ಪವಾದರೂ ಬದಲಾವಣೆಯಾಗಲಿ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಮಾಲೀಕಯ್ಯ ಗುತ್ತೇದಾರರನ್ನು ಸಚಿವರನ್ನಾಗಿ ಮಾಡಿದ್ದರೆ ಈ ಸಮಸ್ಯೆ ಇರುತ್ತಿತ್ತಾ? ಅವರು ಸಮಯಕ್ಕೆ ಸರಿಯಾಗಿ ಸದನಕ್ಕೆ ಬಂದು ಕುಳಿತಿರುತ್ತಿದ್ದರು. ಮಾಲೀಕಯ್ಯ ಗುತ್ತೇದಾರರನ್ನು ಸಚಿವರನ್ನಾಗಿ ಮಾಡಲಿಲ್ಲ. ಮಾನ್ಯ ರೋಷನ್ ಬೇಗ್‌ರವರಿಗೆ ಮುಂದಿನ ಸೀಟ್ ಕೊಡಲಿಲ್ಲ.

(ಗೊಂದಲ)

ಅಧ್ಯಕ್ಷರು:- ಎಲ್ಲಿಂದಲೋ ಎಲ್ಲಿಗೋ ಹೋಗುತ್ತೀರಲ್ಲಾ. ನಾನು ಹೇಳುವುದನ್ನು ಕೇಳಿ. ನಮ್ಮ ಶಾಸಕರು ಎಷ್ಟು ಜನ ಬಂದಿದ್ದಾರೆ? ಬೇಡ ಅದನ್ನು ಬಿಟ್ಟು ಬಿಡೋಣ. ನಮ್ಮನ್ನು ನಾವು ಆತ್ಮಶೋಧನೆ ಮಾಡಿಕೊಳ್ಳೋಣ. ಎಲ್ಲರೂ ನಮ್ಮ ನಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸೋಣ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಕೋರಂ ಮಾಡುವುದಕ್ಕೂ ಅವರ ಹತ್ತಿರ ಜನ ಇಲ್ಲ.

(ಗೊಂದಲ)

ಅಧ್ಯಕ್ಷರು:- ನೀವು ಬಂದಿದ್ದೀರಲ್ಲಾ, ಧನ್ಯವಾದಗಳು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಕೋರಂ ಮಾಡುವುದಕ್ಕೆ ಜನ ಏಕೆ ಇಲ್ಲವೆಂದರೆ, ಮಾನ್ಯ ಸಿದ್ದರಾಮಯ್ಯರವರ ಜೊತೆ ಅಸಹಕಾರ ಎಂದು ಸಿದ್ಧ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಕಾರಜೋಳರವರು ಬರಬೇಕೆಂದು ಅವರು ಕಾಯುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಾನು ನಿನ್ನೆಯ ದಿನ ಮಾತನಾಡುತ್ತಾ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣಾಭಿವೃದ್ಧಿ ಸಚಿವರನ್ನಾಗಿ ಒಳ್ಳೆಯವರನ್ನೆ ಆಯ್ಕೆ ಮಾಡಿದ್ದಾರೆ ಎಂದು ರಾಜ್ಯದ ಜನರು ಸಂತೋಷಪಟ್ಟಿದ್ದರು. ಆದರೆ ಕಳೆದ ಎರಡು ವರ್ಷಗಳಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಕಾರ್ಯವೈಖರಿಯನ್ನು ನೋಡಿದಾಗ ಜನ ಭ್ರಮನಿರಸನಗೊಂಡಿದ್ದಾರೆ ಎಂದು ನಾನು ನಿನ್ನೆ ಹೇಳಿದ್ದೇನೆ. ಇವತ್ತು ನಾನು ಅದನ್ನೇ ಮುಂದುವರೆಸಿ ಮಾತನಾಡುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:- ಹೊಸ ಶೌಚಾಲಯ ನಿರ್ಮಾಣ ಮಾಡಿಸುತ್ತಿದ್ದಾರೆ, ತಾವು ನೋಡಲಿಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಲ್ಲಿ ಶವರ್ ಶ್ಯಾಂಪೂ ಎಲ್ಲವೂ ಇದೆ.

ಅಧ್ಯಕ್ಷರು:- ನಿಮಗೆ ಮತ್ತೆ ಅದಕ್ಕಿಂತ ಏನು ಪ್ರಗತಿ ಬೇಕಾಗಿದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ ಇನ್ನು ಹೇಳುವುದು ಇದೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ಅಲ್ಲಿ ಎಲ್ಲವೂ ಇದೆ, ನೀರೊಂದು ಮಾತ್ರ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈ ಬಗ್ಗೆ ನಾನು ನಿನ್ನೆಯೇ ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿದ್ದೇನೆ. ಮಾನ್ಯ ಸಚಿವರಾದ ಹೆಚ್.ಕೆ. ಪಾಟೀಲ್‌ರವರಲ್ಲಿ ಒಂದು ಕರಗತವಾದಂತಹ ವಿಷಯ ಏನೆಂದರೆ, ಅವರು ಜನರ ಸಮಸ್ಯೆ ಏನು ಇದೆಯೋ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನನ್ನ ಹತ್ತಿರ ಆಗುವುದಿಲ್ಲ ಎಂದು ಹೇಳುವುದಿಲ್ಲ. ಆದರೆ ಇನ್ನೊಂದು ಏನೇನೋ ಮಾಡಿ ಒಳ್ಳೆಯದು ಮಾಡುತ್ತೇನೆಂದು ಒಂದು ಭ್ರಮೆಯನ್ನು ಸೃಷ್ಟಿಸುವಂತಹ ಶೈಲಿ ಅವರಿಗೆ ಚೆನ್ನಾಗಿ ಗೊತ್ತಿದೆ. ಹಾಗಾಗಿ ಈ ಬಗ್ಗೆ ನಿನ್ನೆಯೆ ಹೇಳಿದ್ದೇನೆ. ನಾನು ಆ ಹಿನ್ನೆಲೆಯಲ್ಲಿ ಮತ್ತೆ ವಿಸ್ತಾರ ಮಾಡಿ ಹೇಳುವುದಿಲ್ಲ. ಮಾನ್ಯ ಸಚಿವರೆ, ತಾವು ಹಿರಿಯ ಸಚಿವರಾಗಿದ್ದು ನಿಮ್ಮ ಇಲಾಖೆಯಲ್ಲಿ ಆಗುತ್ತಿರುವಂತಹ ಎರಡು ವರ್ಷಗಳ ಗೊಂದಲಗಳನ್ನು ಈ ಸದನದ ಸದಸ್ಯರುಗಳಾದ ನಾವುಗಳೆಲ್ಲರೂ ಸಹ ಅನುಭವಿಸುತ್ತಿದ್ದೇವೆ. ಇದರ ಜೊತೆಯಲ್ಲಿ ವ್ಯವಸ್ಥೆಯೂ ಸಹ ಅನುಭವಿಸುತ್ತಿದೆ, ಜನರು ಆ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇಲ್ಲಿ ನಿಮ್ಮ ಪೂರ್ವಸಿದ್ದತೆ ಏನೂ ಇರುವುದಿಲ್ಲ. ಈ ಬಗ್ಗೆ ಪೂರ್ವಾಲೋಚನೆಯೂ ಸಹ ಇಲ್ಲ, ವಿಚಾರಗಳು ಒಳ್ಳೆಯದು ಇರುತ್ತದೆ. ಆದರೆ ಒಳ್ಳೆಯ ವಿಚಾರಗಳನ್ನು ಅನುಷ್ಠಾನಗೊಳಿಸುವಾಗ ಪೂರ್ವಸಿದ್ದತೆಗಳನ್ನು ಮಾಡಿಕೊಳ್ಳಬೇಕಲ್ಲಾ, ಅದರ ಬಗ್ಗೆ ನಿಮ್ಮಲ್ಲಿ ಏನು ಯೋಚನೆಗಳು ಇಲ್ಲದೆ ಒಳ್ಳೆಯದನ್ನು ಮಾಡಬೇಕು ಎಂದು ಏನೋ ಬಯಸಿ ಮಾಡುವುದಕ್ಕೆ ಹೊರಟು ಇಡೀ ವ್ಯವಸ್ಥೆ ಗೊಂದಲಮಯವಾಗಿರುವುದನ್ನು ಕಾಣುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಇವರು ಗ್ರಾಮೀಣ ನೀರು ಸರಬರಾಜು ವಿಭಾಗ ಎಂದು ಮಾಡಿದರು. ಮೊದಲು ಅದು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಒಂದು ಭಾಗವಾಗಿತ್ತು. ಅವರು ಏನೋ ಮಾಡಿಕೊಂಡು ಇರುತ್ತಿದ್ದರು. ಅದನ್ನೇ ನೀವು strengthen

ಮಾಡಬೇಕಾಗಿತ್ತು. DPAR & Finance ನವರು ಅನೇಕರು ಅದನ್ನೇ strengthen ಮಾಡಿ ಎಂದು ಹೇಳಿದ್ದರು. ಆದರೆ ನೀವು ಒಂದು cabinet sub-committee ಮಾಡಿ ಇಲ್ಲಿ ತಾವು ಈ ಬಗ್ಗೆ ನಿರ್ಣಯ ಮಾಡಿಕೊಂಡು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಎಂದು ಅದನ್ನು ತಾವು ಬೇರೆ ಮಾಡಿದ್ದೀರಿ. ಇದರಿಂದ ಇವತ್ತು ಏನಾಗಿದೆ, ಕುಡಿಯುವ ನೀರಿನ ಅವ್ಯವಸ್ಥೆ ಹಿಂದಿನ ಆ ಯೋಜನೆಯನ್ನು ಯಾರು ಪೂರ್ಣಗೊಳಿಸುವವರು, ಹೊಸ ಯೋಜನೆಗೆ ಹಣಕಾಸಿನ ನೆರವಿಲ್ಲ. ಹಿಂದಿನ ಯೋಜನೆಯೂ ಮುಂದುವರಿಯುತ್ತಿಲ್ಲ. ಈ ಬೇಸಿಗೆಯಲ್ಲಿ ಕುಡಿಯುವ ನೀರಿನ ಹಾಹಾಕಾರ ಆಗುವುದಕ್ಕೆ ದೊಡ್ಡ ಕಾರಣ ಎಂದರೆ ಈ ಇಲಾಖೆಯಲ್ಲಿರುವಂತಹ ಗೊಂದಲವೆ ಕಾರಣವಾಗಿದೆ. ಎಲ್ಲಿಯತನಕ ಪೂರ್ವಸಿದ್ಧತೆಗಳು ಇಲ್ಲವೆಂದರೆ ಇವತ್ತಿನತನಕ ಅವರಿಗೆ ಒಬ್ಬರಿಗೂ ಸಂಬಳವಿಲ್ಲ. ಅದು ಹೋಗಲಿ ಎಂದರೆ ನನಗೆ ಗೊತ್ತಿರುವ ಹಾಗೆ Department code ಇರುತ್ತದೆಯಲ್ಲಾ, ಅದು ಸಹ ಅವರಿಗೆ ಕೊಡಲಿಲ್ಲ. ಅವರಿಗೆ ಆಫೀಸ್ ಇಲ್ಲ, ಅದು ಇದು ಬೇರೆ ವಿಷಯ. ನೀವು ಅಲ್ಲಿಗೆ ಯಾರನ್ನು posting ಮಾಡಿದ್ದೀರಿ, ಅವರಿಗೆ ಸಂಬಳವಿಲ್ಲ, Departmentನವರು ಒಂದು code ಅನ್ನು ಸಹ ಕೊಟ್ಟಿಲ್ಲ. ಅಲ್ಲಿ ಹಣವು ಖರ್ಚಾಗದೆ ಇವತ್ತು ಅವ್ಯವಸ್ಥೆಯಿಂದ ಹಾಗೆ ಉಳಿದಿರುವುದನ್ನು ನಾವು ನೋಡುತ್ತಿದ್ದೇವೆ. ಈ ರೀತಿಯಾದಂತಹ ಗೊಂದಲಗಳನ್ನು ಸೃಷ್ಟಿಸಿ ಜನರು ಇವತ್ತು ಕುಡಿಯುವ ನೀರಿಗೆ ಕಷ್ಟಪಡುವಂತಹ ಸ್ಥಿತಿ ಇದೆ. ಇದರ ಜೊತೆಗೆ ಇವರ ಗೊಂದಲದ ವ್ಯವಸ್ಥೆ ಇದೆ ಎಂದರೆ ನಾನು ಇಷ್ಟನ್ನೇ ಪ್ರಸ್ತಾಪಿಸುತ್ತೇನೆ. ನಾನು ಈ ಬಗ್ಗೆ ಮುಂದುವರೆಸಿ ಹೇಳುವುದಕ್ಕೆ ಬಯಸುತ್ತೇನೆಂದರೆ ಯಾವುದಕ್ಕೂ ಪೂರ್ವಸಿದ್ಧತೆ ಮತ್ತು ಪೂರ್ವಾಲೋಚನೆ ಏನೂ ಇಲ್ಲದೆ ಮಾಡುತ್ತಾರೆ ಎನ್ನುವುದಕ್ಕೆ ನಂಜಯ್ಯನಮಠ್ ಕಮಿಟಿಯ ವರದಿ ಎಂದು ಹೇಳಿ ಪಂಚಾಯಿತಿಯನ್ನು ಹೆಚ್ಚು ಮಾಡುವುದಕ್ಕೆ ವರದಿಯನ್ನು ತರಿಸಿಕೊಂಡರು. ಮಾನ್ಯ ರಮೇಶ್ ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ವಿಕೇಂದ್ರೀಕರಣ ವ್ಯವಸ್ಥೆಗೆ ಹೇಗೆ ಶಕ್ತಿಯನ್ನು ಕೊಡುವುದು ಎಂದು ಸಮಿತಿಯನ್ನು ಮಾಡಿದರು. ಈ ಎರಡು ಸಮಿತಿಗಳನ್ನು

ಮಾಡಿರುವುದೇ ಮೊದಲನೆಯ ತಪ್ಪು. ರಮೇಶ್ ಕುಮಾರ್‌ರವರ ಅಧ್ಯಕ್ಷತೆಯಲ್ಲಿರುವಂತಹ ಸಮಿತಿಗೆ ನಂಜಯ್ಯನಮಠ್ ಸಮಿತಿಗೆ contradictory ನೋಡಿ ಅವರು ದೊಡ್ಡ ಪಂಚಾಯತಿ ಇರಬೇಕೆಂದು ಹೇಳಿದರೆ ನಂಜಯ್ಯನ ಮಠ್‌ರವರು ಸಣ್ಣ ಪಂಚಾಯತಿ ಎಂದು ಮಾಡಿದರು. ಈಗ ರಮೇಶ್ ಕುಮಾರ್‌ರವರ ಕಮಿಟಿಯ ಶಿಫಾರಸ್ಸು ಚರ್ಚೆಗೆ ಬರಲಿಲ್ಲ. ಆ ಬಗ್ಗೆ ಚರ್ಚೆಗೂ ಸಹ ತರಲಿಲ್ಲ. ಅದನ್ನು ಜಾರಿಗೊಳಿಸುವಂತಹ ಇಚ್ಛಾಶಕ್ತಿ ತೋರಿಸಲಿಲ್ಲ. ನಂಜಯ್ಯನಮಠ್ ಕಮಿಟಿಯ ವರದಿಯನ್ನು ತಾವು ಜಾರಿಗೊಳಿಸಿದಿರಿ. ಪಂಚಾಯತಿಗಳನ್ನು ಜಾಸ್ತಿ ಮಾಡಿ ನೀವು ಅದನ್ನು ಜಾರಿ ಮಾಡಿದ್ದೀರಿ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ತಾವು ನಂಜಯ್ಯನಮಠ್ ಕಮಿಟಿಯ ಬಗ್ಗೆ ತಾವು refer ಮಾಡಿದ್ದೀರಲ್ಲಾ, ನಂಜಯ್ಯನ ಮಠ ಕಮಿಟಿ ಪುನರ್ ವಿಂಗಡಣೆಯ ಬಗ್ಗೆ ಮಾಡಿರುವಂತಹ ಸಮಿತಿಯಾಗಿದೆ. ಮಾನ್ಯ ರಮೇಶ್ ಕುಮಾರ್ ರವರ ಸಮಿತಿ ನಮ್ಮ ಪಂಚಾಯತ್ ರಾಜ್ ಒಟ್ಟು ಬದಲಾವಣೆಗೆ ಮತ್ತು ಶಕ್ತಿ ತುಂಬುವುದಕ್ಕೆ ನಮ್ಮ ಅನುಭವದ ಹಿನ್ನೆಲೆಯೊಳಗಡೆ ಸಮಗ್ರವಾಗಿರುವಂತಹ ಕಾನೂನು ತಿದ್ದುಪಡಿಗಳ ಅವಶ್ಯಕತೆ ಇದೆ. ಆ ತಿದ್ದುಪಡಿಗಳನ್ನು ಮಾಡುವುದಕ್ಕೆ ಅವರು ಶಿಫಾರಸ್ಸು ಮಾಡಬೇಕು ಮತ್ತು ಅಧ್ಯಯನ ಆಡಿ ಮಾರ್ಗದರ್ಶನ ಮಾಡಬೇಕೆಂದು ಹೇಳಿ ಆ ಕಮಿಟಿಯನ್ನು ನೇಮಿಸಿದ್ದೇವು. ಅದಕ್ಕೆ ಮತ್ತು ಇದಕ್ಕೆ ಏನೂ ಸಂಬಂಧಗಳಿಲ್ಲ. ಆಮೇಲೆ ನೀವು ಮತ್ತೆ ನನಗೆ ಹೇಳಿದ್ದೀರಿ. ಕಳೆದ ಸದನದಲ್ಲಿ ನಾನು ಚುನಾವಣೆಗೆ ಸಂಬಂಧಿಸಿದಂತೆ ಕೆಲವನ್ನು ತಂದಾಗ ಸ್ಪಷ್ಟಗೊಳಿಸಿದ್ದೇನೆ. ನಾನು ಮುಂದಿನ ಸೆಷನ್ ಒಳಗಡೆ ರಮೇಶ್‌ಕುಮಾರ್‌ರವರ ವರದಿಯ ಹಿನ್ನೆಲೆಯೊಳಗಡೆ ನಾವು ಏನು ಸಮಗ್ರವಾಗಿರುವಂತಹ ತಿದ್ದುಪಡಿಗಳನ್ನು ಮಂಡಿಸಬೇಕೆಂದು ಮಾಡಿದ್ದೇವೆ, ಅದನ್ನು ಮಂಡಿಸುತ್ತೇವೆ ಎಂದು ಹೇಳಿದ್ದೆ. ಈ ನಮ್ಮ ಹೊಸ ಪಂಚಾಯತಿಗಳ ತಂಡ ಬಂದ ಮೇಲೆ ಅದು ಮೊದಲನೆ ತಿಂಗಳಿನೊಳಗಡೆಯೇ ಆ ಕಾನೂನನ್ನು ಮಾಡಬೇಕೆಂದು ನಮ್ಮ

ಸದಿಚ್ಛೆಯಾಗಿದೆ. ನಾನು ಈ ಸದಸನದೊಳಗಡೆ ಇಲ್ಲಿಯೇ ಆಗಲಿ, ಬೆಂಗಳೂರಿನಲ್ಲಾಗಲಿ, ಅದನ್ನು ಮಂಡಿಸುತ್ತೇವೆ ಎನ್ನುವಂತಹ ಮಾತನ್ನು ಅವತ್ತು ಹೇಳಿದ್ದೆ, ಇವತ್ತು ಸಹ ನಾನು ಆ ಮಾತಿಗೆ ಬದ್ದನಾಗಿದ್ದೇನೆ. ಮತ್ತೆ ನೀವು ಆ ಮಾತನ್ನು ಹೇಳಿದ್ದೀರಲ್ಲಾ, ಅದರಲ್ಲಿ ನಿಮ್ಮದು ದುರುದ್ದೇಶ ಅಷ್ಟು ತೋರಿಸಿತು. ನಂಜಯ್ಯನಮಠ್ ಕಮಿಟಿಯನ್ನು you are all beneficiaries of it ನಾವು ಆ time ನಲ್ಲಿ ಮಾಡಲೇಬೇಕಾಗಿತ್ತು, ಅದಕ್ಕಾಗಿ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಒಂದು ಸಮಗ್ರವಾದಂತಹ ಪೂರ್ವಸಿದ್ಧತೆ ಇಲ್ಲದೆ ಇರುವಂತಹ ಯೋಜನೆಯೇ ಈ ರೀತಿ ಇದ್ದು ಹಾಜ್ ಪಾಜ್ ಆಗಿ ಮಾಡುತ್ತಿರುವುದು ನಿಮ್ಮದು ಆಗಿದೆ. ಎರಡು ಸಮಿತಿಯು ಸಂಬಂಧ ಇಲ್ಲ ಎಂದೂ ಅಲ್ಲ, ಒಂದಕ್ಕೊಂದು ಪೂರಕವಾದಂತಹ ಸಂಬಂಧವು ಇದ್ದೇ ಇದೆ. De-limitationಗೂ ......

ಶ್ರೀ ಹೆಚ್.ಕೆ. ಪಾಟೀಲ್:- That is De-Limitation Committee. Nothing to do with Act amendment.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈ amendmentಗಳು ......

ಶ್ರೀ ಬಸವರಾಜ ಬೊಮ್ಮಾಯಿ (ಕುಷ್ಟಗಿ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರಾದ ಹೆಚ್.ಕೆ. ಪಾಟೀಲ್‌ರವರು ಏನು ಹೇಳಿದರೆಂದರೆ ಅದು De-Limitation Committee ಇದು ಸಂಪೂರ್ಣವಾಗಿ ಪುನರ್ ರಚನೆ ಮತ್ತು ಅಭಿವೃದ್ಧಿಗೆ ಸಂಬಂಧ ಇಲ್ಲ ಎಂದು ತಾವು ಏನು ಹೇಳುತ್ತಿದ್ದೀರಿ, ಇಲ್ಲಿ ಆ ಬಗ್ಗೆ ನೇರವಾಗಿ ಸಂಬಂಧ ಇದೆ. Basic ಸಂಬಂಧ ಇದೆ. ಏಕೆಂದರೆ, ಇವತ್ತು ಇಡೀ ರಾಷ್ಟ್ರದಲ್ಲಿ ಚರ್ಚೆ ನಡೆಯುತ್ತಿರುವುದು 73rd amendment ಆದ ಮೇಲೆ ಯಾವ administrative sizeನ ಪಂಚಾಯಿತಿ ಬೇಕೆನ್ನುವುದು ಇಡೀ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ನೀವು structure ಅನ್ನು ಸರಿ ಮಾಡದೆಯೇ ಹೇಗೆ reform ಮಾಡುತ್ತೀರಿ? ಒಂದು reform ಆಗಬೇಕಾದರೆ ಇಲ್ಲಿ ಎರಡು important ಇದೆ. (1) Structure ಮತ್ತೊಂದು content. ಇಲ್ಲಿ ನೀವು content ಬೇರೆ, structure ಬೇರೆ ಎಂದು ಹೇಳುತ್ತಿದ್ದೀರಿ. ಇವತ್ತು ಬೇರೆ ಬೇರೆ

ರಾಜ್ಯಗಳಲ್ಲಿ ದೊಡ್ಡ ಪಂಚಾಯಿತಿ ಆದರೆ ಒಳ್ಳೆಯದು ಎಂದು ಅವರು experience ಇದೆ. ನೀವು ಸಣ್ಣ ಪಂಚಾಯಿತಿ ಮಾಡಿದರೆ ಒಳ್ಳೆಯದು ಎಂದು ನಿಮ್ಮ experience ಇದೆ. ಇದರಿಂದ Administrative inconvenience ಎಷ್ಟು ಆಗುತ್ತಿದೆ. ನೀವು ಈ ಪಂಚಾಯತಿಗಳಿಗೆ ಎಷ್ಟು staff ಕೊಡುವುದಕ್ಕೆ ಸಾಧ್ಯವಿದೆ. ಎಷ್ಟು ಇಂಜಿನಿಯರ್‌ಗಳನ್ನು ಕೊಡುವುದಕ್ಕೆ ಸಾಧ್ಯವಿದೆ. ನೀವು ಹಣವನ್ನು ಜಾಸ್ತಿ ಕೊಟ್ಟರೆ ಅದನ್ನು ಖರ್ಚು ಮಾಡುವಂತಹ administrative infrastructure ಎಷ್ಟು ಕೊಡುವುದಕ್ಕೆ ಸಾಧ್ಯವಿದೆ. ಇದು ಮೂಲಭೂತವಾದ ಪ್ರಶ್ನೆ ಇದೆ. ಇದನ್ನು ನಾವು ಸರಿಮಾಡಿಕೊಳ್ಳದೇ ಇದ್ದರೆ ನೀವು ಯಾವ reforms ತಂದರೆ ಏನಾಗುತ್ತದೆ. There is a direct connection between De-limitation or else restructuring with the reforms.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇಲ್ಲಿ ನೇರ ಸಂಬಂಧ ಇದ್ದೇ ಇದೆ. ಮಾನ್ಯ ಸದಸ್ಯರಾದ ಬಸವರಾಜ ಬೊಮ್ಮಾಯಿಯವರು ಹೇಳಿದ್ದಾರೆ. ಆ ಬಗ್ಗೆ ನಾನು ವಿಸ್ತರಿಸುವುದಿಲ್ಲ. ಈ ಎರಡು ಸಮಿತಿಗಳನ್ನು ಮಾಡಿ, ಗೊಂದಲಗಳನ್ನು ಸೃಷ್ಟಿ ಮಾಡಿ ಅದರ ಬಗ್ಗೆ ಪೂರ್ಣವಾದಂತಹ ಒಂದು ಇಚ್ಛಾಶಕ್ತಿಯನ್ನು ತೋರಿಸಿ ಪರಿವರ್ತನೆಯನ್ನು ತರುವುದಕ್ಕೆ ಏನೋ ಪ್ರಯತ್ನಗಳನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ, ಏನು ಮಾಡುತ್ತೀರೆಂದು ನೋಡೋಣ. ಈ ಅಧಿವೇಶನದಲ್ಲಿ ಹೇಗೆ ಬರುತ್ತದೆ, ಏನು ಚರ್ಚೆಯಾಗುತ್ತದೆ ಏನೆಂದು ಗೊತ್ತಾಗುತ್ತದೆ. ಅದನ್ನು ನಾವು ನಿಶ್ಚಿತವಾಗಿ ಸ್ವಾಗತಿಸುತ್ತೇವೆ. ಅದು ಆಗಬೇಕು, ಆದರೆ ಸಮಗ್ರವಾದಂತಹ ಕಲ್ಪನೆ ಇಲ್ಲದೆ ಎರಡು ಸಮಿತಿಗಳನ್ನು ಮಾಡಿ ಹೇಗೆ ಅರ್ಧಂಬರ್ಧ ಜಾರಿಗೊಳಿಸಿದ್ದೀರಿ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಗ್ರಾಮೀಣ ನೀರು ಸರಬರಾಜು ವಿಭಾಗ ಎಂದು ಮಾಡಿದ್ದೀರೋ ಗೊಂದಲಗಳನ್ನು ಹಾಗೆಯೇ ಇದೊಂದು ಗೊಂದಲದ ವಿಷಯವಾಗಿದೆ. ನಿನ್ನೆಯೂ ಸಹ ಅನೇಕ ಸದಸ್ಯರು ಪ್ರಸ್ತಾಪ ಮಾಡಿದಾಗ ಗಮನ ಸೆಳೆಯುವ ಸೂಚನೆಯಲ್ಲಿ ಉತ್ತರವನ್ನು ಕೊಟ್ಟರು. PMGSY ವಿಭಾಗವನ್ನು PRD ಒಳಗಡೆ ಸೇರಿಸುವಂತಹ ಒಂದು ಯೋಚನೆ. PMGSY ವಿಭಾಗ ರಸ್ತೆಗಳನ್ನು ಮಾಡಿಕೊಂಡು ಇದ್ದರು. ಇವರಿಗೆ workload

ಕಡಿಮೆಯಾಗಿದೆ ಎಂದು ಅದನ್ನು ಮತ್ತೆ ಇಲ್ಲಿ ಸೇರಿಸುವಂತಹ ಒಂದು ಯೋಚನೆಯನ್ನು ಮಾಡಿ ಅದು ಒಂದು ಯಾವುದೋ ರೀತಿಯಲ್ಲಿ ಗೊಂದಲಗಳು ಸೃಷ್ಟಿಯಾಗುವುದಕ್ಕೆ ಈಗ ಪ್ರಾರಂಭವಾಗಿದೆ. ಏಕೆಂದರೆ ಆ ಬಗ್ಗೆ ಪೂರ್ಣ ನಿರ್ಣಯ ಆಗಿ ಅನುಷ್ಠಾನಕ್ಕೆ ಬರುತ್ತಿಲ್ಲ. ಹಾಗಾಗಿ ಆ ಗೊಂದಲಗಳಿಗೆ ಪ್ರಾರಂಭಕ್ಕೆ ತಾವು ಬೀಜವನ್ನು ಹಾಕಿದ್ದೀರಿ. ಅದು ಇನ್ನೇನು ಹೆಮ್ಮರವಾಗಿ ಸಮಸ್ಯೆಗಳನ್ನು ನಿರ್ಮಾಣ ಮಾಡುತ್ತದೆಯೋ ನೋಡೋಣ. ನಿಮ್ಮ ಹಿರಿತನದಿಂದ ನೀವು ಆಡಳಿತದಲ್ಲಿ ನಿಮ್ಮ ಇಚ್ಛಾಶಕ್ತಿಯನ್ನು ತೋರಿಸಬೇಕು. ಆಡಳಿತದಲ್ಲಿ ಇಷ್ಟು ಸಮಸ್ಯೆಗಳು ಪಂಚಾಯಿತಿ ಮಟ್ಟದಲ್ಲಿ ಆಯಿತು. ಇದನ್ನು ಎದುರಿಸುವಂತೆ ಆಗಿದೆ. ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿರುವಂತಹ ಸದಸ್ಯರು ಅವರು ಓಡಿಹೋಗುವಂತಹದ್ದು ಬಾಕಿ ಇದೆ. ಅಂತಹ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಇ–ಸ್ವತ್ತಿನ ಸಣ್ಣದು ಒಂದು ಸಮಸ್ಯೆ. ಇದನ್ನು ತಂದು ಏನೇನು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸಮಸ್ಯೆಗಳು ಆಗಿದೆ ಎಂದರೆ ಒಬ್ಬರ ಮನೆಯಲ್ಲಿ ಅವರಿಗೆ ಮನೆ ನಂಬರ್ ಅನ್ನು ಕೊಡಲಿಕ್ಕಾಗುತ್ತಿಲ್ಲ. ಒಬ್ಬರು ಸತ್ತರೆ ವಾಸ ಮಾಡುವುದಕ್ಕೆ ಆಗುತ್ತಿಲ್ಲ. ಎ–ಬಿ ಮಾಡಿಕೊಡುವುದಕ್ಕಾಗುತ್ತಿಲ್ಲ. ಕಳೆದ ಎರಡು ವರ್ಷಗಳಿಂದ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಜನರು ಕಷ್ಟವನ್ನು ಅನುಭವಿಸುತ್ತಿರುವುದನ್ನು ನೋಡಿದರೆ ನಿಮ್ಮಂತಹ ಹಿರಿಯ ಸಚಿವರಿಗೆ ಉತ್ತರವನ್ನು ಕಂಡುಹಿಡಿಯುವುದಕ್ಕೆ ಆಗಿಲ್ಲವೆಂದರೆ ಹೇಗೆ?

ಅಧ್ಯಕ್ಷರು:– ಇ–ಹಂತ ಎಂದು ಏತಕ್ಕಾಗಿ ಕೊಟ್ಟರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇ–ಸ್ವತ್ತು ಎಂದರೆ ಎಲ್ಲವೂ computerನಲ್ಲಿ ಬೇರೆ ಬೇರೆ E-Governance ಇದೆಯಲ್ಲಾ, ಅದು ಇದರ ಭಾಗವಾಗಿದೆ. ಈಗ software develop ಮಾಡಿಕೊಡುವವರ ಅನೇಕ ಏಜೆನ್ಸಿಗಳು ಇವೆ. ನಮ್ಮದು ಇದೆ. ಎಲ್ಲರೂ ಏಜೆನ್ಸಿ ಮಾಡಿಕೊಟ್ಟು...

ಅಧ್ಯಕ್ಷರು:– ನಮ್ಮ ಸರ್ಕಾರದ ದೊಡ್ಡ ಕಾರ್ಯದರ್ಶಿಗಳೇ ಇದ್ದಾರೆ.

ಶ್ರೀ ಬಿ.ವೈ. ರಾಘವೇಂದ್ರ:- ಮಾನ್ಯ ಅಧ್ಯಕ್ಷರೆ, ಇ-ಸ್ವತ್ತಿನ ವಿಷಯದ ಬಗ್ಗೆ ಸನ್ಮಾನ್ಯ ಹೆಗಡೆಯವರು ಏನು ಪ್ರಸ್ತಾಪ ಮಾಡಿದರು, ಮೊದಲು ಕಂದಾಯ ಕಟ್ಟುತ್ತಿದ್ದೆವು.

ಅಧ್ಯಕ್ಷರು:- ನಿಮಗೆ ಒಂದು ದಿವಸ ಅವಕಾಶ ಕೊಡುತ್ತೇನೆ, ಆಗ ಮಾತನಾಡಿ.

ಶ್ರೀ ಬಿ.ವೈ. ರಾಘವೇಂದ್ರ:- ಸರಿ ಅಧ್ಯಕ್ಷರೆ, ಈಗ ಅದರಿಂದ ಎಷ್ಟು ತೊಂದರೆಯಾಗಿದೆ ಎಂದರೆ, ಈ ಗ್ರಾಮಠಾಣಾದಲ್ಲಿ ಮನೆ ಕಟ್ಟಿದವರಿಗೆ ಖಾತೆ extract ಸಿಗುತ್ತಿಲ್ಲ. ಇದರಿಂದ ಸಾಕಷ್ಟು ಅವರಿಗೆ ತೊಂದರೆಯಾಗುತ್ತಿದೆ. ಅವನು ಮುಂದಿನ ದಿನದಲ್ಲಿ ಏನೂ ಮಾಡುವ ಹಾಗಿಲ್ಲ.

ಅಧ್ಯಕ್ಷರು:- ಅದಕ್ಕೆ ಇ-ಸ್ವತ್ತಿನ ತಂತ್ರಜ್ಞಾನವನ್ನು ಸರ್ಕಾರದಲ್ಲಿ ಕುಳಿತು ಕೆಲವರು ಮಾಡುತ್ತಾರಲ್ಲಾ, ಅವರನ್ನು ಕರೆದುಕೊಂಡು ಹೋಗಿ ಆ ಪಂಚಾಯಿತಿಯಲ್ಲಿ ಕೂರಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಧಿಕಾರಿ ವರ್ಗದವರ ಬಗ್ಗೆ ನಮಗೆ ಗೊತ್ತಿದೆ. ಆದರೆ ಸಚಿವರು ಈಗಿರುವವರು ಹಿರಿಯ ಸಚಿವರು. ಹೊಸದಾಗಿ ಯಾರಾದರೂ ರಾಜ್ಯ ಸಚಿವರಾದರೆ ಮೊದಲನೆ ಬಾರಿ ಸಚಿವರಾದವರು ಇಂಥ ತಪ್ಪು ಮಾಡಿದ್ದರೆ ಅವರಿಗೆ ಸಲಹೆ ರೀತಿಯಲ್ಲಿ ಹೇಳಬಹುದು. ಈಗ ಆರೋಪದ ರೀತಿಯಲ್ಲಿ ಏಕೆ ಹೇಳುತ್ತಿದ್ದೇವೆಂದರೆ ಇಷ್ಟು ಹಿರಿಯ ಅನುಭವವುಳ್ಳ ಹೆಚ್.ಕೆ. ಪಾಟೀಲರು ಗ್ರಾಮೀಣಾಭಿವೃದ್ಧಿ ಅಂಥ ಇಲಾಖೆಯಲ್ಲಿ ಮಾಡುತ್ತಿರುವ ಗೊಂದಲಗಳು ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ, ಸಮಸ್ಯೆಗಳ ಮೇಲೆ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಆದರೆ ನಾನು ನಿನ್ನೆ ಹೇಳಿದಂತೆ ಅವರಿಗೆ ಅವರ ಇಲಾಖೆಯನ್ನು showcasing ಹೇಗೆ ಮಾಡಬೇಕೆಂದು ಗೊತ್ತಿದೆ. ಹಾಗಾಗಿ ಅವರು ಮುಂದುವರೆಯುತ್ತಿದ್ದಾರೆ. ಇಲ್ಲದಿದ್ದರೆ ಗೊಂದಲಗಳನ್ನೇ ನೋಡಿದ್ದಿದ್ದರೆ ನಿಜವಾಗಲೂ ಬಹಳ ದೊಡ್ಡ ಸಮಸ್ಯೆಗಳಾಗುತ್ತಿವೆ. ಇ-ಸ್ವತ್ತಿನ ಸಮಸ್ಯೆ ಬಗ್ಗೆ ನಾನು ಆಮೇಲೆ ವಿಸ್ತರಿಸುತ್ತೇನೆ. ಆದರೆ ಇದರಿಂದಾಗಿ ಪ್ರತಿ ಪಂಚಾಯತ್‌ನಲ್ಲಿ 500, 800, 1000 ಗಟ್ಟಲೆ

ಕೇಸುಗಳು ಪೆಂಡಿಂಗ್ ಇವೆ. ನಿಮ್ಮದು ಈಗ 6000 ಪಂಚಾಯತ್‌ಗಳಾಗಿವೆ. ಪಂಚಾಯತ್‌ನಲ್ಲಿ ಕೇಸು ಪೆಂಡಿಂಗ್ ಇವೆ. ಇದರ ಬಗ್ಗೆ ಯಾರು ವರದಿ ಮಾಡುವುದಿಲ್ಲವೆಂದು ಕಾಣುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್:- ಈಗ ನೀವು 500, 800 ಕೇಸುಗಳು ಪೆಂಡಿಂಗ್ ಇವೆ ಎಂದು ಹೇಳಿದರಲ್ಲಾ, ಅದರಲ್ಲಿ ನಾಲ್ಕು ಪಂಚಾಯತ್‌ಗಳ ಹೆಸರುಗಳನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನನ್ನ ತಾಲ್ಲೂಕಿನಲ್ಲಿ ಶಿರಸಿ ಇರಬಹುದು, ಸಿದ್ಧಾಪುರ ಇರಬಹುದು, 45 ಗ್ರಾಮ ಪಂಚಾಯಿತಿಗಳ ಹೆಸರುಗಳನ್ನೂ ಹೇಳುತ್ತೇನೆ. ಬೇಕಾದರೆ ಬರೆದುಕೊಂಡು ನೋಡಿ.

ಶ್ರೀ ಹೆಚ್.ಕೆ. ಪಾಟೀಲ್:- ನಾಲ್ಕು ಪಂಚಾಯಿತಿಗಳ ಹೆಸರುಗಳನ್ನು ಹೇಳಿ. ನಾನು ಉತ್ತರ ಹೇಳುವಾಗ ಏನೆಂದು ತಿಳಿದುಕೊಂಡು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈಗ ನಿಮಗೆ ನಾಲ್ಕು ಅಲ್ಲ, 45 ಗ್ರಾಮ ಪಂಚಾಯತ್‌ಗಳ ಹೆಸರು ಹೇಳುತ್ತೇನೆ.

ಅಧ್ಯಕ್ಷರು:- ಈಗ ನಾಲ್ಕು ಪಂಚಾಯಿತಿಗಳ ಹೆಸರು ಹೇಳುವುದಕ್ಕೆ ಹೇಳಿದ್ದಾರೆ, ನಾಲ್ಕು ಪಂಚಾಯಿತಿಗಳ ಹೆಸರುಗಳನ್ನು ಹೇಳಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:- ನಾಲ್ಕು ಬೇಡ, ಒಂದು ಪಂಚಾಯಿತಿ ಹೆಸರು ಹೇಳಿ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:- ಇವರ ತರಹ ಹಾರಿಕೆ ಉತ್ತರ ಕೊಟ್ಟು ಹೋಗಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ:- ಸೋಮವಾರ ಅವರು ಯಾವ್ಯಾವ ಪಂಚಾಯಿತಿಯಲ್ಲಿ ಇ-ಸ್ವತ್ತು ಬಾಕಿ ಇದೆ ಎಂದು ಉತ್ತರ ಕೊಡುವಾಗ ಹೇಳಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಧ್ಯಕ್ಷರೆ ನಾಲ್ಕು ಪಂಚಾಯಿತಿಗಳ ಹೆಸರುಗಳನ್ನು ಹೇಳುತ್ತೇನೆ. ಆದರೆ ಹೆಚ್.ಕೆ. ಪಾಟೀಲರವರ ಬುದ್ಧಿವಂತಿಕೆ ಇರುವುದೇ ಇಂಥದ್ದರಲ್ಲಿ. ನಾನು ನಾಲ್ಕು ಪಂಚಾಯಿತಿಗಳ ಹೆಸರುಗಳನ್ನು ಹೇಳುತ್ತೇನೆ. ಆದರೆ ನಿಮ್ಮ ಬುದ್ಧಿವಂತಿಕೆ ಏನೆಂದರೆ ಸೋಮವಾರ, ಯಾವಾಗಲಾದರೂ ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್:- ನಮ್ಮ ಬುದ್ಧಿವಂತಿಕೆ ಬಗ್ಗೆ ನೀವೇಕೆ ಅಸೂಯೆ ಪಡುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನನಗೆ ಅಸೂಯೆ ಇಲ್ಲ, ನಿಮ್ಮ ಬುದ್ಧಿವಂತಿಕೆಯನ್ನು ಮೆಚ್ಚಿ ಮಾತನಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್:- ವಿರೋಧ ಪಕ್ಷದಲ್ಲಿ ನೀವು ಜವಾಬ್ದಾರಿ ಸ್ಥಾನದಲ್ಲಿ ನಿಂತು ಹೇಳುತ್ತಿದ್ದೀರಿ. ಹೇಳುವಾಗ ಅದಕ್ಕೆ ನಾವು ಸ್ಪಂದಿಸಬೇಕು. ಸರ್ಕಾರ ಸ್ಪಂದಿಸಬೇಕು. ಅದರಿಂದ ಜನರಿಗೆ ಒಳ್ಳೆಯದಾಗಬೇಕೆಂಬ ಸದಿಚ್ಛೆ ಆಗಿದ್ದರೆ ನೀವು ಹೇಳಿ. ಆ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ನನ್ನ ಕಡೆಯಿಂದ ಆಗಲಿಲ್ಲ, ನಿಮ್ಮ ಮಾರ್ಗದರ್ಶನ ಕೇಳುತ್ತೇನೆ. ನಮ್ಮ ಕಡೆಯಿಂದಲೂ ಆಗಲಿಲ್ಲ, ಅಧ್ಯಕ್ಷರ ಮಾರ್ಗದರ್ಶನ ಕೇಳೋಣ. ಅದರಂತೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಧ್ಯಕ್ಷರೆ, ನಾಲ್ಕು ಪಂಚಾಯಿತಿಗಳ ಹೆಸರುಗಳನ್ನು ಹೇಳಿ ಎಂದು ನೀವು ಅಪೇಕ್ಷೆ ಪಟ್ಟಿದ್ದೀರಿ, ನಾನು 45 ಪಂಚಾಯಿತಿಗಳ ಹೆಸರುಗಳನ್ನು ಬೇಕಾದರೆ ಹೇಳುತ್ತೇನೆ. ಶಿರಸಿ ತಾಲ್ಲೂಕಿನ ಬೈರುಂಬೆ ಪಂಚಾಯಿತಿ ಎಂದು ಇದೆ, ಅವರು ಬಹಳ ವರ್ಷಗಳಿಂದ represent ಮಾಡಿದ್ದಾರೆ. ಹುಲೇಕಲ್ ಪಂಚಾಯಿತಿ ಎಂದು ಇದೆ. ಬೈರುಂಬೆ

ಈಗ ತಾರಗೋಡು, ಬೈರುಂಬೆ ಎಂದು ಎರಡು ಪಂಚಾಯಿತಿಗಳಾಗಿವೆ. ಹುಲೇಕಲ್ ಮತ್ತು ಸೋಂದಾ ಎಂದು ಎರಡು ಪಂಚಾಯಿತಿಗಳಾಗಿವೆ. ಸಂಪಗಂಡ ಮತ್ತು ಜಾನ್‌ಮನೆ ಪಂಚಾಯತ್ ಎಂದು ಎರಡು ಪಂಚಾಯತ್ ಇದೆ. ಹೇರೂರಿನ ಅಣಲೆಬೈಲು ಪಂಚಾಯಿತಿ ಎಂದು ಇದೆ. ಕಾನ್‌ಸೂರು ಪಂಚಾಯತ್ ಇದೆ.

ಅಧ್ಯಕ್ಷರು:- ಸಾಕು ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇನ್ನೊಂದು ನಾಲ್ಕು ಪಂಚಾಯಿತಿಗಳ ಹೆಸರುಗಳನ್ನು ಹೇಳುತ್ತೇನೆ. 45 ಪಂಚಾಯಿತಿಗಳ ಹೆಸರುಗಳನ್ನು ಹೇಳುತ್ತೇನೆ. ನೀವು ಸಾಕು ಮಾಡಿ ಎಂದರೆ ಸಾಕು ಮಾಡುತ್ತೇನೆ. ನನಗೆ ನಾಲ್ಕು ಪಂಚಾಯಿತಿಗಳ ಹೆಸರುಗಳು ಗೊತ್ತಿದೆಯೊ ಇಲ್ಲವೋ ಎಂದು ನೀವ್ಯಾರೂ ಅಂದುಕೊಂಡುಬಿಟ್ಟರೆ ಎಂದು ನಾನು ಹೆಸರುಗಳನ್ನು ಹೇಳುತ್ತಿದ್ದೇನೆ. ಈ ರೀತಿ ಇ-ಸ್ವತ್ತಿನಿಂದ ಸಮಸ್ಯೆಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಗೊಂದಲಗಳ ಸೃಷ್ಟಿ ಹೇಗಾಗುತ್ತಿದೆ ಎನ್ನುವುದಕ್ಕೆ ಇದೆಲ್ಲಾ ಉದಾಹರಣೆ ಹೇಳುತ್ತಿದ್ದೇನೆ. ಇದರ ಜೊತೆಯಲ್ಲಿ ಗ್ರಾಮ ವಿಕಾಸ ಯೋಜನೆ ಎಂದು ನಮಗೆಲ್ಲಾ ಪುಸ್ತಕವನ್ನು ಮಾಡಿಕೊಟ್ಟಿದ್ದಾರೆ. ನಿನ್ನೆ ಸಿ.ಟಿ ರವಿಯವರು ಒಂದು ಪ್ರಶ್ನೆಯನ್ನು ಕೇಳಿ, ಅದಕ್ಕೆ ಕೆಲವು ತಿದ್ದುಪಡಿ ಆಗಿ ನೀವು ಗಮನ ಸೆಳೆಯುವುದರೊಳಗೆ ಅದನ್ನು ತಿದ್ದುಪಡಿ ಮಾಡಿರುವುದನ್ನು ನಾನು ನೋಡಿದ್ದೇನೆ, ಅದನ್ನು ಸ್ವಾಗತಿಸುತ್ತೇನೆ, ಆದರೆ ಈ ಗ್ರಾಮ ವಿಕಾಸ ಯೋಜನೆ ಬಗ್ಗೆ ಮಾರ್ಗದರ್ಶಿ ಕೊಟ್ಟು ಅವರು ಭಾಷಣ ಮಾಡಲಿಕ್ಕೆ ಶುರು ಮಾಡಿ ಒಂದೂವರೆ ವರ್ಷಗಳಾಯಿತು. ಒಂದೂವರೆ ವರ್ಷಗಳಿಂದ ಗ್ರಾಮ ವಿಕಾಸ ಎಂದು ಮಾತನಾಡುತ್ತಲೇ ಇದ್ದಾರೆ. ಇನ್ನು ಗ್ರಾಮಗಳನ್ನು ಆಯ್ಕೆ ಮಾಡಲಿಕ್ಕಾಗಲಿಲ್ಲ, ಏಕೆಂದರೆ ಗೈಡ್‌ಲೈನ್ clear ಇಲ್ಲ. ಈಗ ಅಂತೂ ನಿನ್ನೆ ಗಮನ ಸೆಳೆಯುವ ಸೂಚನೆ ಮೂಲಕ ಅದೇನೋ ಗೈಡ್‌ಲೈನ್ clear ಆಗಿದೆ ಎಂದು ಈಗ ಕೊಟ್ಟಿದ್ದಾರೆ. ಇನ್ನು ಮೇಲೆ ಅದಕ್ಕೆ ಶುರು ಮಾಡಬೇಕು. ಯೋಜನೆಗಳನ್ನು ಘೋಷಿಸುವುದು, ಅದು ಅನುಷ್ಠಾನಕ್ಕೆ ಬರಲಿಕ್ಕಾಗದಂತೆ ಗೊಂದಲಗಳನ್ನು ಸೃಷ್ಟಿ ಮಾಡುವುದನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ

ನಾವು ಕಾಣುತ್ತಿದ್ದೇವೆ. ಆದರೆ ಈ ಮಧ್ಯದಲ್ಲಿ .. ಆಮೇಲೆ ನೀವು ಹೇಳಿ, ನಾನು ಮಾತನಾಡಿ ಮುಗಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್:– ಏಕೆಂದರೆ ನೀವು technically ಬಹಳಷ್ಟು ಸ್ಪಷ್ಟವಾಗಿ ಮಾತನಾಡುತ್ತಿದ್ದೀರಿ. ನಾನು ಗಮನ ಸೆಳೆಯುವ ಸೂಚನೆ ಸಲುವಾಗಿ ಗೈಡ್‌ಲೈನ್ ಮಾಡಿದ್ದೀರಿ ಎಂದು ಹೇಳಿದ್ದೀರಿ. ಆ ಗ್ರಾಮ ವಿಕಾಸ ಪುಸ್ತಕ ಇದೆಯೆಲ್ಲಾ ಅದನ್ನು ನೋಡಿ, ನಾವು ಗಮನ ಸೆಳೆಯುವ ಸೂಚನೆ ಬಂದಾಗ, ಪ್ರಶ್ನೆ ಬಂದಾಗ, Adjournment motion ಬಂದಾಗ ಅದನ್ನೇನು ಬದಲಾವಣೆ ಮಾಡಿದ್ದೇವೆಯೋ ಅಥವಾ ಗೈಡ್‌ಲೈನ್ಸ್ ಹೊರಗೆ ತಂದಿದ್ದೇವೆಯೋ ಅಥವಾ ಮೊದಲೇ ಇತ್ತೋ ಎಂದು ಹೇಳಿ ಗಮನ ಸೆಳೆಯುವ ಸೂಚನೆಗೆ ಉತ್ತರವೂ ಇದೆ, ಆ ಗೈಡ್‌ಲೈನ್ ಸಹ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರೆ, ತಮ್ಮ ಕ್ಷೇತ್ರದಲ್ಲಿ ಗ್ರಾಮ ವಿಕಾಸಗಳ ಊರುಗಳು select ಆಗಿದ್ದರೆ ಹೇಳಿಬಿಡಿ.

ಅಧ್ಯಕ್ಷರು:– ಇನ್ನು ಆಗಿಲ್ಲ, ಮೊನ್ನೆ ಪತ್ರ ಬಂದಿದೆ, ಈಗ ಮಾಡಬೇಕಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇದು ಎಲ್ಲಾ 224 ಸದಸ್ಯರ ಪರಿಸ್ಥಿತಿ ಆಗಿದೆ. ಹಾಗಾಗಿ ನಾನು ಹೆಚ್.ಕೆ. ಪಾಟಿಲರಿಗೆ ಇನ್ನು ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ಒಂದೂವರೆ ವರ್ಷಗಳಿಂದ...

ಶ್ರೀ ವೈ.ಎಸ್.ವಿ. ದತ್ತಾ:– ಯಾವ ಬಜೆಟ್‌ನಲ್ಲಿ ನೀವು announce ಮಾಡಿದ್ದು, ಗ್ರಾಮ ವಿಕಾಸ ಎಂದು announce ಮಾಡಿದ ನಂತರ ಇನ್ನೊಂದು ಹೊಸ ಬಜೆಟ್ ಬಂದಿತು. ಹೊಸ ಬಜೆಟ್ ಬಂದ ಮೇಲೆ ಅಕ್ಟೋಬರ್ 2 ರಂದು ಗಾಂಧಿ ಜಯಂತಿಗೆ ಜಾರಿ ಮಾಡುತ್ತೇವೆಂದು ಈಗ ಮೊನ್ನೆ ಎಲ್ಲೋ ಒಂದು paper statement ಬಂದಿದೆ. ಅಷ್ಟೊತ್ತಿಗಾಗಲೇ ಗ್ರಾಮ ವಿಕಾಸಕ್ಕೆ

ನಿಗದಿಪಡಿಸಿರುವ ಮಾನದಂಡಗಳ ವ್ಯತ್ಯಾಸ ಎಂದು ಹೇಳಿ ಇನ್ನೊಂದು circular ಕಳುಹಿಸಿದ್ದೀರಿ, ಅದರ ಮೇಲೆ ಇನ್ನೊಂದಿಷ್ಟು ಎಳೆಯುತ್ತೀರಿ.

ಶ್ರೀ ಹೆಚ್.ಕೆ. ಪಾಟೀಲ್:- ದತ್ತಾರವರೆ ಯಾವುವು ನಾವು ಕಳುಹಿಸಿರುವುದು? ನಾನು ಗ್ರಾಮ ವಿಕಾಸದ ಪುಸ್ತಕವನ್ನೇ ನಿಮ್ಮ ಕೈಯಲ್ಲಿ ಕೊಟ್ಟಿದ್ದೇನೆ. ಅದರೊಳಗೆ ನಾವು circular ಕಳುಹಿಸಿರುವುದು ಇದೆ, guide lines ಇದೆ. ನೀವು ಅದನ್ನು ಹೇಗೆ select ಮಾಡಬೇಕೆಂದು ಇದೆ. ನಾವು ಅದನ್ನು ಏನು ಮಾಡಬೇಕೆಂದು ಇದೆ. ಅದು ಯಾವಾಗ ಪ್ರಾರಂಭ ಮಾಡಬೇಕೆಂದು ಇದೆ. ಯಾವಾಗ ಪೂರ್ಣಗೊಳಿಸಬೇಕೆಂದು ಇದೆ.

ಶ್ರೀ ವೈ.ಎಸ್.ವಿ. ದತ್ತಾ:- ಎಲ್ಲಾ ಅಚ್ಚುಕಟ್ಟಾಗಿ, ಶಿಸ್ತಾಗಿ ಪುಸ್ತಕದಲ್ಲಿ ಇದೆ.

ಅಧ್ಯಕ್ಷರು:- ಈಗ ಭಗವದ್ಗೀತೆ ಪುಸ್ತಕ ಅಚ್ಚುಕಟ್ಟಾಗಿ ಇದೆಯೋ ಇಲ್ಲವೋ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಧ್ಯಕ್ಷರೆ, ಹೆಚ್.ಕೆ. ಪಾಟೀಲರು ಅವರ ಇಲಾಖೆಯ ಕರಪತ್ರ, ಬ್ರೋಚರ್ ಎಷ್ಟು ಚೆನ್ನಾಗಿ ಮಾಡಿದ್ದಾರೆಂದು ಸಂತೋಷಪಡುತ್ತೇನೆ. ಏಕೆಂದರೆ 25 ಬ್ರೋಚರ್‌ಗಳನ್ನು ನಮಗೆಲ್ಲಾ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಓದುವುದಕ್ಕೆ ಬಹಳ ಚೆನ್ನಾಗಿದೆ, ಅದರ ಮುದ್ರಣ ಇತ್ಯಾದಿ ಬಹಳ ಚೆನ್ನಾಗಿದೆ. ಅದರ ವಿಷಯ, ವಿನ್ಯಾಸ ಎಲ್ಲವೂ ಒಳ್ಳೆಯದಿದೆ, ಉದಾತ್ತ ವಿಚಾರಗಳಿವೆ, ಅದರಲ್ಲಿ ಅವರ ಪ್ರೌಢಿಮೆ, ಅದರಲ್ಲಿ ಅವರು ವಿಷಯಗಳನ್ನು ಮಂಡಿಸಿರುವ ರೀತಿ ಎಲ್ಲವನ್ನು ಸ್ವಾಗತಿಸುತ್ತೇನೆ. ಆದರೆ ಅದರಲ್ಲಿ ಏನು ಜಾರಿಯಾಗಿದೆ ಎಂದು ನಮ್ಮ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಅವರ ಬಜೆಟ್ ಭಾಷಣದಲ್ಲಿ ಹೇಳಿದರು. ಯಾವುದೂ ಸಹ 50% ನಷ್ಟು cross ಆಗಿಲ್ಲ. ಅದು ನಮ್ಮ ಹೊಲ, ನಮ್ಮ ರಸ್ತೆ, ಅದು ಕೆರೆ ಸುಧಾರಣೆ, ಆಟದ ಮೈದಾನ, ಸ್ಮಶಾನ ಹೀಗೆ 25 ಕರ ಪತ್ರಗಳಿವೆ. ಅದನ್ನು ಒಂದೊಂದೆ ಹೇಳುತ್ತಾ ಹೋದರೆ...

ಅಧ್ಯಕ್ಷರು:- ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಆ 25 ಯೋಜನೆಗಳಲ್ಲಿ ಇವರು ....

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕಾಗೇರಿಯವರೆ, ಈಗ ಈ ಯೋಜನೆಗಳನ್ನು ತಂದಿದ್ದಕ್ಕೆ ಸಂಪನ್ಮೂಲ ಯಾವುದು ಎಂದು ಯೋಚನೆ ಮಾಡಬೇಕು. ಅದು ಗ್ರಾಮೀಣ ಮಹಾತ್ಮಾ ಗಾಂಧೀಜಿ ಉದ್ಯೋಗ ಖಾತ್ರಿ ಇದೆ. ಆ ಯೋಜನೆಯಡಿಯಲ್ಲಿ ಅವರು ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡರು ಸಂಪನ್ಮೂಲ ಅಲ್ಲಿಂದ ಬರುತ್ತದೆ, ಆ ಹಣವನ್ನು ಖರ್ಚು ಮಾಡಬೇಕಾದರೆ ಇರತಕ್ಕಂಥ ನಿಬಂಧನೆಗಳೇನಿವೆ, ಆ ನಿಬಂಧನೆಗಳನ್ನು ಯಾರೂ ಮಾಡಲಿಕ್ಕೆ ಸಾಧ್ಯವಿಲ್ಲ. ಈಗ ಹಣ ಹಾಕಿದರೆ ಆ ಫಲಾನುಭವಿಯ ಹೆಸರಿಗೆ ಹೋಗುತ್ತದೆ. ಯಾರು ಕೆಲಸ ಮಾಡುತ್ತಾರೆ? ನಿಜವಾಗಿಯೂ ಗ್ರಾಮೀಣ ಅಭಿವೃದ್ಧಿಯ ನಿಜವಾದ ಬಜೆಟನಲ್ಲೇನಾದರೂ ಈ ಯೋಜನೆಗಳನ್ನೆಲ್ಲಾ ತಂದಿದ್ದರೆ ಅದಕ್ಕೆ ಪೂರ್ಣ ಪ್ರಮಾಣದ ಹಣವನ್ನು ಒದಗಿಸಿದ್ದಿದ್ದರೆ ಇವೆಲ್ಲಾ ಯಶಸ್ವಿಯಾಗಿ ಅವರಿಗೆ ನಿಜವಾಗಿ ಒಳ್ಳೆಯ ಹೆಸರು ಬರುತ್ತಿತ್ತು. ಆದರೆ ಅವರು ಇದನ್ನು ಉದ್ಯೋಗ ಖಾತ್ರಿಯಲ್ಲಿ ತಂದಿದ್ದರಿಂದ ಅದು ಯಶಸ್ವಿಯಾಗಲಿಕ್ಕೆ ಕಾರಣವಾಗಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಅವರು ಇದನ್ನೆಲ್ಲಾ ಮಾಡಿದ್ದಾರೆ. ಆದರೆ, ಪ್ರಗತಿ ಏನೂ ಆಗಲಿಲ್ಲ. ನಮ್ಮ ಕ್ಷೇತ್ರದಲ್ಲಿ ಏನೆಲ್ಲಾ ಕೆಲಸಗಳು ಆಗಿವೆ, ಎಷ್ಟು ಕೋಟಿ ರೂಪಾಯಿಗಳ ಕೆಲಸ ಆಗಿದೆ ಎಂದು ನಮ್ಮ ಎಲ್ಲಾ ಶಾಸಕರುಗಳಿಗೆ ಒಂದು ಒಳ್ಳೆಯ ಪುಸ್ತಕವನ್ನು ಮಾಡಿಕೊಟ್ಟಿದ್ದಾರೆ. ನನಗೆ ಆ ಪುಸ್ತಕವನ್ನು ನೋಡಿ ಒಂದು ಸಲ ದಿಗ್ಭ್ರಮೆ ಆಯಿತು. ಏಕೆಂದರೆ, ಆ ಪುಸ್ತಕ ಬಹಳ ದಪ್ಪವಾಗಿದೆ. ಮಾನ್ಯ ಹೆಚ್.ಕೆ. ಪಾಟೀಲ್ ರವರು ನಮಗೆ ಇಷ್ಟೆಲ್ಲಾ ಅನುದಾನವನ್ನು ನೀಡಿ, ನಿಮ್ಮ ಕ್ಷೇತ್ರದಲ್ಲಿ ಇಷ್ಟು ಕೋಟಿ ರೂ.ಗಳ ಕೆಲಸ ಆಗಿದೆ ಎಂದು ನಮಗೆಲ್ಲಾ ಒಂದು ಪುಸ್ತಕ ಕೊಟ್ಟರು ಎಂದು ನಾನು ಭಯಂಕರ ಖುಷಿಯಲ್ಲಿದೆ. ನಾನು ಬಹಳ ಸಂತೋಷದಲ್ಲಿ ಆ ಪುಸ್ತಕವನ್ನು ಎಲ್ಲಿಂದಲೋ ತರಿಸಿಕೊಂಡು ನೋಡಿದರೆ, ನಮ್ಮ ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತರಿಯಲ್ಲಿ ಆಗಿರುವ ಯೋಜನೆಗಳು ಎಲ್ಲವೂ RDPR ನಿಂದ ಆಗಿರುವ ಕೆಲಸ ಎಂದು

ಪಟ್ಟಿ ಮಾಡಿದ್ದಾರೆ. ಅದು ತಪ್ಪಲ್ಲ. Technically you are right. ತಾಂತ್ರಿಕವಾಗಿ ಸರಿಯಿದೆ. ಆದರೆ, ನಮ್ಮ ಕ್ಷೇತ್ರದಲ್ಲಿ ಯಾವ್ಯಾವ ಪಂಚಾಯಿತಿಯಲ್ಲಿ ಏನೇನು ಆಗಿದೆ ಎಂದು ನಮಗೆ ಗೊತ್ತಿದೆ. ಅದನ್ನು ತಾವು ಈ ಪುಸ್ತಕ ಮಾಡಿಕೊಡುವುದು ಇದೆಯಲ್ಲಾ ಗ್ರಾಮವಿಕಾಸದ್ದು....

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಕಾಗೇರಿಯವರೆ, ನಮ್ಮ ಗ್ರಾಮೀಣ ಭಾಗದ ವಿಧಾನ ಸಭಾ ಕ್ಷೇತ್ರದಲ್ಲಿದ್ದ ಎಲ್ಲಾ MLA ಗಳಿಗೆ ಪುಸ್ತಕವನ್ನು ಕೊಟ್ಟಿದ್ದೇನೆ. ನನ್ನ ಇಲಾಖೆಯಿಂದ ನಿಮ್ಮ ಕ್ಷೇತ್ರದಲ್ಲಿ ಯಾವ್ಯಾವ ಕೆಲಸಗಳಿಗೆ ಹಣ ಮಂಜೂರು ಆಗಿದೆ, ಯಾವ್ಯಾವ ಕೆಲಸಗಳು ಕ್ರಿಯಾ ಯೋಜನೆಯಲ್ಲಿ ಸೇರಿವೆ, ಯಾವ್ಯಾವ ಕೆಲಸಗಳನ್ನು ತೆಗೆದುಕೊಂಡಿದ್ದೇವೆ, ಯಾವ್ಯಾವ ಕೆಲಸ ಏನಾಗಿದೆ, ಏನು ಬಿಟ್ಟಿದೆ ಎಂದು ನೋಡುವುದಕ್ಕೆ ನೀವು ಉಸ್ತುವಾರಿ ಆಗಿ, ಅಧ್ಯಕ್ಷರಾಗಿ ಅವುಗಳನ್ನು ನೋಡಿ, ಗಮನಿಸಿ ಎಂದು ಆ ಪುಸ್ತಕವನ್ನು ನಿಮಗೆ ಕೊಡಲಾಗಿದೆ. ನಮ್ಮ ಶಾಸಕರಿಗೆ ಯಾರಿಗೂ ನಮ್ಮ ಕ್ಷೇತ್ರದಲ್ಲಿ ಸರ್ಕಾರದ ಅನುದಾನದಿಂದ ಎಷ್ಟು ಕೆಲಸ ಆಗಿದೆ ಎನ್ನುವುದನ್ನು ನಮ್ಮ ಇಲಾಖೆಯೊಳಗೆ ಅಂತೂ ಯಾರಿಗೂ ಗೊತ್ತಾಗುತ್ತಿರಲಿಲ್ಲ. ನಿಮಗೆ ಆ 500 ಪುಟಗಳ ಪುಸ್ತಕವನ್ನು ಕೊಟ್ಟರೆ ನಾನು ಗ್ರ್ಯಾಂಟ್ ಕೊಟ್ಟಿದ್ದೇನೆ ಎಂದು ಹೇಳಿದ್ದೇನೆಯೇ? ನಿಮ್ಮಲ್ಲಿ ಇಷ್ಟು ಗ್ರ್ಯಾಂಟ್ ಅನ್ನು allot ಮಾಡಿದ್ದೇವೆ, ಪಂಚಾಯಿತಿಯವರು, ಜಿಲ್ಲಾ ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿಯವರು ಈ ಕೆಲಸವನ್ನು ತೆಗೆದುಕೊಳ್ಳಬೇಕು, ಇವು ಯಾವುದೂ ಆಗಲಿಲ್ಲವೆಂದರೆ ನೀವು ನಿಮ್ಮ ಉಸ್ತುವಾರಿಯೊಳಗೆ ನೋಡಬೇಕು, ನೀವು ಅದರ ಮೇಲೆ ನಿಗಾ ವಹಿಸಬೇಕು, ಸರ್ಕಾರಕ್ಕೆ ತಿಳಿಸಬೇಕು ಎನ್ನುವ ಸದುದ್ದೇಶದಿಂದ ಅವನ್ನೆಲ್ಲಾ ನಿಮಗೆ ಕೊಟ್ಟಿದ್ದೇನೆ. ಗ್ರ್ಯಾಂಟ್ ಕೊಟ್ಟಿದ್ದೇನೆಂದು ನಾನು 500 ಪುಟಗಳನ್ನು ನಿಮಗೆ ಕೊಡಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ವಿಶ್ಲೇಷಣೆಗೆ ಹೋಗುವುದಿಲ್ಲ. ಮಾನ್ಯ ಸಚಿವರು ನಮಗೆ ಒಳ್ಳೆಯ ಪುಸ್ತಕವನ್ನು ಮಾಡಿಕೊಟ್ಟಿದ್ದಾರೆ, ನಾವು KDP ಅಧ್ಯಕ್ಷರಿರುತ್ತೇವೆ. ಶಾಸಕರಿರುತ್ತೇವೆ. ನಮಗೆ

ನಮ್ಮ ತಾಲ್ಲೂಕಿನಲ್ಲಿ ಏನಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಆ ಪುಸ್ತಕವನ್ನು ಕಳುಹಿಸುವುದಕ್ಕೆ RDPR ಮಂತ್ರಿಗಳೇ ಬೇಕು. ನಾವು ಶಾಸಕರು ಬಹಳ ಅಸಮರ್ಥರಿದ್ದೇವೆ. ನಮಗೆ ತಿಳಿದುಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ನಾವು ಎಲ್ಲವನ್ನು ನಿಮ್ಮಿಂದಲೇ ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ, ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತರಿಯಲ್ಲಿ ಏನು ಕೊಟ್ಟಿದ್ದಾರೆ ಎನ್ನುವುದನ್ನು ನಮಗೆ ತಿಳಿದುಕೊಳ್ಳುವುದಕ್ಕೆ ಅಲ್ಲಿ ಆಗುವುದಿಲ್ಲವಲ್ಲ. ನಾವು ಬೆಂಗಳೂರಿನಿಂದಲೇ ತಿಳಿದುಕೊಂಡು ಹೋಗಬೇಕು ಹಾಗಾಗಿ, ನಮ್ಮನ್ನು under estimate ಮಾಡಬೇಡಿ. ನಾವು ಜನರಿಂದ ಆಯ್ಕೆ ಆದಂಥ ಜನಪ್ರತಿನಿಧಿಗಳು. ನಮ್ಮ ಕ್ಷೇತ್ರದಲ್ಲಿ ನಮ್ಮ ಪಂಚಾಯಿತಿಗಳಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಹಾಗೂ ನಮಗೆ ಏನು ಬೇಕೆಂದು ತಿಳಿದುಕೊಳ್ಳುವುದಕ್ಕೆ ನಮಗೆಲ್ಲರಿಗೂ ಶಕ್ತಿ ಇದೆ. ಸಾಮರ್ಥ ಇದೆ. ಅರ್ಹತೆ ಇದೆ. ನೀವು ಕೊಡಿ, ತಾವು ಒಳ್ಳೆಯದು ಮಾಡಿದ್ದೀರಿ ಪುಸ್ತಕ, ಕರಪತ್ರ, ಸಮಸ್ಯೆಗಳು. ಹೀಗಿದ್ದೇ ಆಗುತ್ತಿದೆ ಹೊರತು ಈಗ ನಾವು ಏನು ನಿರೀಕ್ಷೆ ಮಾಡುತ್ತೇವೆ, ಅದು ಆಗುತ್ತಿಲ್ಲ. ಉದಾಹರಣೆಗೆ, RDPR ಇಲಾಖೆಯಲ್ಲಿ ಅವರು ಮೊದಲನೆಯದಾಗಿ ಏನು ಮಾಡಬೇಕಾಗಿತ್ತು ಎಂದರೆ, ಪಂಚಾಯಿತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿತ್ತು. ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO) ಗಳು ಅವರು ನಮಗೆ ಬಹಳ ಮುಖ್ಯ. PDO ಗಳು ಇಲ್ಲವೆಂದರೆ ಏನೆಲ್ಲಾ ಸಮಸ್ಯೆಗಳು ಆಗುತ್ತವೆ ಎನ್ನುವುದನ್ನು ನಾವು ನೋಡಿದ್ದೇವೆ. 5,629 PDO ಹುದ್ದೆ ಮಂಜೂರು ಆಗಿದ್ದಿದ್ದರೆ, 4,581 ಹುದ್ದೆ ಇದೆ. 1048 ಪಂಚಾಯತ್‌ಗಳಿಗೆ ಈಗ 6,000 ಪಂಚಾಯತ್ ಆಗಿದೆ. 1048 ಪಂಚಾಯತ್‌ಗಳಲ್ಲಿ PDO ಗಳು ಇಲ್ಲ. ಈ ಹುದ್ದೆಗಳನ್ನು ಆದ್ಯತೆ ಮೇಲೆ ತುಂಬಬೇಕಾಗಿತ್ತಲ್ಲವೆ? ನಿಮ್ಮ ಹಿರಿತನದಿಂದ, ನಿಮ್ಮ ಅನುಭವದಿಂದ ಈ ಹುದ್ದೆಗಳನ್ನು ತುಂಬಿ ಅಲ್ಲಿಯ ಸದಸ್ಯರು, ಅಲ್ಲಿಯ ಜನರು ಏನು ಕಷ್ಟ ಪಡುತ್ತಿದ್ದಾರೆ, PDOಗೋ, ಸೆಕ್ರಟರಿಗೋ ಯಾರಿಗೂ ನೀವು ಚಾರ್ಜ್ ಕೊಟ್ಟಿದ್ದೀರಿ, ಜನರೇನು ಅನುಭವಿಸುತ್ತಿದ್ದಾರೆ, ಅದನ್ನು ದೂರ ಮಾಡುವುದಕ್ಕೆ ಮೊದಲ ಆದ್ಯತೆಯ ಪ್ರಯತ್ನ ಮಾಡಬೇಕಾಗಿತ್ತು. ಇದರ

ಜೊತೆಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-2 ಇದರಲ್ಲಿ 223 ಹುದ್ದೆ ಖಾಲಿ ಇದೆ. ಗ್ರೇಡ್-1 916 ಹುದ್ದೆಗಳು ಖಾಲಿ ಇವೆ. ಇದರ ಜೊತೆಯಲ್ಲಿ ಎಲ್ಲಾ ಪಂಚಾಯಿತಿಗಳಲ್ಲಿ “C”, “D” ಗ್ರೂಪ್ ನವರ ಹುದ್ದೆಗಳು ಸಾಕಷ್ಟು ಖಾಲಿ ಇವೆ. 175 ತಾಲ್ಲೂಕುಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿ (EO)ಗಳಿದ್ದು 24 ಹುದ್ದೆ ಇನ್ನು ಖಾಲಿ ಇದೆ. ಸಹಾಯಕ ಇಂಜಿನಿಯರ್ 156 ಹುದ್ದೆ ಖಾಲಿ ಇದೆ. ಕಿರಿಯ ಇಂಜಿನಿಯರ್ 464 ಹುದ್ದೆಗಳು ಖಾಲಿ ಇದೆ. ನಿಜವಾಗಿ ಈ ಜೂನಿಯರ್ ಇಂಜಿನಿಯರ್ಸ್, PDOಗಳು, ಸೆಕ್ರೆಟರಿಗಳು ಇವರೇ ಎಲ್ಲಾ ರೀತಿಯಲ್ಲಿ ನಮಗೆ ಹೆಚ್ಚು ಅನುಕೂಲಕ್ಕೆ ಬರುತ್ತಾರೆ. ಏಕೆಂದರೆ, ಅವರೇ ಪ್ರಗತಿಯನ್ನು ಮಾಡಿ ತೋರಿಸುವುದಕ್ಕೆ ಹೆಚ್ಚು ಜವಾಬ್ದಾರರು ಆಗಿರುತ್ತಾರೆ. ಆದರೆ, ಅವರ ಹುದ್ದೆಗಳು ಖಾಲಿ ಇದೆ. ಸರ್ಕಾರದಲ್ಲಿ ಸಚಿವರಾಗಿ ನೀವು ಅವರ ಅವರ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕಾಗಿತ್ತು. ಈಗ ಹುದ್ದೆಗಳನ್ನು ತುಂಬಿಕೊಳ್ಳುವ ಪ್ರಕ್ರಿಯೆ ಮಾಡುತ್ತಿದ್ದೇವೆಂದು ತಾವು ಹೇಳುತ್ತಿದ್ದೀರಿ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಇಷ್ಟು ಹೊತ್ತಿಗೆ ಅದೆಲ್ಲಾ ಆಗಬೇಕಾಗಿತ್ತು. ಏಕೆ ಆಗಿಲ್ಲ? ಇದರಿಂದಾಗಿ ಪಂಚಾಯತ್ ಮಟ್ಟದಲ್ಲಿ ಅಲ್ಲಿ ಎಲ್ಲಾ ಅಭಿವೃದ್ಧಿ ಕೆಲಸಗಳು ಕುಂಠಿತ ಆಗಿವೆ. RDPR ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳಿಗೆ ವಿಳಂಬ ಆಗಿದೆ. ಕುಡಿಯುವ ನೀರಿನ ಯೋಜನೆ, ರಸ್ತೆ ಶುಚಿತ್ವದ ಬಗ್ಗೆ ಕಾರ್ಯಕ್ರಮಗಳು, ಉಳಿದವುಗಳೆಲ್ಲಾ ಇವರ ಧ್ಯೇಯೋದ್ದೇಶಗಳಲ್ಲಿವೆ. ಇದನ್ನೆಲ್ಲವನ್ನು ನೋಡಿದರೆ ಯಾವ ರೀತಿ ಪರಿಸ್ಥಿತಿ ಆಗಿದೆ ಎಂದು ಅನ್ನಿಸುತ್ತದೆ? ನಮ್ಮ ಒಟ್ಟು ಗ್ರಾಮೀಣ ಪರಿಸ್ಥಿತಿಗಳಲ್ಲಿ ಹೇಗೆ ಒಂದು ನಿರಾಶೆ ಭಾವನೆ ಬಂದಿದೆ ಎಂದರೆ, ಅದಕ್ಕೆ ಅನೇಕ ಕಾರಣ ಇದೆ. ನಿಮ್ಮ ಇಲಾಖೆ ಒಂದೇ ಅಲ್ಲ. ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಪಶುಸಂಗೋಪನಾ ಇಲಾಖೆ ಹೀಗೆ ನಮ್ಮ ಗ್ರಾಮೀಣ ಭಾಗದ ಜನಜೀವನಕ್ಕೆ ಅನ್ವಯಿಸುವಂಥ ನಮ್ಮ ಎಲ್ಲಾ ಇಲಾಖೆಗಳ ಒಟ್ಟಾರೆ ಪರಿಣಾಮ ಒಂದು ತರಹದ ಬೇಸರ, ಆಕ್ರೋಶ ನಮ್ಮ ಗ್ರಾಮೀಣ ಜನರ ಭಾಗಕ್ಕೆ ಬಂದಿದೆ. ಹಾಗಾಗಿ, ನಗರ ಪ್ರದೇಶಕ್ಕೆ ವಲಸೆ ಹೆಚ್ಚಾಗುತ್ತಿದೆ. ಅಲ್ಲದೆ ಅಸಮತೋಲನ ನಿರ್ಮಾಣ ಆಗುತ್ತಿದೆ. ಬಜೆಟ್ allocation ನಲ್ಲಿ ನೋಡಿದರೆ, ಇವತ್ತಿನ ದಿವಸ

6 ಪೈಸೆಯನ್ನು ಗ್ರಾಮೀಣ ಭಾಗಕ್ಕೆ ಕೊಡುತ್ತಾರೆ. 7 ಪೈಸೆಯನ್ನು ನಗರ ಭಾಗಕ್ಕೆ ಕೊಡುತ್ತಾರೆ. ಏಕೆಂದರೆ ನಗರ ಪ್ರದೇಶವೇ ಬೆಳೆಯುವುದು, ಗ್ರಾಮೀಣ ಪ್ರದೇಶ ಏನೂ ಬೆಳೆಯುವುದಿಲ್ಲವೆಂದು ಇವರಿಗೂ ಗೊತ್ತಿದೆ. ನಮ್ಮ ಬಜೆಟ್ ಕಾಪಿಯಲ್ಲಿ ಅದೆಲ್ಲಾ ವಿವರ ಇದೆ. ನಮ್ಮ ಗ್ರಾಮೀಣ ಭಾಗಕ್ಕೆ 6 ಪೈಸೆ. ಶೇಕಡ 70 ರಷ್ಟು ಜನಜೀವನವನ್ನು ಹೊಂದಿರುವಂತಹ ನಮ್ಮ ಗ್ರಾಮೀಣ ಪ್ರದೇಶಕ್ಕೆ ರೂಪಾಯಿಯಲ್ಲಿ 6 ಪೈಸೆಯನ್ನು ಕೊಟ್ಟು, 7 ಪೈಸೆಯನ್ನು ನಗರಕ್ಕೆ ಕೊಡುತ್ತಾರೆ. 6 ಪೈಸೆ ಜೊತೆಯಲ್ಲಿ ನೀರಾವರಿ, ಬೇರೆ ಬೇರೆ ಇಲಾಖೆಯ ಸಣ್ಣಪುಟ್ಟವು ಅದು ಗ್ರಾಮೀಣಕ್ಕೂ ಅನ್ವಯ ಆಗುವಂಥದ್ದು ಇದೆ. ಆದರೆ, ಗ್ರಾಮೀಣ ಭಾಗದ ಜನರಿಗೆ ಈ ಎಲ್ಲಾ ಕಾರಣದಿಂದ, ಅಲ್ಲಿಯ ಅವ್ಯವಸ್ಥೆಯ ಕಾರಣದಿಂದ ಅಲ್ಲಿ ಮೂಲಭೂತ ಸೌಕರ್ಯವನ್ನು ಕೊಡದೆ ಇರುವುದರಿಂದಾಗಿ ಇವತ್ತಿನ ದಿವಸ ಜನ ನಗರ ಪ್ರದೇಶಕ್ಕೆ ಹೋಗುವಂಥ ಸ್ಥಿತಿ ಬಂದಿದೆ. ಒಟ್ಟು ಗ್ರಾಮೀಣ ರಸ್ತೆಗಳು 1,55,546 ಕಿ.ಮೀ ಇದೆ.

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೇರಿಯವರು ನಗರ ಮತ್ತು ಗ್ರಾಮಾಂತರ ಪ್ರದೇಶದ ಬಗ್ಗೆ ವಿಚಾರವನ್ನು ಪ್ರಸ್ತಾಪ ಮಾಡಿದರು. ವಿಷಯ ಸತ್ಯ. ಆದರೆ, ತನ್ಮೂಲಕ ಮಾನ್ಯ ಕಾಗೇರಿಯವರಿಗೆ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ತಾವು ಮಾನ್ಯ ಪ್ರಧಾನ ಮಂತ್ರಿಗಳಿಗೂ ಹೇಳಬೇಕು. ತಾವು ಇವತ್ತಿನ ದಿವಸ Smart City ಮಾಡುವುದಕ್ಕೆ ಏನು ಹೊರಟಿದ್ದೀರಿ, Smart ಹಳ್ಳಿ ಮಾಡುವುದಕ್ಕೆ ಆರಂಭ ಮಾಡಿ. ನೀವು Smart City ಮಾಡುತ್ತಾ, ಮಾಡುತ್ತಾ ಮತ್ತಷ್ಟು ಜನಕ್ಕೆ ವಲಸೆ ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನೀವು Smart City ಜೊತೆಗೆ Smart ಹಳ್ಳಿ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಸಿ.ಟಿ. ರವಿ:- ಮಾನ್ಯ ಶಿವರಾಂ ರವರೆ, ತಾವು ಆದರ್ಶ ಗ್ರಾಮ ಮರೆತಿದ್ದೀರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸಂಸದರ ಆದರ್ಶ ಗ್ರಾಮ ಇದೆಯಲ್ಲ.

(ಗೊಂದಲ)

ಶ್ರೀ ಕೆ. ಗೋಪಾಲ ಪೂಜಾರಿ:- ತಾವು ಈ ಕಾರ್ಯಕ್ರಮಕ್ಕೆ ಹಣ ಎಲ್ಲಿ ಕೊಟ್ಟಿದ್ದೀರಿ? ಆದರ್ಶ ಗ್ರಾಮಕ್ಕೆ ಹಣ ಎಲ್ಲಿದೆ? ಆದರ್ಶ ಗ್ರಾಮ ಕಾರ್ಯಕ್ರಮಕ್ಕೆ ಒಂದು ರೂಪಾಯಿ ಹಣವನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ:- ಈ ಅರ್ಥದಲ್ಲಿ ಕೆಟ್ಟ ಸಿಟಿ ಬರಬೇಕೇ?

(ಗೊಂದಲ)

ಅಧ್ಯಕ್ಷರು:- ಏಕೆ ಗೊಂದಲ ಸೃಷ್ಟಿ ಮಾಡುತ್ತೀರಿ?

(ಗೊಂದಲ)

ಶ್ರೀ ಸಿ.ಟಿ. ರವಿ:- ನಗರ ಪ್ರದೇಶದಲ್ಲಿ ಕೊಳಗೇರಿ ನಿರ್ಮಾಣ ಮಾಡಬೇಕಾ? ಇವರ ಲೆಕ್ಕದಲ್ಲಿ . . . .

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- 20,000-25,000 ಕೋಟಿ ಆಗುತ್ತಿದೆ.

(ಗೊಂದಲ)

ಶ್ರೀ ಸಿ.ಟಿ ರವಿ:- ಇವರು ಕೊಳೆಗೇರಿಯಲ್ಲಿ vote bank ಮಾಡಿಕೊಳ್ಳಬೇಕು. ಕೊಳೆಗೇರಿಯಲ್ಲಿದ್ದವರು ಇವರಿಗೆ ಓಟು ಹಾಕಬೇಕು. Smart City ಆಗಬಾರದು.

(ಗೊಂದಲ)

ಶ್ರೀ ಕೆ. ಗೋಪಾಲ ಪೂಜಾರಿ:- ಆದರ್ಶ ಗ್ರಾಮಕ್ಕೆ ಹಣ ಕೊಡುತ್ತಿಲ್ಲ. ಕೇವಲ ಪ್ರಚಾರ. ಪ್ರಚಾರಕ್ಕೆ ಮಾತ್ರ ಆದರ್ಶ ಗ್ರಾಮ.

(ಗೊಂದಲ)

ಶ್ರೀ ಸಿ.ಟಿ. ರವಿ:- ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯನ್ನು ನೀವಲ್ಲ ತಂದಿದ್ದು. ನಮ್ಮ ಸರ್ಕಾರವೇ ತಂದಿದ್ದು.

(ಗೊಂದಲ)

ಶ್ರೀ ಕೆ. **ಗೋಪಾಲ ಪೂಜಾರಿ:-** ಮೊದಲು ಆದರ್ಶ ಗ್ರಾಮಕ್ಕೆ ಹಣ ಕೊಡಿ.

(ಗೊಂದಲ)

ಶ್ರೀ **ಡಿ.ಎನ್. ಜೀವರಾಜ್:-** ಹಣ ಕೊಡದೆ ಇದ್ದದ್ದು ನಿಮ್ಮ ಸರ್ಕಾರದಲ್ಲಿ.

(ಗೊಂದಲ)

ಶ್ರೀ ಕೆ. **ಗೋಪಾಲ ಪೂಜಾರಿ:-** ನಿಮ್ಮ ಹತ್ತಿರ ಕೊಡುವುದಕ್ಕೆ ಹಣ ಇಲ್ಲ. ಅದನ್ನು ಒಪ್ಪಿಕೊಳ್ಳಿ.

(ಗೊಂದಲ)

ಶ್ರೀ **ಡಿ.ಎನ್. ಜೀವರಾಜ್:-** UPA ಸರ್ಕಾರ ಹಣ ಕೊಡದೇ ಇದ್ದದ್ದು. PMGSY ಗೆ ಹಣ ಕೊಡದೆ ಇದ್ದದ್ದು ನಿಮ್ಮ UPA ಸರ್ಕಾರ. ಗೊತ್ತಿರಲಿ.

(ಗೊಂದಲ)

ಅಧ್ಯಕ್ಷರು:- ನೀವು ಹುಚ್ಚರಾ? ನಿಮಗೆ ಸಂದರ್ಭ ಬಂದಾಗ ಅವಕಾಶ ಪಡೆದು ಮಾತನಾಡಿ.

ಶ್ರೀ **ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಭಾಗದಲ್ಲಿ ರಸ್ತೆಗಳು 1,55,546 ಕಿ.ಮೀ. ಇದೆ ಎಂದು ಇಲಾಖೆಯ ಅಂಕಿ-ಸಂಖ್ಯೆ ಆಗಿದೆ. ಇನ್ನೂ ಜಾಸ್ತಿ ಇದೆ. ಆದರೆ, ಅವೆಲ್ಲವೂ ಹಳ್ಳಿ ರಸ್ತೆ ಎಂದು ಆಗಿರುವುದರಿಂದ ಅದು ಇನ್ನು RDPR ರೋಡ್ ಎಂದು convert ಆಗುವುದೇ ಲಕ್ಷಾಂತರ ಕಿ.ಮೀ ಇದೆ ಎನ್ನುವುದು ನಮಗಿರುವ ಮಾಹಿತಿ.

ಅಧ್ಯಕ್ಷರು:- ಈಗ ವಸ್ತುಸ್ಥಿತಿಯಲ್ಲಿ PWD ರೋಡ್ ಅನ್ನು ಬಿಟ್ಟರೆ ಇನ್ನು ಉಳಿದಿದ್ದು Z.P ರಸ್ತೆ ಯಾವುದು, ತಾಲ್ಲೂಕು ಪಂಚಾಯಿತಿ ರಸ್ತೆ ಯಾವುದು, ಗ್ರಾಮ ಪಂಚಾಯಿತಿ ರಸ್ತೆ ಯಾವುದು? ಎಂದು classification ನೇ ಆಗಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಈಗ PWD ಯದು ಒಂದು upgrade ಆಗಿರುವುದು ಬಿಟ್ಟರೆ ಉಳಿದಿದೆಲ್ಲಾ RDPR ಎಂದು ಹೇಳಿದ್ದಾರೆ. RDPR ನಲ್ಲಿ ಎಷ್ಟು ಕಿ.ಮೀ ರಸ್ತೆ ಇದೆ ಎಂದು ನೋಡಿದರೆ ಇನ್ನೂ ಅರ್ಧದಷ್ಟು ರಸ್ತೆ ಇವರು ಗುರುತಿಸುವುದು ಇನ್ನೂ ಬಾಕಿ ಇದೆ. ಇವರು ಅದಕ್ಕೆ ನಕಾಶೆ ಮಾಡಿದ್ದಾರೆ. ಆದರೆ, ಏನೇ ಮಾಡಿದರೂ ಬಸ್ ಹೋಗುವಂಥದ್ದು ಅಥವಾ ಜನ ವಾಹನ ಸಂಚಾರಕ್ಕೆ ಯೋಗ್ಯವಾಗಿರುವಂಥದ್ದನ್ನು ಗುರುತಿಸುವುದು ಇನ್ನೂ ಬಾಕಿ ಇದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವೂ ನಮ್ಮ ಗ್ರಾಮೀಣ ಭಾಗದ ಜನ ಯಾವ ಸ್ಥಿತಿಯಲ್ಲಿದ್ದೇವೆಂದರೆ, 58,000 ಕಿ.ಮೀ ಮಾತ್ರ ಡಾಂಬರೀಕರಣ ಆಗಿದೆ. 1,55,000 ಕಿ.ಮೀ ನಲ್ಲಿ 58,000 ಕಿ.ಮೀ ಮಾತ್ರ ಡಾಂಬರೀಕರಣ ಆಗಿದೆ. ಇನ್ನು ಒಂದು ಲಕ್ಷ ಕಿ.ಮೀ ಡಾಂಬರೀಕರಣ ಆಗುವುದು ಬಾಕಿ ಇದೆ. ನಾವು ಅದರೊಳಗೆ 21,000 ಕಿ.ಮೀ ಜಲ್ಲಿ ಹಾಕಿ ಇಟ್ಟಿದ್ದಾರೆ. ಅದನ್ನು ಯಾಕಾದರೂ ಹಾಕಿಟ್ಟಿದ್ದರೋ ಎಂದು ಆ ಊರಿನ ಜನರು ನಮಗೆ ಶಾಪ ಹಾಕುವುದೊಂದು ಬಾಕಿ ಇದೆ. ಈಗಾಗಲೇ ಅವರು ಶಾಪ ಹಾಕುತ್ತಿದ್ದಾರೆ. ಏಕೆಂದರೆ, ಆ ಕಲ್ಲುಗಳೆಲ್ಲಾ ಎದ್ದು ಅದಕ್ಕೆ ಮಣ್ಣು ಹಾಕುವುದಕ್ಕೆ ಆಗುವುದಿಲ್ಲ. ಮಳೆ ಬಂದು ಕೊಚ್ಚಿ ಹೋಗುತ್ತದೆ. ಅದರ ಸಮಸ್ಯೆಗೆ ನಡೆಯುವುದಕ್ಕೆ ಆಗುವುದಿಲ್ಲ. ವಾಹನ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಜಲ್ಲಿ ಹಾಕಿದ ರಸ್ತೆ ಯಾರಿಗೂ ಬೇಡವೆನ್ನುವಂತಹ ಸ್ಥಿತಿಯಲ್ಲಿದೆ. ಆದರೆ, ಜಲ್ಲಿ ಹಾಕಿ ಇಟ್ಟಿದ್ದಾರೆ. ಆದರೆ, ಅದು ಡಾಂಬರೀಕರಣ ಆಗಿಲ್ಲ. ಅದರ ಜೊತೆಯಲ್ಲಿ ಮಣ್ಣಿನ ರಸ್ತೆ 75 ಸಾವಿರ ಕಿಲೋ ಮೀಟರ್‌ಗಿಂತಲೂ ಜಾಸ್ತಿಯಿದೆ. ಇದಕ್ಕೆ ಅಂದರೆ maintenance ಗೆ ಇನ್ನೂ ಹೆಚ್ಚಿನ ಹಣಕಾಸಿನ ನೆರವು ಕೊಡುತ್ತಾರೆ ಎಂದು ನಾನು ಹೆಚ್ಚಿನ ನಿರೀಕ್ಷೆ ಮಾಡಿದ್ದೆ. ಇವರು ತಾಲ್ಲೂಕಿಗೆ ಜನಸಂಖ್ಯೆಯ ಆಧಾರದ ಮೇಲೆ ಹಣ

ಕೊಡುತ್ತೇವೆಂದು ಹೇಳಿ, ಒಂದು ತಾಲ್ಲೂಕಿಗೆ ಜನಸಂಖ್ಯೆ ಆಧಾರದ ಮೇಲೆ ರಸ್ತೆ ಕಿ.ಮೀ ಆಧಾರದ ಮೇಲೆ ನನ್ನ ಶಿರಸಿಯ ಸಿದ್ಧಾಪುರ ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳು ಬರುತ್ತದೆ. ಸುಮಾರು ಎರಡು ಸಾವಿರ ಕಿ.ಮೀ.ಗಿಂತ ಜಾಸ್ತಿಯಿದೆ. ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕು. ಆ ಗೊಂದಲದ ಭಾಗ ಹೇಗೆ ಎಂದರೆ, ಒಂದು ಕೋಟಿ ರೂಪಾಯಿಗಳನ್ನು ಯಾವ್ಯಾವ ರಸ್ತೆಗಳಿಗೆ ಕೊಡಬೇಕೆಂದರೆ ನಿಮಗೂ ಅದು ಗೊತ್ತಿದೆ. ಜಿಲ್ಲಾ ಪಂಚಾಯತ್ ಸದಸ್ಯರು ಆ ಸಮಿತಿಗೆ ಸದಸ್ಯರು ಆಗಿದ್ದಾರೆ. ತಾಲ್ಲೂಕು ಪಂಚಾಯತ್ ಸದಸ್ಯರೂ ಸಹ ಸಮಿತಿಗೆ ಸದಸ್ಯರು. ಅಂದರೆ, ನಮ್ಮ ತಾಲ್ಲೂಕಿನಲ್ಲಿ ಎಂ.ಎಲ್.ಎ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ತಾಲ್ಲೂಕು ಪಂಚಾಯತ್ ಸದಸ್ಯರು ನಾವೆಲ್ಲರೂ ಒಟ್ಟಾಗಿ ನಾವು ಆ ರಸ್ತೆ ಯಾವುದು ಎಂದು ಒಂದು ಕೋಟಿಗೆ ನಿಕಿ ಮಾಡಬೇಕು. ಬಹುಶಃ ಸ್ವಲ್ಪ ಹೆಚ್ಚು-ಕಡಿಮೆ ಒಂದು ಕೋಟಿಯಷ್ಟೇ ಎಲ್ಲಾ ಕ್ಷೇತ್ರಗಳಿಗೂ ಬರುತ್ತಿದೆ. ಸ್ವಲ್ಪ ಹೆಚ್ಚು ಕಡಿಮೆ ಬರುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ನಿಮ್ಮ ಇಡೀ ಮಾತಿನ ಸರಣಿ ಇದು ಒಂದು department ಎನ್ನುವ ರೀತಿ ಮಾತನಾಡುತ್ತಿದ್ದೀರಿ. ಇದು department ಆಗಕೂಡದು. ಪ್ರತಿಯೊಂದು ಪಂಚಾಯತಿ ರಾಜ್ ಸಂಸ್ಥೆ ಪರಿಪೂರ್ಣವಾಗಿ ಸ್ವಯಂ ಆಡಳಿತವನ್ನು ನಡೆಸುವಂತಹ ಸಂಸ್ಥೆಯಾಗಬೇಕು. ಇಲ್ಲಿಂದ ಅದಕ್ಕೆ ನಿಧಿ automatic ಆಗಿ ವರ್ಗಾವಣೆಯಾಗಬೇಕು. Funds, functions, functionaries ಆ ಸಿದ್ಧಾಂತದಲ್ಲಿ ನಾವು ಮಾತನಾಡಿದರೆ ಗ್ರಾಮ ಸ್ವರಾಜ್ಯದ ಕಲ್ಪನೆಗೆ ಹತ್ತಿರ ಬರುತ್ತೇವೆ. ಇಲ್ಲದೇ ಹೋದರೆ PWD Department ನಲ್ಲಿ ರಸ್ತೆಯ ವಿಚಾರ, Urban Development Departmentನಲ್ಲಿ UGD ದು ಮಾತನಾಡಿದ ಹಾಗೆ ಆಗುತ್ತದೆ. That is precisely be exercised. ಬಹಳ ಜನರು ಈ ಇಲಾಖೆಯನ್ನು ಇಲಾಖೆಯಾಗಿಯೇ ನಡೆಸಬೇಕು ಎಂದು ಇದೆ. ವಿಕೇಂದ್ರೀಕರಣದ ಅರ್ಥ ಅಂದರೆ ಒಳತಿರುಳು ಏನು ಎಂದರೆ, ನಮ್ಮನ್ನು ಆಯ್ಕೆ ಮಾಡಿ ಕಳುಹಿಸುವವರಿಗೆ ತಮ್ಮನ್ನು ತಾವೇ ಆಳ್ವಿಕೆ ಮಾಡಿಕೊಳ್ಳುವುದಕ್ಕೆ

ಬರುವುದಿಲ್ಲವೇ? ಒಂದು ಪಂಚಾಯಿತಿಗೆ ಸ್ವಯಂ ಆಡಳಿತ ಕೊಟ್ಟು ಇಷ್ಟು ಇಲಾಖೆಗಳು ಎಂದು ಅವರಿಗೆ ವರ್ಗಾವಣೆ ಕೊಟ್ಟರೆ ಅದಕ್ಕೆ ಬೇಕಾಗಿರುವ ನಿಧಿ ಅವರಿಗೆ ಕೊಟ್ಟು ಜವಾಬ್ದಾರಿ ಅವರಿಗೆ ಕೊಟ್ಟರೆ ಅವರು ಊರಿನಲ್ಲಿ ರಸ್ತೆ ಎಲ್ಲಿ ಮಾಡಬೇಕು, ಚರಂಡಿ ಎಲ್ಲಿ ಮಾಡಬೇಕು, ಸ್ಕೂಲ್ ಎಲ್ಲಿ ಮಾಡಬೇಕು, ತಿಪ್ಪೆ ಎಲ್ಲಿ ಹಾಕಬೇಕು ಹಾಗೂ ಅಂಗಡಿ ಎಲ್ಲಿ ಇರಬೇಕು, ಎಲ್ಲಿ ಇರಬಾರದು ಎಂದು ಹೇಳುವುದಕ್ಕೆ ಅವರಿಗೆ ಚೈತನ್ಯ ಇಲ್ಲವೇ? ಅದರ ವಿಚಾರ ಏನಾದರೂ ಇದ್ದರೆ ಮಾತನಾಡಿ. You are also trying to talk as if this is a Department. It should not be a Department. ಸ್ವಲ್ಪ ದಯಮಾಡಿ try to make some exercise on this.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಲ್ಲ ಅವರು ಹೇಳಿರುವುದು. . . .

ಅಧ್ಯಕ್ಷರು:- ಇದು ಸರ್ಕಾರ ಎಂದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಸರಿ. ಮಾನ್ಯ ರಮೇಶ್ ಕುಮಾರ್‌ರವರು ಅವರ ಸಮಿತಿಯ ವರದಿಗಳಲ್ಲಿ ಈ ರೀತಿಯ ಶಿಫಾರಸ್ಸುಗಳೆಲ್ಲವನ್ನೂ ಕ್ರೋಢೀಕರಿಸಿ ಮಾಡಿದ್ದಾರೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾಗಿರುವ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದು ನೂರಕ್ಕೆ ನೂರು ನಿಜ. ನಾವು ಇದನ್ನು ಒಂದು ಇಲಾಖೆ ಎಂದು ಪರಿಗಣನೆ ಮಾಡದೇ ಇದನ್ನು ನಾವು ಅಧಿಕಾರ ವಿಕೇಂದ್ರೀಕರಣ ಮತ್ತು ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಒಳಗಡೆ ಇದನ್ನು ಅರ್ಥ ಮಾಡಿಕೊಂಡು ಅದರ ಬಗ್ಗೆ ಬೆಳಕು ಚೆಲ್ಲಬೇಕು ಎಂದು ಇದ್ದೇವೆ. ವಾಸ್ತವವಾಗಿ ನೀವು ಹಾಗೂ ನಾವು ಎಲ್ಲಾ ಶಾಸಕರಾಗಿ ಗ್ರಾಮೀಣ ಭಾಗದಿಂದ ಬಂದಿರುವಂತಹವರು ಆಗಿದ್ದೇವೆ. ಈಗ ಇರುವ ವ್ಯವಸ್ಥೆ ಬಗ್ಗೆ ಕೇಳುವುದು, ಹೆಚ್ಚಿಗೆ ನಾವು ಕೇಳುವುದು ಬೇಡ. ಈಗಿರುವ ವ್ಯವಸ್ಥೆ, as of now ಈಗ ಏನಿದೆ, ಅದರೊಳಗೆ ಇವತ್ತು ಗ್ರಾಮ ಪಂಚಾಯಿತಿಗೆ ನಾವು ಹೆಚ್ಚಿನ ಅಧಿಕಾರ ಕೊಟ್ಟಿದ್ದೇವೆ. ಮತ್ತೆ ಹಣಕಾಸನ್ನು ಕೂಡ ಒದಗಿಸಿದ್ದೇವೆ. ಮತ್ತೆ ಅವರುಗಳಿಗೆ ನಿರ್ದಿಷ್ಟವಾದ ಕಾರ್ಯಕ್ರಮಗಳು, ರಸ್ತೆಗಳು, ತಿಪ್ಪೆಗಳು,

ಚರಂಡಿಗಳು ಎಂದು ಹೇಳುತ್ತೇವೆ. ನನ್ನ ಕಟು ಅನುಭವವೇನೆಂದರೆ, ನಾನು ಅಧಿಕಾರ ವಿಕೇಂದ್ರೀಕರಣ ಆಗಲೇಬೇಕು ಎನ್ನುವಂತಹ ಬದ್ಧತೆ ಇರುವಂತಹವನು. ಇವತ್ತಿಗೂ ಒಬ್ಬ ಶಾಸಕನಾಗಿ ನಾನು ವಿಧಾನಸಭೆಗೆ ಮಾತ್ರ ಶಾಸನ ರಚನೆಗೆ ಮಾತ್ರ ಸೀಮಿತನಾಗಿರಬೇಕು, ನಿಮ್ಮೆಲ್ಲಾ ಅಧಿಕಾರವನ್ನು ನಮ್ಮವರೇ ಅಲ್ಲಲ್ಲೇ ಅವರವರೇ ಮಾಡಿಕೊಳ್ಳಬೇಕು ಎನ್ನುವಂತಹ ಆದರ್ಶವನ್ನು ಹೊಂದಿರುವಂತಹ ಶಾಸಕ. ಆದರೆ, ಸಮಸ್ಯೆ ಏನಾಗುತ್ತಿದೆ ಎಂದರೆ, ಒಬ್ಬ ಶಾಸಕನಿಗೆ ನಮ್ಮ ಹಳ್ಳಿಗಳಿಂದ ಫೋನ್ ಬರುತ್ತದೆ, ನಮ್ಮ ಮನೆಯ ಮುಂದೆ ರಸ್ತೆ, ಚರಂಡಿ ಕ್ಲೀನ್ ಮಾಡಿಲ್ಲ ಎನ್ನುವ ಫೋನ್‌ಗಳೂ ಶಾಸಕರಿಗೇ ಬರುತ್ತಿದೆ. ಇದು ಒಂದು ವಾಸ್ತವ. ಅಂದರೆ, ಎಲ್ಲೋ ಒಂದು ಕಡೆಗೆ ನಾವು ಸ್ವಯಂ ಆಡಳಿತ ಎಷ್ಟರಮಟ್ಟಿಗೆ ಅರ್ಥಪೂರ್ಣವಾಗಿ ಆ ಹಂತದಲ್ಲಿ ನಡೆಯುತ್ತಿದೆ ಎನ್ನುವುದನ್ನೂ ಕೂಡ ಒಂದು ಪರಾಮರ್ಶೆ ಮಾಡುವ ಅಗತ್ಯವಿದೆ ಎನ್ನುವುದು ನನ್ನ ಭಾವನೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ಈಗ ಪಾಟೀಲರು ಒಂದು ಗಮನಿಸಬೇಕು ಎಂದು ಹೇಳಿದರೆ ಈ ರಸ್ತೆಗಳನ್ನು ಕೊಡುತ್ತಾ, ಸಾಗರಕ್ಕೆ, ಶಿರಸಿಗೆ, ಶೃಂಗೇರಿಗೆ, ಮೂಡಿಗೆರೆಗೆ ಹಾಗೂ ಬೆಂಗಳೂರು ಯಲಹಂಕಕ್ಕೆ ಮತ್ತು ದಾಸರಹಳ್ಳಿ ಶಾಸಕರು ಇಲ್ಲಿಯೇ ಕುಳಿತಿದ್ದಾರೆ, ಅವರಿಗೂ ಗ್ರಾಮೀಣ ಪ್ರದೇಶವೇ ಬರುತ್ತದೆ. ಅವರಿಗೂ ಸಹ 20 ಕಿ.ಮೀ. ಉದ್ದದ 'ನಮ್ಮ ಗ್ರಾಮ ನಮ್ಮ ರಸ್ತೆ' ಕೊಟ್ಟು 3,000 ಕಿ.ಮೀ ಲಭ್ಯವಿರುವ ನಮಗೂ ಸಹ 20 ಕಿ.ಮೀ. ಕೊಡುತ್ತಾರೆ. ನಾವು ಇವರಿಗೆ ಕೊಟ್ಟಿರುವುದು ತಪ್ಪು ಎಂದು ಹೇಳುತ್ತಿಲ್ಲ. ಅಂದರೆ, ಇದು ಅವೈಜ್ಞಾನಿಕವಾಗುತ್ತದೆ. ವೈಜ್ಞಾನಿಕವಾಗಿ ಕಿ.ಮೀ. ಆಧಾರದ ಮೇಲೆ ಮತ್ತು ಮಳೆಯ ಸಾಂದ್ರತೆ ಆಧಾರದ ಮೇಲೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಎಲ್ಲೋ ಒಂದು ಕಡೆಗೆ ಅದು ತಪ್ಪಾಗುತ್ತಿದೆ. ತಾವು ಅದನ್ನು ಗಮನಿಸಬೇಕು ಎಂದು ತಮ್ಮನ್ನು ಕೇಳುತ್ತೇನೆ.

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಈಗಾಗಲೇ ಪ್ರಸ್ತಾಪ ಮಾಡಿದರು. ಮಲೆನಾಡಿನಲ್ಲಿ ಒಟ್ಟು. . .

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಸುಮಾರು ಒಂದು ಲಕ್ಷ ಕಿ.ಮೀ. ಇನ್ನೂ ಕಡಿಯಾಗಲಿಲ್ಲ. ಕಡಿಯಾಗಿರುವುದು ಡಾಂಬರಾಗಲಿಲ್ಲ. ಮಣ್ಣು ರಸ್ತೆ ಇರುವುದು ಕಡಿಯಾಗಲಿಲ್ಲ. ಒಂದು ಲಕ್ಷ ಕಿ.ಮೀ. ಕಡಿಯಾಗಿರುವುದು ಡಾಂಬರಾಗಲಿಲ್ಲ. ಹಳ್ಳಿಯ ರಸ್ತೆ ಸಂಪರ್ಕಗಳನ್ನು ಸರಿಪಡಿಸುವುದಕ್ಕೆ ಆದ್ಯತೆಯನ್ನು ಕೊಡದೇ ನಾವು ಇನ್ನೂ ಬಾತ್‌ರೂಂಗೆ shower and shampoo ಎಂದು ಹೇಳಿಕೊಂಡು ಇದ್ದರೆ ಯಾರು ನಮ್ಮನ್ನು ನಂಬುತ್ತಾರೆ? ಯಾರು ನಮ್ಮನ್ನು ನಂಬುತ್ತಾರೆ? ರಸ್ತೆ ಸಂಪರ್ಕ ಸರಿ ಮಾಡಿದರೆ ಜನಜೀವನಕ್ಕೆ ಅದು ಹೇಗೆ ಒಂದು ಆರ್ಥಿಕ ಶಕ್ತಿಯನ್ನು ರಸ್ತೆಗಳು ಕೊಡುತ್ತದೆ ಎನ್ನುವುದನ್ನು ನಾನು ನಿಮಗೆ ಹೇಳಬೇಕಾಗಿಲ್ಲ. ನೀವು ಅದನ್ನು ಎಷ್ಟು ಚೆನ್ನಾಗಿ ವಿಸ್ತರಿಸಿ ಹೇಳುತ್ತೀರಿ ಎಂಬುದು ನನಗೆ ಗೊತ್ತಿದೆ. ಆದರೆ, ಅದಕ್ಕೆ ಆದ್ಯತೆಯಿಲ್ಲ. ಇವರು ಏನು ಹೇಳುತ್ತಾರೆ ಎಂದರೆ, ಇಲ್ಲಿ ನಾನು ನೋಡಿದರೆ 'ನಮ್ಮ ಗ್ರಾಮ ನಮ್ಮ ರಸ್ತೆ' ಕಾರ್ಯಕ್ರಮದಡಿಯಲ್ಲಿ 2,118 ಕಿ.ಮೀ. ಅನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಈ ವರ್ಷ ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ಎಂಬ ಅನುಮಾನ ನನಗಿದೆ. ನಾನು ಹೇಳಿದ್ದು ಕಳೆದ ವರ್ಷದ್ದು. ಈ ವರ್ಷದ್ದು ನಮಗೆ ಇನ್ನೂ proposal ಅನ್ನು ಕೇಳಿಲ್ಲ. ನಮ್ಮ ಹತ್ತಿರ ತೆಗೆದುಕೊಳ್ಳುವುದಕ್ಕೂ ಮುಂದಾಗಲಿಲ್ಲ. ಬಂದಿಲ್ಲ. ಈ ವರ್ಷದ್ದು ಇಲ್ಲ. ಈ ವರ್ಷದ್ದು ಏನಾಯಿತು ಎಂಬುದು ಗೊತ್ತಿಲ್ಲ. ಕಳೆದ ವರ್ಷದ್ದು 2118 ಕಿ.ಮೀ. ಇದೆ. ಅದರ ಪ್ರಗತಿಯ ವಿವರಗಳಿಗೆ ಹೋದರೆ ಆ ಪ್ರಗತಿ ಎಷ್ಟು ಕಿ.ಮೀ. ಆಯಿತು, ಏನು ಆಯಿತು, ಎಲ್ಲಿ ಹೋಯಿತು ಎಂದರೆ ನಮಗೆ ಆಘಾತವಾಗುತ್ತದೆ. ಗ್ರಾಮೀಣ ಭಾಗದ ರಸ್ತೆಗಳಿಗೆ ಆದ್ಯತೆಯೇ ಇಲ್ಲ. RDPR ಇಲಾಖೆಯಲ್ಲಿ ರಸ್ತೆಗಳನ್ನು ನಿರ್ಲಕ್ಷ್ಯ ಮಾಡಿರುವಷ್ಟು ಇನ್ನು ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ. ಗ್ರಾಮೀಣ ಭಾಗದ ಜನಜೀವನಕ್ಕೆ ಇವತ್ತು ಓಡಾಟಕ್ಕೆ ಎಷ್ಟು ಕಷ್ಟವಾಗಿದೆ ಎಂದರೆ,

ಅಂದರೆ ಇವತ್ತು NWRTC ಅದು ಇದು ಆಗಿದೆಯೆಲ್ಲಾ, ಕಂಪನಿಗಳು ಆಗಿವೆ. ಇವತ್ತು ಆ ಬಸ್‌ನವರನ್ನು ಕೇಳಿ ಅವರು ಎಷ್ಟು ಕಷ್ಟ ಅನುಭವಿಸುತ್ತಿದ್ದಾರೆ ಎಂದು ಕೇಳಿ. ಆ ಬಸ್‌ನ ವ್ಯವಸ್ಥೆಯನ್ನು ನಂಬಿಕೊಂಡಂತಹ ಜನಜೀವನದ ವ್ಯವಸ್ಥೆಯಿದೆ. ಇವತ್ತು ಅವರಿಗೆ ಓಡಾಡುವುದಕ್ಕೆ ಆಗುತ್ತಿಲ್ಲ. ವಾಹನ ಹೋಗಲಿಕ್ಕೆ ಆಗುತ್ತಿಲ್ಲ. ಅವರು ಜನಜೀವನ ನಡೆಸುವುದಕ್ಕಾಗುತ್ತಿಲ್ಲ. ಈಗ ಮಳೆಗಾಲ ಶುರುವಾಗಿದೆ. ಜನರು 8–10 ಕಿ.ಮೀ ನಡೆಯಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ನಮ್ಮ ಮಲೆನಾಡಿನ ಜಿಲ್ಲೆಗಳಲ್ಲಿ ಸಣ್ಣ–ಸಣ್ಣ ಫುಟ್ ಬ್ರಿಡ್ಜ್‌ಗಳು ಬೇಕು. ಬ್ರಿಡ್ಜ್‌ಗಳು ಬೇಕು. ಇವತ್ತಿಗೂ ಜನರಿಗೂ ಆರೋಗ್ಯ ಸರಿಯಿಲ್ಲದಿದ್ದರೆ ಅವರನ್ನು ಕಂಬಳಿಯಲ್ಲಿ ಕಟ್ಟಿ ಕೋಲಿನಲ್ಲಿ ನೇತಾಕಿಕೊಂಡು ಬರುತ್ತಿದ್ದಾರೆ. ನಮ್ಮನ್ನು ಕೇಳುತ್ತಾರೆ. ನೀವೆಲ್ಲಾ ಶಾಸಕರಾಗಿ ಆಯ್ಕೆಯಾಗಿದ್ದೀರಿ, ನಮಗೆ ಒಂದು ಬ್ರಿಡ್ಜ್ ಮಾಡಿಸಿ ಕೊಡುವುದಕ್ಕಾಗುವುದಿಲ್ಲವೇ? 5, ಲಕ್ಷ 10 ಲಕ್ಷ ಹಾಗೂ 20 ಲಕ್ಷ ರೂಪಾಯಿ ಮೌಲ್ಯದ ಬ್ರಿಡ್ಜ್ ಬೇಡವೇ ಎಂದು ಕೇಳುತ್ತಾರೆ. ಅವರ ವಾಹನಗಳು ಹೋಗುವುದಕ್ಕೆ ಆಗುವುದಿಲ್ಲ. ಆರೋಗ್ಯ ಸರಿಯಿಲ್ಲದಿದ್ದರೆ ಏನು ಮಾಡಬೇಕು? ಆರು ತಿಂಗಳುಗಳಿಗೆ ಅಗುವಷ್ಟು ಉಪ್ಪಿನಿಂದ ಹಿಡಿದು, ಅಕ್ಕಿ, ಕಾಳು, ಬೇಳೆ ಹಾಗೂ ಮೆಣಸಿನಿಂದ ಹಿಡಿದು ದಾಸ್ತಾನು ಮಾಡಿ ಇಟ್ಟುಕೊಳ್ಳಬೇಕು. ಇವತ್ತು ಇಂತಹ ಸ್ಥಿತಿಯಲ್ಲಿದ್ದೇವೆ. ಹಾಗಾಗಿ RDPR ಇಲಾಖೆಯಲ್ಲಿ ರಸ್ತೆಗಳಿಗೆ, ಫುಟ್ ಬ್ರಿಡ್ಜ್‌ಗಳಿಗೆ ಹಾಗೂ ಬ್ರಿಡ್ಜ್‌ಗಳಿಗೆ ಆದ್ಯತೆಯನ್ನು ಕೊಡಲೇಬೇಕು. ಅದನ್ನು ಕೊಡಲೇಬೇಕು. ಈ ವ್ಯವಸ್ಥೆಯ ಬಗ್ಗೆ ನಮಗೇ ನಾಚಿಕೆಯಾಗಬೇಕು. ಈ ವ್ಯವಸ್ಥೆಯ ಮೂಲಕ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಆಗಿಲ್ಲವೆಂದರೆ ಯಾರು ತಲೆತಗ್ಗಿಸಬೇಕು? ನಮ್ಮನ್ನು ಜನರು ಕೇಳುತ್ತಾರೆ. ಏನು ಸರ್ ನಿಮ್ಮ ಯೋಜನಾ ಆಯೋಗದಿಂದ ಹಿಡಿದು ನಿಮ್ಮಲ್ಲಿ ಏನೇನೋ ವ್ಯವಸ್ಥೆಯಿದೆ ಅಂದರೆ ಅಲ್ಲಿ ಕುಳಿತುಕೊಂಡು plan ಮಾಡುವವರು ಇದ್ದಾರೆ, ಈ ಕಷ್ಟಕ್ಕೆ ಏಕೆ plan ಮಾಡುವುದಿಲ್ಲ ಎಂದು ಕೇಳುತ್ತಾರೆ. ಏಕೆಂದರೆ plan ಮಾಡುವವರಿಗೆ ಹಳ್ಳಿಗಳಿಗೆ ಬಂದಿದ್ದರೆ ಜನರ ಕಷ್ಟ–ಸುಖ ಏನು ಎಂಬುದು ಗೊತ್ತಾಗುತ್ತಿತ್ತು. ಅವರು ಅಲ್ಲಿ ಫುಟ್ ಬ್ರಿಡ್ಜ್ ಹಾಗೂ ಬ್ರಿಡ್ಜ್‌ಗಳು ಇಲ್ಲದೇ ಕಷ್ಟಪಡುತ್ತಿದ್ದಾರೆ. ರಸ್ತೆಗಳಂತೂ ಈ ಸ್ಥಿತಿಯಲ್ಲಿವೆ.

ಇನ್ನು ಮುಂದಿನದು ಏನೆಂದರೆ, ನಮ್ಮ ಆದ್ಯತೆಯ ಒಂದು ವಿಷಯ ನೀರು. ನೀರಿನ ವಿಷಯದ ಬಗ್ಗೆ ಹೇಳುವುದಾದರೆ, ಇಷ್ಟು ವರ್ಷಗಳಾಗಿದ್ದರೂ ಸಹ ಜನರಿಗೆ ಕುಡಿಯುವುದಕ್ಕೆ ನೀರು ಒದಗಿಸುವುದಕ್ಕೆ ಆಗಿಲ್ಲ. ಹೊಲಕ್ಕೆ ನೀರು ಕೊಡಲಿಕ್ಕೆ ಆಗಿಲ್ಲವೆನ್ನುವುದು ಬೇರೆ ವಿಷಯವಾಗುತ್ತದೆ. ಕುಡಿಯುವುದಕ್ಕೆ ನಮಗೆ ನೀರು ಕೊಡುವುದಕ್ಕೆ ಆಗಲಿಲ್ಲ. ಆ fluoride content ನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕೋಲಾರ, ತುಮಕೂರು ಹಾಗೂ ಹಾಸನ ಇತ್ಯಾದಿ ಜಿಲ್ಲೆಗಳಲ್ಲಿ ಸಮಸ್ಯೆಯಿದೆ. ನಮಗೆ ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಆಗುತ್ತಿಲ್ಲ. ಇವರು ಅದಕ್ಕೆ ಬಹಳ ಒಳ್ಳೆಯದಾಗಿ 'ಶುದ್ಧ ನೀರಿನ ಘಟಕಗಳು' ಎಂದು ಮಾಡಿದ್ದಾರೆ. ಇವರು ಅದಕ್ಕೆ ಏನು ಪ್ರಚಾರ, ಬಹುಮಾನ, ಪ್ರಸಿದ್ಧಿ ಮಾಡಿದ್ದಾರೆ. ಅದಕ್ಕೆ ಸಂತೋಷಪಡುತ್ತೇವೆ. ಆದರೆ, ಅದು ಎಷ್ಟು ಕಡೆಗಳಲ್ಲಿ ಆಗಿದೆ? ನನ್ನ ಹತ್ತಿರ ಘೋಷಿಸಿರುವ ಶುದ್ಧ ನೀರಿನ ಘಟಕಗಳ ಅಂಕಿ-ಸಂಖ್ಯೆಗಳಿವೆ. ಎಷ್ಟು ಕಡೆಗಳಲ್ಲಿ ಅದು install ಆಗಿದೆ, working ಇದೆ ಎನ್ನುವ ಬಗ್ಗೆ ನೀವು ಅಂಕಿ-ಸಂಖ್ಯೆಗಳನ್ನು ತರಿಸಿಕೊಳ್ಳಬೇಡಿ. ಇವರು ಅಂತೂ-ಇಂತೂ ಕೆಲವು ಕಡೆಗಳಲ್ಲಿ ಅಲ್ಲಿ ಇಲ್ಲಿ install ಮಾಡಿದ್ದಾರೆ. ನನಗೆ ಇರುವ ಮಾಹಿತಿ ಪ್ರಕಾರ ಅದು 4,000 ಘಟಕಗಳನ್ನು ತಾವು announce ಮಾಡಿದ್ದೀರಿ ಎಂದು ಕಾಣುತ್ತದೆ. ಆದರೆ, ಅದು 2,000 ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಊರುಗಳಲ್ಲಿ ಮಾತ್ರ ಮೊದಲನೆಯ ಆದ್ಯತೆಯಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿ 400 ಘಟಕಗಳು ಕೂಡ complete ಆಗಲಿಲ್ಲ. ಸ್ವಲ್ಪ ಅಂಕಿ-ಸಂಖ್ಯೆ ವ್ಯತ್ಯಾಸವಿರಬಹುದು. ನಾನು ಅದನ್ನು ಹುಡುಕಿದೆ. ತಕ್ಷಣ ಅದರ ಮಾಹಿತಿ ನನಗೆ ಸಿಗಲಿಲ್ಲ. ಆದರೆ, ಅದು ಇವತ್ತು ಎಲ್ಲಾ ಕಡೆಗಳಲ್ಲಿ failure ಆಗಿದೆ, ಕೆಲಸ ಮಾಡದೇ ಇರುವಂತಹ ಸ್ಥಿತಿಯಲ್ಲಿದೆ. ಅದರ ಬಗ್ಗೆ ನೀವು ಮಾಹಿತಿ ತೆಗೆದುಕೊಳ್ಳಿ. ಶುದ್ಧ ನೀರಿನ ಘಟಕಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ, ಇವತ್ತು ಅದು ಎಷ್ಟು ದೊಡ್ಡ ಪ್ರಮಾಣದಲ್ಲಿ ಅದು ಬೇಕಾಗಿದೆ? ಏಕೆ ಆಗುತ್ತಿಲ್ಲ? Multi Village Water Supply Schemeಗಳನ್ನು ಮಾಡಿದ್ದಾರೆ. Multi Village Water Supply Schemeನ ಪ್ರಗತಿಯ ಬಗ್ಗೆ ನನ್ನ ಹತ್ತಿರಯಿರುವ ನಿರ್ವಹಣೆ ಮುಂಗಡ ಪತ್ರ,

ಎ.ಜಿ ವರದಿ ಮತ್ತು ವಾರ್ಷಿಕ ವರದಿ ಇದೆಲ್ಲವನ್ನು ವಿಶ್ಲೇಷಣೆ ಮಾಡಿ ನೋಡಿದರೆ ಇಲಾಖೆ ಯಾವ ದಾರಿಯಲ್ಲಿ ಹೋಗುತ್ತಿದೆಯೆಂಬುದನ್ನು ನೀವು ನೋಡಬಹುದು. ಇವತ್ತಿನವರೆಗೆ Multi Village Water Supply Schemeಗಳು ಎಷ್ಟಾಗಿವೆ? 2006-07 ರಲ್ಲಿ ಈ ಸ್ಕೀಮ್ ಪ್ರಾರಂಭವಾಗಿದ್ದು, ಇದರಲ್ಲಿ ಎರಡು ಸಾವಿರ ಚಿಲ್ಲರೆ ಹಳ್ಳಿಗಳನ್ನೂ ತೆಗೆದುಕೊಂಡಿದ್ದು, ಇನ್ನೂ ಸಾವಿರ ಹಳ್ಳಿಗಳನ್ನು ಕೂಡ ತಲುಪುವುದಕ್ಕಾಗಿಲ್ಲ ಅದನ್ನು ಪೂರ್ಣಗೊಳಿಸುವುದಕ್ಕಾಗಲಿಲ್ಲ. ಗ್ರಾಮೀಣ ಭಾಗದ ಬಗ್ಗೆ ಯಾವ ಇಚ್ಛಾಶಕ್ತಿಯನ್ನು ತೋರಿಸಿ ನಾವು ಈ ಸದನದಲ್ಲಿ ಇದ್ದೇವೆಂಬ ಪ್ರಶ್ನೆಯನ್ನು ಜನ ಮಾಡುತ್ತಿದ್ದಾರೆ. ಕುಡಿಯುವುದಕ್ಕೆ ನೀರಿಲ್ಲ ನೀವು ಶವರ್, ಶಾಂಪು ಎಂದು ಜನರಲ್ಲಿ ಮತ್ತೊಂದು ಭ್ರಮೆಯನ್ನು ನಿರ್ಮಿಸುತ್ತಿದ್ದೀರಿ. ಶೌಚಾಲಯ ನಿರ್ಮಾಣಕ್ಕೆ ಕೇಂದ್ರ ಸರ್ಕಾರ 9,000 ರೂ.ಗಳನ್ನು ಕೊಡುತ್ತಿದ್ದು, ರಾಜ್ಯ ಸರ್ಕಾರ 3,000 ರೂ.ಗಳನ್ನು ಹಾಕುತ್ತಿದೆ ಈ ಸದನದ ಮೂಲಕ ನಾನು ಪ್ರಧಾನ ಮಂತ್ರಿಗಳನ್ನು ಅಭಿನಂದಿಸಲಿಚ್ಛಿಸುತ್ತೇನೆ. ಇವತ್ತು ಶೌಚಾಲಯದ ಪ್ರಗತಿಯ ಆಶಾಭಾವನೆಯನ್ನು ಹೊಂದಿದೆ. ಆದರೆ ಶೌಚಾಲಯ ಪ್ರಗತಿ ಮಾಡಿರುವುದು ನಿಮ್ಮ ಕಾರಣದಿಂದಲೇ ಎಂದು ನೀವು ಹೇಳಿಕೊಳ್ಳುತ್ತಿದ್ದೀರಿ. ಪರವಾಗಿಲ್ಲ ಹೇಳಿಕೊಳ್ಳಿ, ಒಟ್ಟಾರೆ ಶೌಚಾಲಯ ನಿರ್ಮಾಣವಾಗಲಿ. ಆದರೆ ಕೇಂದ್ರ ಸರ್ಕಾರ 9,000 ರೂ.ಗಳನ್ನು ಕೊಡುವ ಮೂಲಕ ಅದಕ್ಕೆ ವೇಗ ನಿರ್ಮಾಣವಾಗುವ ರೀತಿ ನರೇಂದ್ರ ಮೋದಿಯವರು ಮಾಡಿ ತಮ್ಮ ಬದ್ಧತೆ ಹಾಗೂ ಇಚ್ಛಾಶಕ್ತಿಯನ್ನು ತೋರಿಸಿದ್ದಾರೆ. ಇದರ ಜೊತೆಯಲ್ಲಿ ಈಗ ಶೌಚಾಲಯ ಮಾಡುವಂತಹ ಸಂದರ್ಭದಲ್ಲಿ...........

ಶ್ರೀ ಹೆಚ್.ಕೆ. ಪಾಟೀಲ್:- ನೀವು ತಪ್ಪು ಹೇಳುತ್ತಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾವು ಏನೇ ತಪ್ಪು ಹೇಳಿದ್ದರೂ ಕೂಡ ನೀವು ನಂತರ ಉತ್ತರ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್:- ನಿಮಗೆ ಗೊತ್ತಾಗದೆ ತಪ್ಪು ಹೇಳುತ್ತಿದ್ದೀರಿ. ನೀವು ಮುದ್ದಾಂ ತಪ್ಪು ಹೇಳಿದ್ದರೆ ನಾನು ಉತ್ತರ ಹೇಳುತ್ತಿರಲಿಲ್ಲ. ಕೇಂದ್ರ

ಮತ್ತು ರಾಜ್ಯದ ಪಾಲು ಸೇರಿ ಮೊದಲು 10,000 ರೂ.ಗಳಿತ್ತು, ಈಗ 12,000 ಗಳು ನೇರವಾಗಿ NBI ನಿಂದ ಬರುತ್ತಿದೆ. ಇದು ವ್ಯತ್ಯಾಸ ಅಷ್ಟೆ. 12,000 ರೂ.ಗಳಾಗಿರುವುದು ನಿಜ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇಷ್ಟಾದ ನಂತರ ಕೂಡ ಎಷ್ಟು ಜನರಿಗೆ ಶೌಚಾಲಯ ಇಲ್ಲವೆಂಬ ವರದಿಯನ್ನು ನೋಡಿದರೆ ನೀವು ಸಂತೋಷಪಟ್ಟುಕೊಳ್ಳುವ ದಾಟಿ, ಧ್ವನಿ ಏನಿದೆ, ಅದರ ಬಗ್ಗೆ ನಾವು ತಲೆತಗ್ಗಿಸಲೇಬೇಕಾಗುತ್ತದೆ. ಏಕೆಂದರೆ ಹಿಂದೆ 10,000 ಇತ್ತು, ಈಗ 12,000 ರೂ.ಗಳಾಗಿದೆಯೆಂದು ಬಹಳ ಅಭಿಮಾನದಿಂದ ಹೇಳಿದ್ದೀರಿ. UPA ಸರ್ಕಾರದಲ್ಲಿ 10,000 ರೂ.ಗಳನ್ನು ಕೊಟ್ಟಿದ್ದರು. ನಾವು ನೀವು ಇಷ್ಟಕ್ಕೆ ಸಮಾಧಾನವಾದರೆ ಇನ್ನೇನು ಉಳಿಯುವುದಿಲ್ಲ. ಗದಗವನ್ನು ಒಳಗೊಂಡಂತೆ ಇಂದು ಹಲವಾರು ಜನರು ಬೆಳಿಗ್ಗೆ–ಸಂಜೆಯಾದರೆ ರಸ್ತೆ ಪಕ್ಕದಲ್ಲಿ ನಮ್ಮ ಅಕ್ಕ–ತಂಗಿಯರು, ತಾಯಂದಿರು ಶೌಚಾಲಯವಿಲ್ಲದೆ ತಂಬಿಗೆ ಹಿಡಿದು ಕೂರುವ ದೃಶ್ಯವೇನು ಕಡಿಮೆಯಾಗಿದೆಯೇ? ಇದು ತಲೆತಗ್ಗಿಸುವ ಸ್ಥಿತಿ. ಇವತ್ತಿಗೂ ಕೂಡ ಶೌಚಾಲಯಕ್ಕೆ ರಸ್ತೆ ಪಕ್ಕದಲ್ಲಿ ಕೂರುತ್ತಾರೆ. ನಾವು ಅವರಿಗೊಂದು ಸಾಮೂಹಿಕ ಶೌಚಾಲಯ ಮಾಡಲಿಲ್ಲ. ಸಾಮೂಹಿಕ ಶೌಚಾಲಯಕ್ಕೆ ನೀರಿಲ್ಲ, ಅದನ್ನು ನಿರ್ವಹಣೆ ಮಾಡುವ ಜವಾಬ್ದಾರಿಯಿಲ್ಲ. ಅದನ್ನು ನಾವು ಕೇಳಿದರೆ ನೀವು ಐದು ಮಾಡಿದ್ದೀರಿ, ನಾವು ಆರು ಮಾಡಿದ್ದೇವೆಂದು ಹೇಳುತ್ತಾರೆ. ಈ ಉತ್ತರದಿಂದ ಏನು ಸಮಾಧಾನವಿದೆ, ಶೌಚಾಲಯವಿಲ್ಲ, ನೀರಿನ ವ್ಯವಸ್ಥೆಯಿಲ್ಲ, ಮನೆಗಳನ್ನು ಕೊಡುವುದಕ್ಕಾಗದೆ ಜನರು ಮನೆಗಳಿಲ್ಲದೆ ಎಷ್ಟು ತೊಂದರೆಪಡುತ್ತಿದ್ದಾರೆಂಬುದನ್ನು ನೋಡುತ್ತಿದ್ದೇವೆ. ಗ್ರಾಮೀಣ ಬದುಕಿನಲ್ಲಿ ಇದೆಲ್ಲದಕ್ಕೂ ವಿವರವಿದೆ, ನಾವು ಮಾಡಿರುವುದು ಒಂದು ಕಡೆ ವ್ಯರ್ಥವಾಗುತ್ತಿರುವುದು ಎ.ಜಿ. ರವರು Point out ಮಾಡಿರುವುದು ಕೂಡ ಇದರಲ್ಲಿದೆ. ಇದನ್ನೆಲ್ಲಾ ಜನತೆಗೋಸ್ಕರ ಮಾಡಿಲ್ಲ. ಸರ್ಕಾರದಲ್ಲಿ ಯಾರೋ ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಅನುಕೂಲವಾಗಲೆಂದು ಇದನ್ನು ಮಾಡಿದ್ದೇವೆ. ಇದು ಇವತ್ತು ವ್ಯರ್ಥವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಒಂದು ಕಡೆ

ದುರುಪಯೋಗವಾಗುತ್ತಿರುವುದು, ಮತ್ತೊಂದು ಕಡೆ ಅದನ್ನು ನಿಯಂತ್ರಣ ಮಾಡದಿರುವುದನ್ನು ನಾವು ನೋಡುತ್ತಿದ್ದೇವೆ. ಈ ರೀತಿ ರಸ್ತೆ, ನೀರು, ಶೌಚಾಲಯ ನೈರ್ಮಲ್ಯ ಇವೆಲ್ಲದರ ಬಗ್ಗೆ ಬದ್ದತೆ ಮತ್ತು ಇಚ್ಛಾಶಕ್ತಿಯನ್ನು ತೋರಿಸಿ ನಮ್ಮ ಜನತೆ ಗೌರವದಿಂದ ಇರುವ ಸ್ಥಿತಿ ನಿರ್ಮಾಣವಾಗಬೇಕಾಗಿತ್ತೋ ಅದನ್ನು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಮಾಡುವುದಕ್ಕಾಗಿಲ್ಲ. ಅಂತಹ ಸಮಸ್ಯೆಗಳನ್ನು ನಾವು ಅನುಭವಿಸುತ್ತಿದ್ದೇವೆ. ಇದರ ಕಡೆ ಸರ್ಕಾರ ಆದ್ಯತೆಗಳನ್ನು ತೋರಿಸಬೇಕು. ಇದೆಲ್ಲಾ ಸೇರಿ 10,000 ಕೋಟಿ ರೂ.ಗಳ ಬಜೆಟ್ ಆಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವರಿಗೆ ನಾವು ಹೇಳುವುದೇನೆಂದರೆ, ಅವರಿಗೆ ಹೆಚ್ಚಿನ ಹಣಕಾಸಿನ ನೆರವು ಕೊಟ್ಟು, ಸರಿಯಾಗಿ ಯೋಜನೆಗಳನ್ನು ಮಾಡಿ ಮೂಲಭೂತ ಅಗತ್ಯತೆಗಳನ್ನು ಪೂರೈಸುವುದಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ಕೊಡಬೇಕು. ಆ ರೀತಿ ಮಾಡಿದರೆ ಮಾತ್ರ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿದೆ. ಇಲ್ಲವಾದರೆ ಈ ಸಮಸ್ಯೆಗಳಿಗೆ ಪರಿಹಾರವಿಲ್ಲ. ಆಡಳಿತಾತ್ಮಕ ಇ–ಸ್ವತ್ತಿನಂತಹ ಸಮಸ್ಯೆ ಮಾಡಿಕೊಳ್ಳುವುದು ಇವರ ಸ್ವಯಂಕೃತ ಅಪರಾಧಗಳು, ಆದರೆ ಹಣಕಾಸಿನ ನೆರವಿನ ಮೂಲಕ ರಸ್ತೆ, ನೀರು, ಸೇತುವೆಗಳು, ಶೌಚಾಲಯಗಳು ವಸತಿ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಹೆಚ್ಚಿನ ನೆರವನ್ನು ಸರ್ಕಾರ ಕೊಡಲೇಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಸಚಿವರು ಶಾಶ್ವತವಾಗಿ ಉಳಿಯುವ ಯೋಜನೆಗಳನ್ನು ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಬಹಳ ಗಂಭೀರವಾದ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಅದನ್ನು ನೀವು ತನಿಖೆ ಮಾಡಿಸುವ ಮೂಲಕ ನಿಮ್ಮ ಬದ್ಧತೆ ಮತ್ತು ಇಚ್ಛಾಶಕ್ತಿಯನ್ನು ತೋರಿಸಬೇಕು. ಎರಡು ವಿಷಯಗಳ ಬಗ್ಗೆ ತನಿಖೆಗೆ ಹೇಳುತ್ತೇನೆ. ಮೊದಲು ನೀರಿನ ವಿಷಯದಲ್ಲಿ ಹೇಳುತ್ತಿದ್ದೇನೆ. ನೀರಿನ ವಿಷಯದಲ್ಲಿ ವಿಭಾಗ ಮಾಡಿ ಅದರಿಂದ ಸಮಸ್ಯೆಯಾಗಿರುವ ಬಗ್ಗೆ ಹೇಳಿದ್ದೇನೆ. ದೊಡ್ಡ ಜಾಲವೊಂದು ಬೋರ್‌ವೆಲ್ ತೋಡುವಲ್ಲಿ involve ಆಗಿ ಏನೇನು ಮಾಡುತ್ತಿದ್ದಾರೆಂಬ ವಿಷಯವಿದೆ. ನನಗೆ ತಿಳಿದಿರುವ ಹಾಗೆ RDPR

ಇಲಾಖೆಯಿಂದಲೇ ಲಕ್ಷಾಂತರ ಬೋರ್‌ವೆಲ್‌ಗಳನ್ನು ತೆಗೆಯುತ್ತಾರೆ. ಗಂಗಾಕಲ್ಯಾಣ ಯೋಜನೆಗಳು ಬೇರೆಯಿದೆ. ಸಾಮಾನ್ಯವಾಗಿ ಸುಮಾರು 400–500–800 ಅಡಿಗಳವರೆಗೆ ಹಾಗೂ ಈ ಭಾಗದಲ್ಲಿ 1200–1300 ಅಡಿ ಆಳದವರೆಗೆ ಬೋರ್ ಕೊರೆಯುತ್ತಾರೆ. ಸಾಮಾನ್ಯವಾಗಿ 40 ರಿಂದ 50 ಫೀಟ್ ರಷ್ಟು ಕೇಸಿಂಗ್ ಪೈಪ್ ಹಾಕುತ್ತಾರೆ. ಕಲ್ಲಿನ ಸ್ಥಳ ಸಿಗುವವರೆಗೆ ಕೇಸಿಂಗ್ ಹಾಕುತ್ತಾರೆ. It varies from borewell to borewell. ಅಲ್ಲಿನ ಮಣ್ಣಿನ ಫಲವತ್ತತೆ ಮೇಲೆ ಹಾಕುತ್ತಾರೆ. ಆದರೆ ಇವತ್ತು ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡುವಂತಹ ಏಜೆನ್ಸಿಗಳೇನಿವೆ, ಇದರಲ್ಲಿ ಸರ್ಕಾರದ ಪಾತ್ರ ಎಷ್ಟಿದೆಯೆಂದು ನನಗೆ ಗೊತ್ತಿಲ್ಲ. ಈ ಬಗ್ಗೆ ತನಿಖೆ ಮಾಡಿಸಿ, ನಿಮ್ಮ ಬದ್ಧತೆಯನ್ನು ತೋರಿಸಿ. ಮೂರು ಕ್ವಾಲಿಟಿಯ ಕೇಸಿಂಗ್ ಪೈಪ್‌ಗಳಿವೆ, 'ಎ' ಅಂದರೆ ತೆಳುವು, 'ಬಿ' ಎಂದರೆ ಮಧ್ಯಮ, 'ಸಿ' ಎಂದರೆ ದಪ್ಪ ಈ ರೀತಿ ಕೇಸಿಂಗ್ ಪೈಪ್ ಅಳವಡಿಸಬಹುದು. ಇವರು 'ಬಿ' ಕ್ಲಾಸ್ ಕೇಸಿಂಗ್ ಪೈಪ್ ಹಾಕಬೇಕೆಂದು ಹೇಳುತ್ತಾರೆ. ಇದನ್ನು ಹಾಕುವುದಾದರೆ ಅದರಲ್ಲಿ 6 ಎಂ.ಎಂ. ಕೇಸಿಂಗ್ ಪೈಪ್ ಹಾಕಬೇಕಾಗುತ್ತದೆ. ಅದು ಒಂದು ಮೀಟರ್‌ಗೆ 19 ಕೆ.ಜಿ. ಯಷ್ಟು ತೂಕ ಬರುತ್ತದೆ. ಆದರೆ ಇದರಲ್ಲಿ ದೊಡ್ಡ ಗೋಲ್‌ಮಾಲ್ ನಡೆಯುತ್ತಿದೆ. 1.8 ಎಂ.ಎಂ. ನಿಂದ 2.3 ಎಂ.ಎಂ. ಕೇಸಿಂಗ್ ಪೈಪ್ ಅನ್ನು ಎಲ್ಲಾ ಕಡೆ ಹಾಕುತ್ತಿದ್ದಾರೆ. ಇದು 7 ರಿಂದ 8 ಕೆ.ಜಿ. ತೂಕ ಕೂಡ ಬರುವುದಿಲ್ಲ. Entire lengthಗೆ ಅಲ್ಲ. ಬೋರ್‌ವೆಲ್‌ಗಳಿಗೆ ಕೇಸಿಂಗ್ ಪೈಪ್ ಹಾಕಿದ ನಂತರ ಪ್ರೆಷರ್ ಮಾಡಿದಾಗ ಅದು ಎಲ್ಲೋ ಒಂದು ಕಡೆ ಬೆಂಡ್ ಆಗುವ ಮೂಲಕ ಅಡ್ಡವಾಗಿ ನಿಂತುಕೊಳ್ಳುತ್ತದೆ. ಆಗ ಬೋರ್‌ವೆಲ್‌ಗೆ ಮಷಿನ್ ಇಳಿಸುವುದಕ್ಕೆ ಬರುವುದಿಲ್ಲ. ಆ ರೀತಿ ಸ್ಥಿತಿ ಇದೆ. ಅವೈಜ್ಞಾನಿಕವಾಗಿ ದರ ನಿರ್ಧಾರ ಮಾಡಿರುವುದೇ ಸರ್ಕಾರದ ತಪ್ಪಾಗಿದೆ. 930 ರೂ.ಗಳೆಂದು ದರ ನಿರ್ಧಾರ ಮಾಡಿದ್ದಾರೆ. ಮಾರುಕಟ್ಟೆಯಲ್ಲಿ 1200–1300 ರೂ.ಗಳಿದೆಯೆಂದು ಹೇಳುತ್ತಾರೆ. ಅವೈಜ್ಞಾನಿಕವಾಗಿ ದರ ನಿರ್ಧಾರ ಮಾಡಿಕೊಂಡು ಯಾವ ಗುಣಮಟ್ಟದ ಕೇಸಿಂಗ್ ಪೈಪ್ ಹಾಕಬೇಕು, ಆ ಕೇಸಿಂಗ್ ಪೈಪ್ ಹಾಕದೆ ಇವತ್ತು ಎಲ್ಲಾ ಬೋರ್‌ವೆಲ್‌ಗಳು ವಿಫಲವಾಗುತ್ತಿರುವುದಕ್ಕೆ ಕೇಸಿಂಗ್ ಪೈಪ್

ದೊಡ್ಡ ಕಾರಣವಾಗಿದೆ. ಇಲ್ಲಿ ದೊಡ್ಡ ಲಾಬಿ ಕೆಲಸ ಮಾಡುತ್ತಿದೆ. ಇದೆಲ್ಲಾ ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ತಳ ಮಟ್ಟದಿಂದ ಹಿಡಿದು ಮೇಲ್ಮಟ್ಟದವರೆಗೆ ಇಲಾಖೆಯಲ್ಲಿ ಯಾರು ಕೆಲಸ ಮಾಡುತ್ತಿದ್ದಾರೋ ಅವರೆಲ್ಲರಿಗೂ ಈ ವಿಷಯ ತಿಳಿದಿದೆ. ಇಂದು ಬಹಳ ದೊಡ್ಡ ಅವ್ಯವಹಾರ ನಡೆಯುತ್ತಿದೆ. ಕುಡಿಯುವ ನೀರಿಗಾಗಿ ಬೋರ್‌ವೆಲ್‌ಗಳಿಗೆ ಇಷ್ಟು ಹಣ ಖರ್ಚು ಮಾಡಿದ್ದೇವೆಂದು ಕೊನೆಗೆ ಹೇಳುತ್ತಾರೆ. ಖರ್ಚು ಮಾಡಿರುವ ಹಣ ಏನಾಗಿದೆ? ಈ ರೀತಿ ಅವ್ಯವಹಾರವಾಗುವ ಮೂಲಕ ಜನರಿಗೆ ತಲುಪದೆ ದೊಡ್ಡ ಸಮಸ್ಯೆಯಾಗಿರುವುದನ್ನು ನೋಡುತ್ತಿದ್ದೇವೆ. ಈ ಬಗ್ಗೆ ತಾವು ತನಿಖೆ ಮಾಡಿಸಲೇಬೇಕು. ಸಮಾಜ ಕಲ್ಯಾಣ ಮತ್ತು ಬೇರೆ ಬೇರೆ ಇಲಾಖೆಯ ಜವಾಬ್ದಾರಿ ಕೂಡ ಇದರಲ್ಲಿದೆ. ಎಲ್ಲಾ ಕಡೆ ಬೋರ್‌ವೆಲ್ ತೆಗೆಯುವವರಿಗೂ ಕೂಡ ಇದೇ ಸಮಸ್ಯೆ ಅಗುತ್ತಿರುವುದನ್ನು ನೋಡುತ್ತಿದ್ದೇವೆ. ಬೋರ್‌ವೆಲ್ ತೆಗೆಯುವುದಕ್ಕೆ ಒಂದೊಂದು ಇಲಾಖೆಯಲ್ಲಿ ಒಂದೊಂದು ರೇಟ್ ಇದೆ. ಕೇಸಿಂಗ್ ಪೈಪ್ ವಿಷಯದಲ್ಲಿ ದೊಡ್ಡ ಅವ್ಯವಹಾರ ನಡೆಯುತ್ತಿದೆ, ಈ ಬಗ್ಗೆ ತನಿಖೆ ಮಾಡಿಸುವ ಮೂಲಕ ತಮ್ಮ ಇಚ್ಛಾಶಕ್ತಿಯನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇದೇ ಇಲಾಖೆಯಲ್ಲಿ ನೂತನ ನೀರು ಮತ್ತು ನೈರ್ಮಲ್ಯ ನೀರು ಸರಬರಾಜು ಗ್ರಾಮೀಣ ವಿಭಾಗವೆಂದು ತಾವೇನು ಮಾಡಿದ್ದೀರಿ. ಅದರಲ್ಲಿ AEE ಗಳನ್ನು ಬಿಟ್ಟರೆ ಬೇರೆ ಯಾರೂ ಇಲ್ಲವೆಂದು ಕಾಣುತ್ತದೆ. ಬೇರೆ ಬೇರೆ ಕ್ಷೇತ್ರದ ಬಗ್ಗೆ ನನಗೆ ಗೊತ್ತಿಲ್ಲ. AEE ಒಬ್ಬರು ಅನೇಕ ಕಡೆಗಳಲ್ಲಿದ್ದಾರೆ. ಇನ್ನೂ ಅನೇಕ ಕಡೆಗಳಲ್ಲಿ ಅವರೂ ಕೂಡ ಇಲ್ಲ. ಪ್ರತ್ಯೇಕ ವ್ಯವಸ್ಥೆ ಇಲ್ಲ ಅವರಿಗೆ ಇನ್ನೂ ಪ್ರತ್ಯೇಕ ಕಛೇರಿಯೆಂದು ಆಗಿಲ್ಲ. ಇದನ್ನು ಗಂಭೀರವಾಗಿ ಹೇಳುತ್ತಿದ್ದು ಈ ವಿಷಯವನ್ನು ಗಮನಿಸಿ ಏನು ಮಾಡಬೇಕೆಂದು ತಾವು ಹೇಳಬೇಕು. ಇನ್ನೂ ಒಬ್ಬ AEE ಸರಿಯಾಗಿ ನೇಮಕವಾಗಿಲ್ಲ, ಅವರಿಗೆ ಸ್ವಂತ ಕಛೇರಿಯಿಲ್ಲ, ಅವರಿಗೆ ಇಷ್ಟು ಹಣಕಾಸು ಎಂದು ಈ ವರ್ಷ ನಿಗದಿಯಾಗುತ್ತಿದೆ. ಈ ಬಗ್ಗೆ ಕೂಡ ಇನ್ನೂ ಸ್ಪಷ್ಟತೆಯಿಲ್ಲ. 35 Division and 175 Sub Division ಒಟ್ಟು 210 Division and Sub Division ಗಳು ನಮ್ಮ

ರಾಜ್ಯದಲ್ಲಿ ಆಗುತ್ತಿವೆ. ಆದರೆ ಇವರಿಗೆ ಕಂಪ್ಯೂಟರ್, ಕುಳಿತುಕೊಳ್ಳುವುದಕ್ಕೆ ಕುರ್ಚಿ, ಟೇಬಲ್, ಕುರ್ಚಿ ಕಪಾಟು ಎಲ್ಲವೂ supply ಆಗಿದೆ. ಅಲ್ಲಿನ ವ್ಯವಸ್ಥೆ ಏನೆಂದೇ ಗೊತ್ತಿಲ್ಲ. ಪೂರ್ವಸಿದ್ಧತೆಯನ್ನು ಮಾಡದೇ, ಸಿಬ್ಬಂದಿಗಳೇ ಇಲ್ಲದೇ table, cupboard, computer, ಕುರ್ಚಿ, ಇತ್ಯಾದಿ supply ಆಗಿದೆ. ಒಂದೊಂದು Sub Division ಗೆ ಸುಮಾರು 10 ಲಕ್ಷ ರೂ.ಗಳಿಗೂ ಹೆಚ್ಚು ಖರ್ಚಾಗಿದೆ. ನೀವು supply ಮಾಡಿರುವಂತಹ ಉಪಕರಣಗಳನ್ನು third party ಯಂತಿರುವ ನಿಮಗೆ ವಿಶ್ವಾಸಾರ್ಹತೆ ಹೊಂದಿರುವ ಒಂದು ಸಂಸ್ಥೆಯಿಂದ ಇದನ್ನು ತನಿಖೆ ಮಾಡಿಸಿ. AEE table ಎಂದು supply ಮಾಡಿರುವುದಕ್ಕೆ ರೂ.49,000/–ಗಳ ಖರ್ಚನ್ನು ತೋರಿಸಿದ್ದಾರೆ. Quotation ಅಥವಾ tender ಅನ್ನು e-procurement ಮುಖಾಂತರ ಯಾವ ರೀತಿ ತೆಗೆದುಕೊಳ್ಳಬೇಕಿತ್ತು ಎನ್ನುವುದು ತಮಗೆ ಗೊತ್ತಿದೆ. ಹಾಗಾಗಿ ಯಾರು ಹೇಗೆ ತೆಗೆದುಕೊಂಡಿದ್ದಾರೆ ಮತ್ತು ಇತ್ಯಾದಿ ಬೇರೆ ವಿಷಯಗಳೂ ಇದ್ದು, ನಾನು ಅವುಗಳನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. Furniture supply ಮಾಡುವ ಸಮಯದಲ್ಲಿ ಯಾರಿಂದ ತೆಗೆದುಕೊಳ್ಳಬೇಕೆಂಬ ಬಗ್ಗೆ ಬಹಳಷ್ಟು ನಿಯಮಗಳಿವೆ. ಇದಕ್ಕೆಂದೇ ಟೆಂಡರ್ ಪ್ರಕ್ರಿಯೆ, e-procurement ಎನ್ನುವ ವ್ಯವಸ್ಥೆ ಇದೆ. ತಮಗೆ ಗೊತ್ತಿಲ್ಲದೇ supply ಆಗಿರುವುದಿಲ್ಲ. ಆದರೂ ಒಂದು ಸಾರಿ ಯಾವ ರೀತಿ supply ಆಗಿದೆ ಎನ್ನುವುದನ್ನು ನೋಡಿ, ಅದರ ಬಗ್ಗೆ ಸದನದಲ್ಲೂ ಬೆಳಕು ಚೆಲ್ಲಿ. 49,000/– ರೂ.ಗಳೆಂದು ಸರಬರಾಜು ಮಾಡಿರುವ ಟೇಬಲ್ ಬೆಲೆ ಮಾರುಕಟ್ಟೆಯಲ್ಲಿ 20,000/– ರೂ.ಗಳಿಂದ 25,000 ರೂ.ಗಳಿಗೆ ದೊರೆಯುತ್ತದೆ. ಏನೇ ಮಾಡಿದರೂ ಇದಕ್ಕಿಂತಲೂ ಜಾಸ್ತಿಯಾಗುವುದಿಲ್ಲ ಮತ್ತು ಸಾಧ್ಯವೇ ಇಲ್ಲ. ಆದರೆ ಇವರು 94,000/– ರೂ.ಗಳ ಖರ್ಚನ್ನು ತೋರಿಸಿರುತ್ತಾರೆ. ಹಾಗೆಯೇ ಇದರ ಜೊತೆಯಲ್ಲಿ ಕುರ್ಚಿ, ಕಪಾಟು ಅನ್ನು ಕೊಟ್ಟಿದ್ದು, ಅವುಗಳಿಗೆ 26,000/– ರೂ.ಗಳ ಖರ್ಚನ್ನು ಹಾಕಿರುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಇವುಗಳ ಬೆಲೆ 8000/– ದಿಂದ 10,000/– ರೂ.ಗಳೂ ಇಲ್ಲ. ಅವುಗಳಿಗೆ ಸುಮಾರು 26,000/– ರೂ.ಗಳ ಖರ್ಚನ್ನು ಹಾಕಿದರೆ ಹೇಗೆ? ಹೀಗೆ ಪ್ರತಿಯೊಂದರಲ್ಲೂ ಅಲ್ಲಿ

ಮೋಸವಾಗಿರುತ್ತದೆ. ಗ್ರಾಮೀಣ ನೀರು ಸರಬರಾಜು ಇಲಾಖೆಯಲ್ಲಿ ಕುಳಿತುಕೊಳ್ಳುವವರು ಯಾರೆಂದು ಗೊತ್ತಿಲ್ಲ. AEE posting ಬಿಟ್ಟರೆ ಅಲ್ಲಿ ಯಾವುದೇ ರೀತಿಯ postings ಆಗಿರುವುದಿಲ್ಲ. ಆದರೂ ಈ ವಸ್ತುಗಳೆಲ್ಲವೂ supply ಆಗಿರುತ್ತದೆ. ಇವೆಲ್ಲವೂ ಬೇಕೇ ಹೊರತು ಬೇಡವೆಂದು ಹೇಳುತ್ತಿಲ್ಲ. ಆದರೆ posting ಆದ ನಂತರ supply ಮಾಡಬೇಕಿತ್ತು. ಅಲ್ಲಿ ಏನೂ ಇಲ್ಲ. ನೀವು ಇಂತಹ ದಿನದೊಳಗೆ posting ಮಾಡಿ, ಆ ಕುರ್ಚಿಗಳೆಲ್ಲವನ್ನು fill up ಮಾಡುತ್ತೇವೆ ಮತ್ತು ಕಬೋರ್ಡ್‌ನಲ್ಲಿ ಕೆಲವೊಂದು ಪುಸ್ತಕಗಳನ್ನಿಡುತ್ತೇವೆ ನ್ನುವುದಾದರೂ ಹೇಳಿ. ಆಗ ನಾವು ಈ ವ್ಯವಸ್ಥೆ ಬಗ್ಗೆ ಒಂದು ವಿಶ್ವಾಸವನ್ನಿಡುತ್ತೇವೆ. ಅದೂ ಇಲ್ಲ. 49,000/– ರೂ.ಗಳು ಎಲ್ಲಿ, 20,000/–, 25,000/– ರೂ.ಗಳೆಲ್ಲಿ? ತರಾತುರಿಯಲ್ಲಿ ಈ ರೀತಿಯ supply ಏಕೆ ಆಗಿದೆ? ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಗದಗದಲ್ಲಿ ವಿಶ್ವವಿದ್ಯಾಲಯವನ್ನು ಮಾಡಿ ಆ ಊರನ್ನು ಚೆನ್ನಾಗಿ ಮಾಡಬೇಕೆಂದು ಅಂದುಕೊಂಡಿದ್ದೀರಿ. ಗದಗ ಜಿಲ್ಲೆಗೆ ನೀವು ಏನೇನು ಬೇಕೋ ಎಲ್ಲವನ್ನೂ ಮಾಡುತ್ತಿದ್ದೀರಿ. ಇದಕ್ಕೆ ನಾನೂ ಸಹ ಸಂತೋಷ ವ್ಯಕ್ತಪಡಿಸುತ್ತೇನೆ. ಒಟ್ಟಿನಲ್ಲಿ ಗದಗ ಒಂದು ಒಳ್ಳೆಯ ಕ್ಷೇತ್ರವಾಗಬೇಕು. ನೀವು ಗದಗವನ್ನು ಬಿಟ್ಟು ಬೇರೆ ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿಯೂ ಸಹ ವಿಶ್ಲೇಷಣೆ ಮಾಡಿ ಬನ್ನಿ. ಈ ರೀತಿಯ ಅವ್ಯವಸ್ಥೆಗಳು ಏನೇನಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಮಾನ್ಯ ಸಚಿವರು ಗದಗಕ್ಕೆ ಎಷ್ಟು ಸಾರಿ ಹೋಗಿ ಬಂದಿದ್ದಾರೆ ಎನ್ನುವ ಬಗ್ಗೆ ಏನೂ ಹೇಳುವುದಿಲ್ಲ. ಆದರೆ ಹಿರಿಯ ಸಚಿವರಾದ ಮಾನ್ಯ ಹೆಚ್.ಕೆ. ಪಾಟೀಲ್ ಅವರು ಕೇವಲ ಗದಗ ಕ್ಷೇತ್ರಕ್ಕೆ ಸೀಮಿತವಾದರೆ ಹೇಗೆ? ರಾಜ್ಯದ ಈ ಆಗುಹೋಗುಗಳ ಬಗ್ಗೆ ಯಾರು ನೋಡುತ್ತಾರೆ, ಯಾರು ಹೇಳುತ್ತಾರೆ? ಈ ವಿಷಯವನ್ನು ನಾವು ಗಂಭೀರವಾಗಿ ಯೋಚನೆ ಮಾಡಬೇಕಾದ ಸಂದರ್ಭವಿದೆ. ಹಿರಿಯ ಸಚಿವರುಗಳು ಅಧಿಕಾರಿ ವರ್ಗಗಳನ್ನು ತಳ ಮಟ್ಟದಿಂದ ಹಿಡಿದು ಮೇಲಿನವರೆಗೆ ಪರಿಶೀಲಿಸಬೇಕು. ಇವರು ಸಮರ್ಪಕವಾಗಿ ಪಾರದರ್ಶಕವಾಗಿ ಎಲ್ಲಿಯವರೆಗೆ ಕೆಲಸ ನಿರ್ವಹಿಸುವುದಿಲ್ಲವೋ ವ್ಯವಸ್ಥೆಯಲ್ಲಿ ವಿಶ್ವಾಸ

ಬರುವುದಕ್ಕೆ ಸಾಧ್ಯವೇ ಇಲ್ಲ. ಈ ರೀತಿಯ ಒಂದು ಸ್ಥಿತಿ ನಿರ್ಮಾಣವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಜನರು ಮತ್ತಷ್ಟು ಭ್ರಮ ನಿರಸನಗೊಂಡು ವಿಶ್ವಾಸ ಕಳೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ. ನಾನು ಈ ಎಲ್ಲಾ ವಿಷಯಗಳ ಜೊತೆಯಲ್ಲಿ ಈ ವರ್ಷದ ಬಜೆಟ್‌ನಲ್ಲಿ ಅಂದರೆ 2015–16ನೇ ಸಾಲಿನಲ್ಲಿ ಹೊಸ ಯೋಜನೆಗಳನ್ನು ಘೋಷಿಸಿದ್ದಾರೆ. ಹೊಸ ಯೋಜನೆಗಳನ್ನು ಘೋಷಿಸಿರುವುದರೊಳಗೆ, ಮತ್ತೆ ಮತ್ತೆ ನಿಮ್ಮ ಬದ್ಧತೆಯನ್ನು ಇಲ್ಲಿ ತೋರಿಸಬೇಕೆಂದು ಹೇಳಬೇಕಾಗುತ್ತದೆ. ಗ್ರಾಮೀಣ ಗೌರವ ಯೋಜನೆಯಲ್ಲಿ ಗ್ರಾಮೀಣ ಮನೆಗಳಲ್ಲಿ ಸ್ನಾನಗೃಹ ಸಹಿತ ಶೌಚಾಲಯ ನಿರ್ಮಾಣ ಎಂಬ ಒಂದು ಯೋಜನೆಯಿದೆ. ಈ ಯೋಜನೆ ಬಹಳ ಒಳ್ಳೆಯದೇ. ಇದರ ಬಗ್ಗೆ ನಾನೇನು ಹೇಳುವುದಿಲ್ಲ. ನಾಳೆಯ ದಿವಸ ಮಾನ್ಯ ಹೆಚ್.ಕೆ. ಪಾಟೀಲರು ನಮ್ಮ ಊರಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಏನು ಹೇಳಬಹುದೆಂದರೆ, ನೋಡಿ ಹಳ್ಳಿಯ ಜನರಿಗೆ Airport ನಲ್ಲಿರುವಂತಹ service ನಿಮಗೆ ಕೊಡಬೇಕೆಂದರೆ ಕಾಗೇರಿಯವರು ನಿಮ್ಮ ವಿರುದ್ಧ ಮಾತನಾಡಿದರು, ಅಪಸ್ವರ ಎತ್ತಿದರು ಎನ್ನುವ ರೀತಿಯಲ್ಲಿ ಹೇಳುವುದಕ್ಕೆ ಅವರಲ್ಲಿ ಬಹಳ ಜಾಣ್ಮೆ ಇದೆ. ಅದನ್ನೆಲ್ಲಾ ಅವರು ಹೇಳುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು):– ಯೋಜನೆಗಳ ವಿರುದ್ಧ ಮಾತನಾಡಿದರೆ, ನಿಮ್ಮ ಊರಿಗೆ ಬಂದು ಹೇಳುವುದಲ್ಲ, ಇಲ್ಲಿ, ಬೆಂಗಳೂರಿನಲ್ಲಿ, ದೆಹಲಿಯಲ್ಲಿಯೂ ಹೇಳುತ್ತೇನೆ. ಎಲ್ಲಿ ಬೇಕಾದರೂ ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಆದರೆ ನಾನು ಯಾವುದನ್ನು ಅಲ್ಲಗೆಳೆಯುತ್ತಿಲ್ಲ. ಅವರು ಯಾವಾಗಲೂ ಒಳ್ಳೆಯ ವಿಚಾರಗಳನ್ನೇ ಹೇಳುತ್ತಾರೆ. ಆದರೆ ಇದೆಲ್ಲವನ್ನು ಮಾಡುವುದೇನಿದೆ, ಅದರ ಬಗ್ಗೆ ಸರಿಯಾದ ಯೋಚನೆ ಇಲ್ಲ. ಗ್ರಾಮಗಳಲ್ಲಿ ತಿಪ್ಪೆ ಸಂಸ್ಕರಣಗೊಳಿಸುವ ತ್ಯಾಜ್ಯ ಮುಕ್ತಗೊಳಿಸುವ ಕಾರ್ಯಕ್ರಮಕ್ಕೆ ಚಾಲನೆ, 4,000 ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ, 2015–16ನೇ ಸಾಲಿನಲ್ಲಿ 200 ಕೋಟಿ ರೂ.ಗಳ ಬಗ್ಗೆ ಎಲ್ಲಾ ಈಗಾಗಲೇ ಹೇಳಿರುತ್ತೇನೆ. ಬೇರೆ ಬೇರೆ

ರೀತಿಯಲ್ಲಿ ಆಗಿರುವಂತಹ ಗೊಂದಲಗಳನ್ನು ನೋಡಿದರೆ, ಈ ವರ್ಷದ ಈ ಎಲ್ಲಾ ಬೇಡಿಕೆಗಳನ್ನು ಮಂಡಿಸಿ, ಎಲ್ಲಾ ಅನುದಾನಗಳಿಗೆ ಒಪ್ಪಿಗೆಯೇನೋ ಕೊಡುತ್ತಿದ್ದೇವೆ. ಆದರೆ ಇದು ಹೇಗೆ ಖರ್ಚಾಗುತ್ತದೆ, ಸಮರ್ಪಕವಾಗಿ ಬಳಕೆಯಾಗುತ್ತದೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಸಂಶಯ ಸಹಜವಾಗಿ ಬರುತ್ತದೆ. ನೀವು ಇಂದು ಬೇಡಿಕೆಯನ್ನು ಮಂಡಿಸಿದ್ದೀರಿ. ಸದನದ 225 ಮಾನ್ಯ ಸದಸ್ಯರುಗಳು ಅನುಮೋದನೆ ಕೊಡುತ್ತಾರೆ. ಒಂದು ವೇಳೆ ನಾನು ಅನುಮೋದನೆ ಕೊಡದೇ ಹೋದರೂ, ನಿಮ್ಮ ಪಕ್ಷ ಬಹುಮತ ಹೊಂದಿದೆಯೆಂದು ನೀವು ಅನುಮೋದನೆ ತೆಗೆದುಕೊಳ್ಳುತ್ತೀರಿ. ಇದು ಪಾಸಾದ ನಂತರದಲ್ಲಿ ಅನುಷ್ಠಾನಗೊಳ್ಳುವುದು ಹೇಗೆ? ಈ ಹಿಂದಿನ ಎಲ್ಲಾ ವರದಿಗಳನ್ನು ನೋಡಿದರೆ, ಎರಡು ವರ್ಷಗಳಲ್ಲಿ ಯಾವ ದಾರಿಯಲ್ಲಿ ನಡೆದಿದ್ದೀರಿ ಎಂಬುದನ್ನು ವಿಶ್ಲೇಷಣೆ ಮಾಡಿದರೆ, ಇದು ಸಮರ್ಪಕವಾಗಿ ಅನುಷ್ಠಾನವಾಗುವುದಿಲ್ಲವೆಂದು ಅನಿಸುತ್ತದೆ. ಹಾಗಾಗಿ ಈ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೋ ಅಥವಾ ಬೇಡವೋ ಎನ್ನುವ ಜಿಜ್ಞಾಸೆ ಬರುವುದು ಸಹಜವಿದೆ. ಇಷ್ಟೆಲ್ಲಾ ಆದ ಮೇಲೆ 10,000/- ಕೋಟಿ ರೂ.ಗಳಿಗೆ ಅನುಮತಿ ಏಕೆ ಕೊಡಬೇಕು? ಇವರೆಲ್ಲರೂ ಹೇಗೇ ಬೇಕೋ ಹಾಗೆ ಕೆಲಸ ಮಾಡಲಿ, ಗಂಡಾಗುಂಡಿ ಕೆಲಸ ಮಾಡಲಿ, ಅರ್ಧಂಬರ್ಧ ಕೆಲಸ ಮಾಡಲೆಂದು ಅನುಮತಿ ನೀಡಬೇಕೇ? ಯಾವುದಕ್ಕೂ ಇಚ್ಛಾಶಕ್ತಿ ಪ್ರಕಟವಾಗದೇ, ಯಾವುದೇ ಕೆಲಸ ಪೂರ್ಣವಾಗದೇ ಇರಲಿ ಎಂದು ನಾವು ಅನುಮತಿ ಕೊಡಬೇಕೇ? ನಮ್ಮ ಭಾಗದ ಸದಸ್ಯರಿಗೆ ಸಹಜವಾಗಿ ಈ ರೀತಿ ಅನಿಸುತ್ತದೆ. ಹಾಗಾಗಿ ನೀವು ನಿಮ್ಮ ಹಿರಿತನದಿಂದ, ಬದ್ಧತೆಯಿಂದ, ನೀವುಗಳು ಅನುಮೋದನೆ ಕೊಡಿ ಎಂದು ಹೇಳಿ, ನಂತರ ನಾವು ಯಾವ ರೀತಿಯ ಕೆಲಸ ಮಾಡಿ ತೋರಿಸುತ್ತೇವೆ ಮತ್ತು ನಿಮ್ಮ ನಿರೀಕ್ಷೆ ಮೀರಿ ಕೆಲಸ ಮಾಡಿ ತೋರಿಸುತ್ತೇವೆಂದು ಹೇಳಬೇಕು. ಎರಡು ವಿಷಯಗಳನ್ನು ತನಿಖೆ ಮಾಡುವ ಬಗ್ಗೆ ಸದನದಲ್ಲಿ ನಿಮ್ಮ ಮುಂದೆ ಹೇಳಿದ್ದೇನೆ. ಇನ್ನೂ ಅನೇಕ ರೀತಿಯ ಆರೋಪಗಳು ಇಲಾಖೆಯ ಮೇಲೆ ಬಂದಿರುವುದು, ಅದರ ಬಗ್ಗೆ ನೀವುಗಳು ನಿಮ್ಮದೇ ಆದಂತಹ ರೀತಿಯಲ್ಲಿ ತನಿಖೆಗೆ ಮುಂದಾಗಿರುವುದರಲ್ಲಿ ಪತ್ರಿಕೆಗಳ

ವರದಿ, ಮಾಧ್ಯಮಗಳಲ್ಲಿ ಪ್ರಸಾರವಾದಂತಹ ಸುದ್ಧಿಗಳು ಇತ್ಯಾದಿ ಇತ್ಯಾದಿಗಳು ಬೆಳಗಾದರೆ 108 ಸುದ್ಧಿಗಳಿವೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎಷ್ಟು ಗೊಂದಲಗಳು ಮಾಡಿಕೊಳ್ಳಬೇಕೋ ಅಷ್ಟು ಗೊಂದಲಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಉದ್ಯೋಗ ಖಾತ್ರಿ ಯೋಜನೆ ಎಂದರೆ ಕನ್ನಡಿಯೊಳಗಿನ ಗಂಟಾಗಿದೆ. ಈ ವಿಷಯ ಹೇಳುತ್ತಿದ್ದಂತೆ ಕೇಂದ್ರ ಸರ್ಕಾರವು ಕಡಿಮೆ ಹಣ ಕೊಡುತ್ತಾರೆಂದು ಹೇಳುತ್ತಾರೆ. ಎಲ್ಲವೂ readymade political answers ಇರುತ್ತದೆ. ಇದರಲ್ಲಿ ಏನು ಸತ್ಯವಿದೆ? ಸತ್ಯದ ಬಗ್ಗೆ ಸಾಕಷ್ಟು ಬಾರಿ ಚರ್ಚೆಯಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್:- I will not say that, ಆದರೆ ನಾನು ಹೇಳುವುದೇನೆಂದರೆ ನಿಮಗೆ ಬಹಳಷ್ಟು ಮಾಹಿತಿಯ ಕೊರತೆಯಿದೆ. NREG ಬಗ್ಗೆ ಹೇಳುವಾಗ ನಿಮ್ಮಂತಹ ಬುದ್ಧಿವಂತ ಶಾಸಕರೇ ಜವಾಬ್ದಾರಿಯಿಂದ ಮಾತನಾಡದೇ ಹೋದರೆ, NREG ಒಳಗೆ ಏನೇನು ಮಾಡಬಹುದಾಗಿತ್ತು, ಅಂದರೆ EFMS ಆಗಲಿ, asset creation ಆಗಿದ್ದು, ಇವೆಲ್ಲವನ್ನೂ ನಾವು ಮಾಡಿದ್ದೇವೆಂದು ಹೇಳೋಣ. ಇವತ್ತು ನಮಗೆ ಎಲ್ಲಾ ಕಡೆಯಿಂದಲೂ appreciation ಬರುತ್ತದೆ. ಆದರೆ ನೀವು NREG ಒಳಗಡೆ ಗೊಂದಲ ಸೃಷ್ಟಿಯಾಗಿದೆಯೆಂದು ಹೇಳುತ್ತಿದ್ದೀರಿ. NREG ಒಳಗೆ ಗೊಂದಲ ಸೃಷ್ಟಿಯಾಯಿತೇ? ನಾನು ಇಂದು ಸದನದಲ್ಲಿ ಕೇಳುವುದೆನೆಂದರೆ, NREG ಅನ್ನು tight ಮಾಡುವುದರ ಸಲುವಾಗಿ, NREG ಯಲ್ಲಿ ಲೋಪವೇನು ಆಗುತ್ತಿತ್ತು, ಹಣ ನೀರು ಹರಿದ ಹಾಗೆ ಹರಿಯುತ್ತಿತ್ತು, ಇಲ್ಲಿ ಲೂಟಿ ಏನಾಗುತ್ತಿತ್ತು, ಮಾರ್ಚ್ ತಿಂಗಳೊಳಗೆ ಖರ್ಚಿಗೆ account ನಿಂದ ತೆಗೆದುಕೊಂಡು ಹೋಗುತ್ತಿದ್ದರು. ಅವೆಲ್ಲವನ್ನು ನಿಲ್ಲಿಸಿದ ಮೇಲೆ ಬಹು ದೊಡ್ಡ ಬದಲಾವಣೆಯಾಗಿದೆ ಎಂದು ಹೇಳಿ ನಾನು ಹೇಳುತ್ತಿಲ್ಲ. ಕೇರಳ ರಾಜ್ಯದಲ್ಲಿ ನಿಮ್ಮ ಕೇಂದ್ರ ಸಚಿವರು ಸಹ ಒಪ್ಪಿಕೊಳ್ಳುತ್ತಾರೆ. ಅವರನ್ನು ಬಿಡಿ. ಅವರೆಲ್ಲರೂ ದೂರದಲ್ಲಿ ನಿಂತು ಅಂಕಿಅಂಶಗಳನ್ನು ನೋಡಿ ಹೇಳುತ್ತಾರೆನ್ನಬಹುದು. ಆದರೆ ಸ್ಥಳೀಯವಾಗಿ ನಿಮ್ಮ ಪಂಚಾಯಿತಿಗಳಲ್ಲಿ ಕೇಳಿ. ನಿಮ್ಮ ನಿಮ್ಮ ಜೊತೆಯಲ್ಲಿರುವವರನ್ನು ಏನಾಗಿದೆಯೆನ್ನುವುದನ್ನು ಕೇಳಿ. ಒಂದು ವೇಳೆ

NREG ಯಲ್ಲಿ ಲೋಪವೇನು ಆಗುತ್ತಿತ್ತು, ಹಣ ನೀರು ಹರಿದ ಹಾಗೆ ಹರಿಯುತ್ತಿತ್ತು, ಅವು ನಿಂತಿಲ್ಲವೆಂದರೆ, 1–2–3 ಎಂದು ಸಲಹೆಗಳನ್ನು ಕೊಟ್ಟು, ಟೀಕೆ ಮಾಡಿ. ನೀವು ಕೊಡುವ ಸಲಹೆ ಮೇಲೆ ಕ್ರಮ ತೆಗೆದುಕೊಂಡು ಸರಿಪಡಿಸುವ ಹಾಗೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ವಿಸ್ತಾರವಾಗಿ ಹೇಳುವುದಿಲ್ಲ. ಈ ಯೋಜನೆ ಕನ್ನಡಿಯೊಳಗಿನ ಗಂಟು ಎಂದು ಹೇಳುತ್ತಿದ್ದೇನೆ. ಗ್ರಾಮ ಪಂಚಾಯಿತಿಗಳನ್ನು ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಸಬಲಗೊಳಿಸುವ ಕಾರ್ಯಕ್ರಮವೂ ಗ್ರಾಮೀಣಾಭಿವೃದ್ಧಿ ಇಲಾಖೆಯ ದೊಡ್ಡ ಜವಾಬ್ದಾರಿ. ಗ್ರಾಮ ಪಂಚಾಯಿತಿಯ ವ್ಯವಸ್ಥೆಯನ್ನು ಸರ್ಕಾರದ ಸುತ್ತೋಲೆಯನ್ನು ಜಾರಿಗೊಳಿಸುವ ವ್ಯವಸ್ಥೆಯನ್ನಾಗಿ ನಿರ್ಮಿಸಿದ್ದಾರೆ. ಗ್ರಾಮ ಪಂಚಾಯಿತಿಗಳೆಂದರೆ ಅಲ್ಲಿ ಕೇವಲ ಸರ್ಕಾರದ ಸುತ್ತೋಲೆಗಳನು ಜಾರಿಗೊಳಿಸುವುದು ಅಷ್ಟೆ. ಅವರಿಗೆ ಸ್ವತಂತ್ರವಾದ ಯಾವ ನಿರ್ಣಯವನ್ನು ಮಾಡುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನೀವು 10–12 ಲಕ್ಷ ಅನುದಾನ ಎಂದು ಹೇಳುತ್ತೀರಿ. ಆದರೆ ಅಲ್ಲಿಗೆ ಎಂಟು ಲಕ್ಷ ರೂ.ಗಳಿಗೆ ಬಂದು ನಿಲ್ಲುತ್ತದೆ. ಇದು ಇವರ ಶಾಶ್ವತ ಅನುದಾನ. 13ನೇ ಹಣಕಾಸಿನದು ಬೇರೆ, ಉದ್ಯೋಗ ಖಾತ್ರಿ ಯೋಜನೆಯದು ಬೇರೆ. ಇವರಿಗೆ quarterly ಎಷ್ಟು ಅನುದಾನ ಹೋಗುತ್ತದೆನ್ನುವ ಅಂಕಿಅಂಶವನ್ನು ಕೊಡಿ. ಮಾರ್ಚ್ ತಿಂಗಳೊಳಗೆ ಆ ವರ್ಷದ ಅನುದಾನವನ್ನು ಕೊಟ್ಟಿದ್ದೇವೆಂದು ಹೇಳಲಿ. ಮಾರ್ಚ್ ಕೊನೆಯೊಳಗೆ ಎರಡು ಕಂತೂ ಸಹ ಹೋಗಿರುವುದಿಲ್ಲ. ಎರಡು ಕಂತು ಹೋಗಿರುವುದರಲ್ಲಿ ಶೇ.40 ರಷ್ಟನ್ನು ಆಡಳಿತಾತ್ಮಕ ಖರ್ಚಿಗೆ ಅಂದರೆ ಸಂಬಳ, ವಿದ್ಯುತ್ ಬಿಲ್ಲು ಇತ್ಯಾದಿಗಳಿಗೆ ತೆಗೆದುಕೊಳ್ಳಬೇಕಾಗುತ್ತದೆ. ಮೊದಲು ಕೊಟ್ಟಿರುವ ಅನುದಾನದಲ್ಲಿ ಆ ಹಣವನ್ನು ಕೊಡಬೇಕು. ಮೊದಲು ಕಾಮಗಾರಿ ಆಗಿದ್ದರೆ ಹಣ ಕೊಡಬಾರದು ಮೊದಲು ಸಂಬಳ, ಕರೆಂಟ್ ಬಿಲ್, ನೀರಿನ ಬಿಲ್‌ಗಳಿಗೆ ಕೊಟ್ಟು ಉಳಿದಿರುವುದರೊಳಗೆ ಇವರು ಕೆಲಸ ಮಾಡಿಸಬೇಕು. ಆ ಊರಿನಲ್ಲಿ ಬಯ್ಯಿಸಿಕೊಳ್ಳುವುದಕ್ಕೆ ಮತ್ತೊಬ್ಬರು ಬೇಡ, ಗ್ರಾಮ ಪಂಚಾಯತಿ ಸದಸ್ಯರೇ

ಸಾಕು, ಅಲ್ಲಿ ಆ ಸ್ಥಿತಿಯಿದೆ. ಅದಕ್ಕೊಂದು ಸುತ್ತೋಲೆ, ಆ ಸುತ್ತೋಲೆಯಲ್ಲಿ 40% ಇವರಿಗೆ ಕೊಟ್ಟ ಮೇಲೆ ಉಳಿದದ್ದು ಹೇಗೆ ಕೊಡುವುದು? ಹಣವೂ ಬರುವುದಿಲ್ಲ. ಎರಡು ಕಂತು, ಮೂರು ಕಂತು ಸಹ ಮಾರ್ಚ್ ಕೊನೆಯೊಳಗೆ ಹೋಗುವುದಿಲ್ಲ. 13ನೇ ಹಣಕಾಸಿನದ್ದು ಹಾಗೆಯೇ ಆಗುತ್ತಿದೆ. ಆ ಕಂತುಗಳು ಸಹ ಕಾಲಮಿತಿಯೊಳಗೆ ಹೋಗುತ್ತಿಲ್ಲ. ಅದಾದರೂ ಹೋಗಬೇಕಾಗಿತ್ತಲ್ಲ, ಅದು ಸಹ ಹೋಗುತ್ತಿಲ್ಲ. ಇದನ್ನೆಲ್ಲಾ ಹೇಳಿದ ತಕ್ಷಣ ಅವರು ಏನು ಹೇಳುತ್ತಾರೆಂದರೆ ಕಾಗದ ಪತ್ರದಲ್ಲಿ ನಾವು ಇಷ್ಟಿಷ್ಟು ಬಿಡುಗಡೆ ಮಾಡಿದ್ದೇವೆ. ಸಚಿವರಾದ ನೀವು ಕುಡಿಯುವ ನೀರಿನ ಬಗ್ಗೆ ಇಷ್ಟು ದೊಡ್ಡ ತಪ್ಪನ್ನು ಸದನಕ್ಕೆ ಹೇಳಿದ್ದೀರಲ್ಲ, 185 ಕೋಟಿ ರೂಪಾಯಿಗಳು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿದೆ. ನಿಮ್ಮ ಕ್ಷೇತ್ರದಲ್ಲಿ ಒಂದೊಂದು ಕೋಟಿ ರೂಪಾಯಿಗಳ ಅನುದಾನವಿದೆ, ನೀವು ಹೋಗಿ ಸಭೆ ಮಾಡಿ ಹೇಳಿ ಬನ್ನಿ ಎಂದು ಹೇಳಿದಿರಿ. ನಾವು ಸಭೆ ಮಾಡಿ ಬೆಂಗಳೂರಿಗೆ ಬಂದ ನಂತರ ಕಳೆದ ವರ್ಷದ್ದು ಒಂದು ಸಹ bill payment ಆಗಿಲ್ಲ. ಹಾಗಾಗಿ, treasury ಯಲ್ಲಿ ಹಣವಿದೆ ಎಂದು ಇವರು ಹೇಳುತ್ತಾರೆ. ಬಿಲ್ ಕೊಡದೇ ಇರುವುದು ನಮ್ಮ ಜವಾಬ್ದಾರಿಯೇ? ಶಾಸಕರ ಬಳಿ 185 ಕೋಟಿ ರೂಪಾಯಿಗಳು ಕುಡಿಯುವ ನೀರಿಗಾಗಿ ಇದೆಯೆಂದು ಹೇಳಿದರೆ ಆಗುತ್ತದೆಯೇ? ಈ ರೀತಿ ತಾಂತ್ರಿಕವಾಗಿ ಇರುವುದಿದೆಯಲ್ಲ, ಇದರಿಂದ ಏನೂ ಆಗುವುದಿಲ್ಲ. ನಾವು ಕಾಮಗಾರಿಗೆ ಶಿಫಾರಸ್ಸು ಮಾಡಿ, ಕೆಲಸ ಮುಗಿದು ಪೂರ್ಣಗೊಂಡು ಎಲ್ಲವೂ ಆಗಿದೆ. ಬಿಲ್ ಕೊಡದೇ ಇರುವುದು ನಿಮ್ಮ ಅಧಿಕಾರಿಗಳ ತಪ್ಪು. ಇಲ್ಲದೇ ಇರುವ 25 enquiryಗಳನ್ನು ಹಾಕಿಕೊಂಡಿರುವುದು. ಹೀಗಾಗಿ ನಿಮ್ಮ ವ್ಯವಸ್ಥೆ ಏನೇನು ಇದೆಯೋ ಅದನ್ನು ಮಾಡಿ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ನಮ್ಮ ಅಧಿಕಾರಿಗಳು ಬಿಲ್ ಬಗ್ಗೆ enquiry ಸಹ ಮಾಡಬಾರದೇ? ಏನು ಬಿಲ್ ಕೊಡುತ್ತಾರೆಯೋ ಅದಕ್ಕೆ ಹಣ ಕೊಟ್ಟುಬಿಡಿ ಎಂದು ಹೇಳುತ್ತೀರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, enquiry ಮಾಡಬೇಕು. ನಿಮ್ಮ ಈ ಸರ್ಕಾರಿ ವ್ಯವಸ್ಥೆಯಲ್ಲಿ ನೀವು ಅದೆಷ್ಟು enquiry ಮಾಡುತ್ತೀರೋ ಮಾಡಬೇಕು. ನೀವು ನಮ್ಮ ಊರಿಗೆ ಬಂದಾಗ ಒಂದು ಮಾತನ್ನು ಹೇಳಿದೆ. ನಮ್ಮ ಊರಿನ ನಿಮ್ಮ CEO....

ಶ್ರೀ ಎನ್. ಚೆಲುವರಾಯಸ್ವಾಮಿ:- ಮಾನ್ಯ ಅಧ್ಯಕ್ಷರೆ, ಕಳೆದ ಮಾರ್ಚ್ ತಿಂಗಳಿನಲ್ಲಿ ಕುಡಿಯುವ ನೀರಿನ ಬಗ್ಗೆ ಗಲಾಟೆಗಳು ಆದಾಗ ನಮ್ಮ ಸಚಿವರು ಒಂದು ದಿನಾಂಕವನ್ನು ಕೊಟ್ಟು ಶನಿವಾರ ರಜೆ ಬಂದಿದೆ, ನೀವು Task Force Meeting ಮಾಡಿ ಎಲ್ಲಾ details ಕೊಡಬೇಕೆಂದು ಹೇಳಿದಿರಿ. ಮಾರ್ಚ್ 26ರಂದು, ನಾವು Task Force ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ದಯಮಾಡಿ ನಮ್ಮ ಜಿಲ್ಲೆ ಆದಿಯಾಗಿ ಯಾವ್ಯಾವ ನಿಮ್ಮ ಜಿಲ್ಲಾ ಪಂಚಾಯಿತಿ CEO, ಜಿಲ್ಲಾ ಆಡಳಿತ ಆ Task Force ಅನ್ನು ಯಾವತ್ತು ಮಂಜೂರು ಮಾಡಿದ್ದಾರೆ, ಎಷ್ಟು ದಿವಸಕ್ಕೆ implement ಮಾಡಿದ್ದಾರೆ, perment ಆಗಿದೆಯೇ ಎನ್ನುವ details ತರಿಸಿ ನಾಳೆ ಒಂದು statement ಮಾಡಿಬಿಡಿ.

ಶ್ರೀ ಹೆಚ್.ಕೆ. ಪಾಟೀಲ್:- ನಮ್ಮ ಹಿರಿಯ ಸದಸ್ಯರಾದ ಚೆಲುವರಾಯಸ್ವಾಮಿಯವರಿಗೆ ವಿವರಣೆ ನೀಡುತ್ತಿದ್ದೇನೆ. ನಿಮ್ಮ ಟಾಸ್ಕ್ ಫೋರ್ಸ್‌ನ ಅಧ್ಯಕ್ಷರು ನೀವು. ಅದನ್ನು implement ಮಾಡುವುದು ನಿಮ್ಮ CEO ಅಲ್ಲ, ನಿಮ್ಮ EO ಮತ್ತು ಕಾರ್ಯದರ್ಶಿ, ಅದರ ಸದಸ್ಯರು ಮತ್ತು ನಿಮ್ಮ ಇಂಜಿನಿಯರ್. ಒಂದು ವೇಳೆ ಟಾಸ್ಕ್ ಫೋರ್ಸ್ ನಿರ್ಣಯ ಮಾಡಿ, ಇಂಥದ್ದನ್ನು ನೀವು ಮಾಡಬೇಕು, ಮಂತ್ರಿಗಳು ದುಡ್ಡು ಬಿಡುಗಡೆ ಮಾಡಿದ್ದೇವೆಂದು ನಮಗೆ ಕಾಗದ ಕಳುಹಿಸಿದ್ದಾರೆ, ಇಲ್ಲಿದೆ ನೋಡಿ, ಈ ಹಣ ತೆಗೆದುಕೊಂಡು ನೀವು ಆ ಕೆಲಸ ಮಾಡಿ ಎಂದು ನೀವು ಹೇಳಿ. ನಿಮ್ಮ ನಿರ್ಣಯ ಮಾಡಿ. ಏಕೆಂದರೆ ಆ ಎಲ್ಲಾ ನಿರ್ಣಯಗಳನ್ನು ನಮಗೆ ಅವರು ಕಳುಹಿಸಿ ಕೊಟ್ಟಿದ್ದಾರೆ. ಆ ನಿರ್ಣಯಗಳೊಳಗೆ ಆ ನಿರ್ಣಯದ ಪ್ರಕಾರ ಅವರು ಅನುಷ್ಠಾನ ಮಾಡದೇ ಹೋದರೆ ನೀವು ಹೇಳಿ, ತಕ್ಷಣ ನಾನು ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಸಚಿವರೆ, ನನ್ನ personal experience ಹೇಳುತ್ತೇನೆ. ನಾನು Task Forceನಲ್ಲಿ ಒಂದು resolution ಮಾಡಿ ಕಳುಹಿಸಿದೆನು. ಎರಡು ತಿಂಗಳು ಮಾರ್ಚ್, ಏಪ್ರಿಲ್ ನಂತರ ಮೇ ತಿಂಗಳಿನಲ್ಲಿ ನಿಮ್ಮ Executive Engineer ಹೇಳುತ್ತಾರೆ, CEO approval ಕೊಟ್ಟಿಲ್ಲ, estimate ಕೊಡಿ ಎಂದು ಕೇಳುತ್ತಿದ್ದಾರೆಂದು ಹೇಳಿದರು. ನಾನು ಕೊನೆಗೆ OM ಕೊಡದೇ estimate ಕೊಡದೆ........

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಚೆಲುವಣ್ಣನವರೆ, ಮಂಡ್ಯದಲ್ಲಿ ಈ ಕಾಮಗಾರಿಗಳಿಗೆ CEOರವರಿಂದ ಯಾವುದೇ ಅಡ್ಡಿ ಇಲ್ಲ. ನಾನೂ resolution ಕಳುಹಿಸಿಕೊಟ್ಟಿದ್ದೇನೆ. ಇದಕ್ಕೆ CEO ಅಡ್ಡಿಪಡಿಸಿಲ್ಲ. ಸುಮ್ಮನೆ ಏಕೆ ನೀವು ಹೇಳುತ್ತಿದ್ದೀರಿ. ಅಧಿಕಾರಿಯ ಮೇಲೆ ತಪ್ಪು ಮಾಹಿತಿ ಹೋಗಬಾರದು. ನಮ್ಮ ಇಂಜಿನಿಯರ್‌ಗಳು, EOಗಳು ಇದಕ್ಕೆ ಜವಾಬ್ದಾರರೇ ಹೊರತು CEOಗೂ ಅದಕ್ಕೂ ಸಂಬಂಧವೇ ಇಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ:- ನರೇಂದ್ರಸ್ವಾಮಿಯವರೆ, ಅದು EO ತಪ್ಪು, Executive Engineer ತಪ್ಪು ಅಥವಾ CEO ಮೇಲೆ ನಾನು complaint ಮಾಡುತ್ತಿಲ್ಲ. Executive Engineer ಹೇಳಿದ ಉತ್ತರವನ್ನು ನಾನು ಹೇಳುತ್ತಿದ್ದೇನೆ. ನಂತರ ನಾನು CEOಗೆ ಫೋನ್ ಮಾಡಿ, ಮೊದಲು approve ಮಾಡಿ OM ಕೊಡಿ, ಆಮೇಲೆ estimate ಮಾಡುವುದು. Task Forceನಿಂದ ನಾವು resolution ಮಾಡಿ ಕೊಟ್ಟ ತಕ್ಷಣವೇ approval ಕೊಡುವುದು ನಿಮ್ಮ ಕರ್ತವ್ಯ. ಉಳಿದದ್ದೇನಾದರೂ ತಪ್ಪಿದ್ದರೆ ಆಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅದು ಸರಿಯಿಲ್ಲದೇ ಇದ್ದರೆ ಅಥವಾ ಸರಿಯಿದ್ದರೆ enquiry ಮಾಡುವುದು, ನಿಮ್ಮ Executive Officerಗೆ ಹೇಳುವ ಕೆಲಸವನ್ನು ನಂತರ ಮಾಡಿ. ಎರಡೂವರೆ ತಿಂಗಳುಗಳಾಗಿದೆ. ನಮ್ಮಲ್ಲಿರುವ ಅಧಿಕಾರಿಗಳ ಮೇಲೆ complaint ಹೇಳುತ್ತಿಲ್ಲ. ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ನಿಮಗಿರುವ ಉತ್ಸಾಹದಲ್ಲಿ ಏನು ಬದಲಾವಣೆ ತರುವುದಕ್ಕೆ ಸಾಧ್ಯವೋ ಅದನ್ನು ತರದೇ ಇದ್ದರೆ ಉಪಯೋಗವಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:- ಅಧಿಕಾರವನ್ನು Task Force ಮಾಡಿ, ಆ ಎಲ್ಲಾ ಅಧಿಕಾರವನ್ನು Task Force ಅಧ್ಯಕ್ಷರಿಗೆ ಕೊಟ್ಟಿದ್ದೇವಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ:- ಏನು ಪ್ರಯೋಜನ ಸಾರ್? Task Force approval ಮಾಡಿಕೊಟ್ಟರೆ......

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:- Task Force ಅಧ್ಯಕ್ಷರಿಗೆ guideline ಕೊಟ್ಟು ಹಣ ಕೊಟ್ಟು, ಇವರು ಅಧಿಕಾರಿಗಳು ಎಂದು ಹೇಳಿ, ನಿಮ್ಮದೇನು emergency ಕೆಲಸಗಳಿವೆಯೋ ಮಾಡಿಸಿಕೊಳ್ಳಿ ಎಂದು ಹೇಳಿ ನಾವು ಸ್ಪಷ್ಟವಾದ ಆದೇಶ ಕೊಟ್ಟ ಮೇಲೆ, ಇದರಲ್ಲಿ ನಿಮ್ಮ ಜವಾಬ್ದಾರಿ ಸಹ ಇದೆಯಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ:- ದಯಮಾಡಿ, ನಾವು resolution ಮಾಡಿದ ಕೆಲಸಗಳನ್ನು commence ಮಾಡದೇ ಇದ್ದರೆ ನಾವು ಯಾರನ್ನು ಕೇಳಬೇಕು? ನಾವು resolution ಮಾಡಿ ಕೊಟ್ಟಂಥ ಕೆಲಸಗಳು C.E.O ಆಗಲಿ, Executive Engineer ಆಗಲಿ implement ಮಾಡುವುದಿಲ್ಲವೆಂದರೆ ಅರ್ಥವೇನು?

ಶ್ರೀ ಬಿ.ಆರ್. ಪಾಟೀಲ್:- Task Force Committee ಗೆ ಆಯಾ ಕ್ಷೇತ್ರದ ಶಾಸಕರು ಅಧ್ಯಕ್ಷರಾಗಿರುತ್ತೇವೆ.

ಶ್ರೀ ಸಿ.ಟಿ. ರವಿ:- ನಾವು resolution ಮಾಡಿ pass ಮಾಡಿ ಕೊಟ್ಟಿರುತ್ತೇವೆ, approval ಕೊಡುವುದಕ್ಕೆ CEOಗೆ ಏಕೆ ಅಧಿಕಾರ?

ಶ್ರೀ ಬಿ.ಆರ್. ಪಾಟೀಲ್:- Approvalಗೆ ನಾವೇಕೆ ಕಾಯಬೇಕು? ನಿಮ್ಮ EO, ತಹಶೀಲ್ದಾರ್ ಸಹ ನಮ್ಮ ಕಮಿಟಿಯಲ್ಲಿರುತ್ತಾರೆ. ನಮ್ಮ ಮೇಲೆ ಅನುಮಾನವೇ? Approval ಏಕೆ ಕೊಡಬೇಕು?

ಶ್ರೀ ಸಿ.ಟಿ. ರವಿ:- ಏಕೆ approval ಕೊಡುವವರೆಗೆ ಕಾಯಬೇಕು? ನಮ್ಮ ಕ್ಷೇತ್ರದ್ದೇ ನಾನು ನಿನ್ನೆಯೂ ಸಹ ಫೋನ್ ಮಾಡಿ ಹೇಳಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್:- Guideline ಪ್ರಕಾರ, ಆ approval necessary ಇರಲಿಲ್ಲವೆಂದರೆ ಅದು necessary ಇಲ್ಲ. ಒಂದು ವೇಳೆ ನಾವು Guideline ನಲ್ಲಿ CEO approval ತೆಗೆದುಕೊಂಡು ನೀವು ಮಾಡಿ ಎಂದು ಹೇಳಿದ್ದರೆ, ಆ you give back that guideline. I will cange it. But ಆ guideline ನಲ್ಲಿ ಆ ರೀತಿಯಿಲ್ಲ. ನಾನು ನಿಮಗೆ ನೋಡಿ ಹೇಳುತ್ತೇನೆ. It is not there. It is you who is to approve.

ಶ್ರೀ ಬಿ.ಆರ್. ಪಾಟೀಲ್:- Who has to approve? Many time, the CEO has rejected. 26 ಬೋರ್‌ವೆಲ್‌ಗಳನ್ನು ಕೊರೆಯಬೇಕೆಂದು ನಮ್ಮ ಟಾಸ್ಕ್ ಫೋರ್ಸ್ ನಿರ್ಣಯ ಮಾಡಿತ್ತು, ಕೊನೆವರೆಗೂ ಸಹ CEO ಒಪ್ಪಲಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆಯೇ? ನನ್ನ ಅನುಭವವನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಟಿ. ರವಿ:- ಮಾನ್ಯ ಪಾಟೀಲ್‌ರವರೆ, ನನ್ನ ಕ್ಷೇತ್ರದಲ್ಲಿ resolution ಮಾಡಿ ಕಳುಹಿಸಿ ಎರಡೂವರೆ ತಿಂಗಳುಗಳಾಗಿದೆ. ನೀವು ಒಂದು ಕೆಲಸ ಮಾಡಿ. Execute ಮಾಡದೇ ಇರುವಂಥ ಅಧಿಕಾರಿಗಳನ್ನು suspend ಮಾಡಿ. ನಿಮಗೆ approval ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ ತಾನೆ? Committee pass ಮಾಡಿ ಕೊಟ್ಟ ಮೇಲೆ executive ಮಾಡಬೇಕಾಗಿರುವ duty ಅವರದ್ದು. ಅದು emergency work, ನನ್ನ ಕ್ಷೇತ್ರದಲ್ಲಿ execute ಮಾಡದೇ ಇರುವ ಅಧಿಕಾರಿಗಳನ್ನು suspend ಮಾಡುತ್ತೇವೆಂದು ಹೇಳಿ, ಒಬ್ಬರನ್ನು suspend ಮಾಡಿದರೆ ಉಳಿದೆಲ್ಲರಿಗೂ message ಹೋಗುತ್ತದೆ. ಇಡೀ ರಾಜ್ಯಕ್ಕೆ ಸಂದೇಶ ಹೋಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಆಡಳಿತವನ್ನು ಚುರುಕುಗೊಳಿಸಬೇಕೆನ್ನುವ ಉದ್ದೇಶದಿಂದ ನಾನು ತಮ್ಮ ಮುಖಾಂತರ ಎಲ್ಲಾ ನನ್ನ ಗೌರವಾನ್ವಿತ ಸದಸ್ಯರುಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. Task Forceಗೆ ನಾವು ಹಣ ಕೊಟ್ಟು, ನಿಮ್ಮ ಅಧ್ಯಕ್ಷತೆಯಲ್ಲಿ ಏನು ಮಾಡಬೇಕೆಂದು ನಾವು ಹೇಳಿದ್ದೇವೆಯೋ, ಅದರ ಅನುಷ್ಠಾನ ಮಾಡಿಲ್ಲ ಎನ್ನುವ

ಅಧಿಕಾರಿಯಿದ್ದರೆ, ಯಾವ ಶಾಸಕರಿಂದ complaint ಬರುತ್ತವೆಯೋ ತಕ್ಷಣ ಅವರ ಮೇಲೆ ಶಿಸ್ತಿನ ಕ್ರಮವನ್ನು ಜರುಗಿಸುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ:- ಮಾನ್ಯ ಸಚಿವರೆ, ತಮ್ಮಿಂದ ಮತ್ತೊಂದು ಆದೇಶ ಹೋದರೆ ಅದು ಜಿಲ್ಲಾ ಅಧಿಕಾರಿಗಳ ಹತ್ತಿರ Task Force ಇರಬಹುದು, CEO ಹತ್ತಿರ ಇರಬಹುದು, ಯಾವುದೇ Task Force ನಾವು resolution ಮಾಡಿ ಕಳುಹಿಸಿದ ತಕ್ಷಣ ಹಣ available ಇರುವಂಥ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ವಾರ, 10 ದಿನಗಳೊಳಗಾಗಿ ಅದನ್ನು implement ಮಾಡುವಂಥ ಆದೇಶವನ್ನು strict ಆಗಿ ಕಳುಹಿಸಿ. 6 ತಿಂಗಳು, 3 ತಿಂಗಳು Executive Engineer ಹತ್ತಿರ, EO ಹತ್ತಿರ, CEO ಹತ್ತಿರ ಕಛೇರಿಯಲ್ಲಿ ಓಡಾಡುವಂಥ ಪರಿಪಾಠ ತಪ್ಪಬೇಕು.

ಶ್ರೀ ಬಸವರಾಜ ಬೊಮ್ಮಾಯಿ:- Complaintನ ಆಧಾರದ ಮೇಲೆ ಶಿಸ್ತನ ಕ್ರಮ ತೆಗೆದುಕೊಳ್ಳುವುದು ಇದರಲ್ಲಿ ಒಂದು ಭಾಗ. ಮತ್ತೊಂದು ಏನೆಂದರೆ ಇದನ್ನು ಸ್ವಲ್ಪ ಸರಳೀಕರಣ ಮಾಡಿದರೆ ಮುಂದಿನ ದಿನಗಳಲ್ಲಿ ಅನುಕೂಲವಾಗುತ್ತದೆ. Task Forceನಲ್ಲಿ approval ಆಗಿರುವಂಥ estimates Executive Engineerಗೆ ಹೋಗಿ ನಂತರ CEOಗೆ ಹೋಗುತ್ತಿದೆ. ಈ powerನ್ನು AEEಗೆ ಕೊಟ್ಟು ಬಿಟ್ಟರೆ ಬಹಳಷ್ಟು ಕೆಲಸ ಸರಳೀಕರಣವಾಗುತ್ತದೆ. ಅದನ್ನು ಜಾರಿಗೆ ತರುವ ಬಗ್ಗೆ ತಾವು ಚಿಂತನೆಯನ್ನು ಮಾಡಿ. Estimate ಮಾಡುವ ಅಧಿಕಾರವಿದೆ, approve ಮಾಡುವ ಅಧಿಕಾರವನ್ನು ಅವರಿಗೆ ಕೊಡಿ. Executive Engineerಗೆ ಹೋಗಿ ಜಿಲ್ಲಾ ಕಛೇರಿಗೆ ಹೋದರೆ ಮತ್ತೆ ಕಷ್ಟವಾಗುತ್ತದೆ.

ಶ್ರೀ ಎಂ. ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಸಮಸ್ಯೆಗಳಿಗೆ ಒಂದು ಪರಿಹಾರ ಸಿಗಬೇಕೆಂದರೆ ಮಾನ್ಯ ಮಂತ್ರಿಗಳೆಲ್ಲರೂ ಸಹ ಆಯಾಯ ಜಿಲ್ಲೆಗಳಿಗೆ ಹೋಗಿ ಶಾಸಕರ ಜೊತೆ ಸಭೆ ಮಾಡಿದಾಗ ಇದಕ್ಕೆಲ್ಲಾ ಒಂದು ಪರಿಹಾರ ಸಿಗುತ್ತದೆ. ನಮಗೆ ಕಳೆದ ವರ್ಷ ಬೆಳಗಾವಿಯಲ್ಲಿ ನಡೆದಂಥ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ನಾನೇ ಖುದ್ದಾಗಿ ಚಿಕ್ಕಬಳ್ಳಾಪುರ ಜಿಲ್ಲೆಗೆ

ಬರುತ್ತೇನೆಂದು ಹೇಳಿದವರು ಇವತ್ತಿನವರೆಗೂ ಸಹ ಅಲ್ಲಿಗೆ ಬಂದಿಲ್ಲ. ಈ ರೀತಿಯಾದರೆ ಸಮಸ್ಯೆಗಳು ಹೇಗೆ ಸುಧಾರಣೆಯಾಗುತ್ತವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾನು ಹೆಚ್ಚು ವಿಸ್ತಾರವಾಗಿ ಹೇಳುವುದಿಲ್ಲ. ಉಳಿದ ಎಲ್ಲಾ ವಿಷಯಗಳು ಚರ್ಚೆಯಾಗಿದೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ವರ್ಷದಿಂದ ವರ್ಷಕ್ಕೆ ಹೆಚ್ಚೆಚ್ಚು ಶಕ್ತಿ ಕೊಡುವುದರ ಬದಲು ನಾವು ಅವರನ್ನೆಲ್ಲಾ ಎಲ್ಲೋ ಒಂದು ಕಡೆ weak ಮಾಡುತ್ತಿದ್ದೇವೆ. ಅವರ ಶಕ್ತಿ ಕಳೆಗುಂದುವಂತೆ ಮಾಡುತ್ತಿದ್ದೇವೇನೋ ಎಂದು ಅನಿಸುತ್ತದೆ. ಹಾಗಾಗಿ ಆ ಸಮಗ್ರ ತಿದ್ದುಪಡಿ ಬಗ್ಗೆ ಚರ್ಚೆಗೆ ಬರುತ್ತದೆ, ಆ ಸಂದರ್ಭದಲ್ಲಿ ಇನ್ನಷ್ಟು ವಿಸ್ತಾರವಾಗಿ ಚರ್ಚೆ ಮಾಡೋಣ. ಇನ್ನು ಎರಡು ವಿಷಯಗಳ ಬಗ್ಗೆ ನಾನು ಸಂಕ್ಷಿಪ್ತವಾಗಿ ಉಲ್ಲೇಖಿಸುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ಹಿಂದುಳಿದ ತಾಲ್ಲೂಕುಗಳನ್ನು ಅಭಿವೃದ್ಧಿ ಮಾಡುವುದರ ಕುರಿತು ನಂಜುಂಡಪ್ಪನವರ ವರದಿಯ ಬಗ್ಗೆ ಚರ್ಚೆ ಮಾಡಲು ಪ್ರತ್ಯೇಕವಾಗಿ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ. ಹಾಗಾಗಿ, ನಾನು ಆ ವಿಷಯವನ್ನು ಸಹ ತಾಲ್ಲೂಕುಗಳಲ್ಲಿ ಏನು ಮಾಡಬೇಕು? ನೀವು ಗುರುತಿಸಿರುವಂಥ ಹಿಂದುಳಿದ ತಾಲ್ಲೂಕುಗಳನ್ನು ನಮ್ಮ ಕೇಂದ್ರ ಸರ್ಕಾರದ ಅನುದಾನದಿಂದ ಅಭಿವೃದ್ಧಿಪಡಿಸುವುದಕ್ಕೆ ಏನು ಪ್ರಯತ್ನಗಳಾಗಬೇಕಿತ್ತೋ ಅದೆಲ್ಲವೂ ಹೇಗೆ ಆಗದೆ ಉಳಿದಿದೆ ಇತ್ಯಾದಿಗಳೆಲ್ಲವನ್ನೂ ಆ ಸಂದರ್ಭದಲ್ಲೇ ಚರ್ಚೆ ಮಾಡುವುದಕ್ಕೆ ಯೋಗ್ಯ ಎಂದು ನಾನು ಅಂದುಕೊಳ್ಳುತ್ತೇನೆ. ಹಾಗಾಗಿ ಆ ವಿಷಯವನ್ನು ನಾನು ಹೇಳುವುದಿಲ್ಲ. Non-Conventional Energy Boardನ್ನು ತಾವು ಸಂಪೂರ್ಣವಾಗಿ ಮರೆತಂತೆ ಕಾಣುತ್ತದೆ. ನಾನು ಹೇಳುವುದು electricity ಬಗ್ಗೆ ಅಲ್ಲ. ಬದಲಿ ಇಂಧನ ಮೂಲಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿಯೇ ಬರುತ್ತದೆ. Non-Conventional Sources of Energy, ಅಸಂಪ್ರದಾಯಿಕ ಇಂಧನ ಮೂಲಗಳು. ನಾವು ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಗ್ರಾಮೀಣ ಭಾಗದಲ್ಲಿ ಅದಕ್ಕೆ ಸಂಬಂಧಪಟ್ಟಂತಹ ಸಸಿಗಳನ್ನು ವಿತರಣೆ ಮಾಡಿ ಅದನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಟ್ಟು ಈ

ಬದಲಿ ಇಂಧನ ಮೂಲಗಳನ್ನು ಪ್ರೋತ್ಸಾಹಿಸುವುದಕ್ಕೆ ಒಂದು ಯೋಜನೆ ಇದೆ. ಅದನ್ನು ಮಾಡಬೇಕು. ವಿಶೇಷವಾಗಿ head & sub head ಎಂದು ಏನಿದೆಯಲ್ಲ, ಅವು ಒಟ್ಟು ಎಷ್ಟಿದೆ ಎಂದು ಲೆಕ್ಕ ಮಾಡುವುದಕ್ಕೆ ಹೋದರೆ ಯಾವ headಗೂ clarity ಬರುವುದಕ್ಕೆ ಸಾಧ್ಯವಿಲ್ಲ. ಇದರೊಳಗೆ ಈ head ಗಳೆಲ್ಲವನ್ನೂ ಸರಳೀಕರಣಗೊಳಿಸಬೇಕು. ಇದರಲ್ಲಿ ಮುಖ್ಯವಾಗಿ program ಮತ್ತು scheme ಗಳದ್ದು ಅಥವಾ ಈಗ ಬೇರೆ ಬೇರೆ ರೀತಿಯ name of the schemes ಅಡಿಯಲ್ಲಿ head of accounts ಕೊಟ್ಟಿದ್ದಾರೆ. ಆದರೆ sub head ಗಳನ್ನು ನೋಡಿದರೆ ಹಣ ಕೊಟ್ಟಂತೆ ಕಾಣಬಹುದು, ಆದರೆ ಹಣ ಮಾತ್ರ ಯಾವುದಕ್ಕೂ ಬಳಕೆ ಆಗದಿರುವ ಸ್ಥಿತಿ ಇದೆ. ಆ head ನಲ್ಲಿ ಇದು ಬರುವುದಿಲ್ಲ, ಈ head ನಲ್ಲಿ ಅದು ಬರುವುದಿಲ್ಲ ಎಂದು ಹೇಳುತ್ತಾರೆ. ಯಾವ head ಗೆ ಬೇಕೋ ಆ ಹೆಡ್‌ಗೆ ದುಡ್ಡು ಇರುವುದಿಲ್ಲ ಎನ್ನುವ ಸ್ಥಿತಿ ಇದೆ. ಇದು ಎಲ್ಲಾ ಇಲಾಖೆಯಲ್ಲಿ ಎಲ್ಲಾ ವಿಷಯದ ಮೇಲೂ ಇದೆ. ಹಾಗಾಗಿ ಈ head ಗಳೆಲ್ಲವನ್ನೂ ಕಡಿಮೆ ಮಾಡಿ ಸರಳಗೊಳಿಸಿ ಆದ್ಯತೆಯ head ಗಳನ್ನು ಗುರುತಿಸಲು ಅದಕ್ಕೆ ಹಣಕಾಸಿನ ನೆರವು ಕೊಡುವಂತಹ ಪ್ರಯತ್ನವನ್ನು ಇಲಾಖೆ ಮಾಡದಿದ್ದರೆ ಈ ಇಲಾಖೆಯ ಬಗ್ಗೆ ಜನರು ವಿಶ್ವಾಸ ಗಳಿಸುವುದಕ್ಕೆ, ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಗ್ರಾಮೀಣ ಜನತೆಯ ಬದುಕು ಎಷ್ಟು ಕಷ್ಟದಲ್ಲಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಈಗಾಗಲೇ ಈ ಭಾಗದ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಜೊತೆಗೆ ನಗರಪ್ರದೇಶಕ್ಕೆ ವಲಸೆ ಹೋಗುತ್ತಿರುವಂತಹ ಸಾಕಷ್ಟು ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಆದರೆ, ಗ್ರಾಮೀಣ ಬದುಕನ್ನು ಬಿಟ್ಟರೆ ನಮ್ಮ ವ್ಯವಸ್ಥೆಯಲ್ಲಿ ಜನಜೀವನ ಇಲ್ಲ ಎನ್ನುವುದು ನಮಗೆ ಗೊತ್ತಿದೆ. ಹಾಗಾಗಿ ಈ ಗ್ರಾಮೀಣಾಭಿವೃದ್ಧಿ ಇಲಾಖೆ ಯಾವ ಆದ್ಯತೆಯಿಂದ ಸರ್ಕಾರದಲ್ಲಿ ಕೆಲಸ ಮಾಡಬೇಕಿತ್ತೋ, ಅದನ್ನು ಮಾಡುತ್ತಿಲ್ಲ. ಈಗೇನು ನೀವು ಬಜೆಟ್ ಮೂಲಕ ಬೇಡಿಕೆಗಳ ಮೂಲಕ ವಿಷಯವನ್ನು ಮಂಡಿಸಿದ್ದೀರೋ ಈ ಹಣವಾದರೂ ಸಮರ್ಪಕವಾಗಿ ಕೆಲಸವಾಗುವಂತೆ ಮಾಡಬೇಕು. ಹಣ ಖರ್ಚಾಗದೆ ಉಳಿದು spill over ಆಗಿ ಮುಂದಿನ ವರ್ಷಕ್ಕೆ ಹೋಗಿ ಅದು ಇನ್ಯಾವುದೋ ಬ್ಯಾಂಕ್ ಖಾತೆಯಲ್ಲಿದ್ದು

ಆ ಬ್ಯಾಂಕ್ ಖಾತೆಯ ವರದಿಗಳು ಮೊದಲೇ ಎಲ್ಲಾ ಗೊತ್ತಿದ್ದರೂ ನೀವೇ ಅದನ್ನೇನೋ ಸೀಲ್ ದವರು investigation ಮಾಡಿ ಲಾಡೆನ್ ಅನ್ನು ಹೊಡೆದು ಹಾಕಿದರಲ್ಲ, ಅ ರೀತಿ ಏನೋ ಮಾಡಿದೆವು ಎಂದು ಪೌರುಷದ್ದನ್ನು ಹೇಳುವುದಕ್ಕಿಂತ. ನನ್ನ ಬಳಿ ಅದೆಲ್ಲಾ ವಿವರ ಇದೆ, ರಾಮಕೃಷ್ಣ ಪತ್ರ ಏನು ನಿಮಗೆ ಬರೆದಿದ್ದಾರೆ, ನೀವು ಅವನನ್ನು ಹೇಗೆ suspend ಮಾಡಿದ್ದೀರಿ? ಅದರದ್ದೆಲ್ಲ ದಾಖಲೆ 2010–11ನೇ ಇಸವಿ video conference ನಿಂದ ಏನಾಗಿದೆ, ಅದೆಲ್ಲಾ ವಿವರಗಳಿವೆ ನನ್ನ ಬಳಿ. ಮಾಧ್ಯಮದಲ್ಲ ಒಳ್ಳೆಯ ರೀತಿಯಲ್ಲಿ ನಿಮ್ಮ ಬಗ್ಗೆ ಬಂದಿದೆ. ನಿಮಗೆ ಗೊತ್ತು ನಾನು ಹೇಳಿದೆನಲ್ಲ ಇದೆ ಎಂದು. ಹಾಗಾಗಿ show-casing ಮತ್ತೆ ಆ ಶಬ್ದ ಬಳಸುವುದು ಸರಿಯಲ್ಲ ಎಂದು ನಾನು ಅದನ್ನು ಹೇಳಲಿಲ್ಲ.

ಅಧ್ಯಕ್ಷರು:– ಬೇಡ, ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದಕ್ಕೆ ನಿಮಗೆ ಅದು ಗೊತ್ತಿದೆ. ನೀವು ಅದನ್ನೇನೋ ದೊಡ್ಡ ಹುಲಿ ಹೊಡೆದು ಬೇಟೆಯಾಡಿ ಬಂದವರ ರೀತಿ ಮಾಡಿದ್ದೀರಿ. ಆದರೆ 2010–11ನೇ ಸಾಲಿನಿಂದಲೇ ಇಲಾಖೆಯ ಗಮನಕ್ಕೆ ಬಂದಿತ್ತು.

ಶ್ರೀ ಹೆಚ್.ಕೆ. ಪಾಟೀಲ್:– ಹಾಗಾದರೆ ಅದನ್ನು ಹೊಡೆದದ್ದು ತಪ್ಪು ಎನ್ನುತ್ತೀರೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರಿಯಿದೆ, ಸರಿ ಇದೆ. ಆದರೆ,...

ಶ್ರೀ ಹೆಚ್.ಕೆ. ಪಾಟೀಲ್:– ಅಲ್ಲ, ನಮ್ಮ ಸರ್ಕಾರದ ಅವಧಿಯಲ್ಲಿ ಇದ್ದದ್ದನ್ನು ಏಕೆ ತೆಗೆದಿರಿ ಎಂದೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರ್ಕಾರದ ವ್ಯವಸ್ಥೆ ಏನಿದೆ ಎನ್ನುವುದು, ನಿಮ್ಮ ಸರ್ಕಾರ, ನಮ್ಮ ಸರ್ಕಾರ ಬೇರೆ ಇಲ್ಲ ಅಲ್ಲಿ. ಅದೇ ಈ ರೀತಿ ರಾಜಕೀಯವಾಗಿ ಆರಿಸಿಕೊಂಡೇ ಇಲಾಖೆ ಹೀಗೆ ಹಾಳಾಗುವುದು ಅಷ್ಟೆ. ನಿಮಗೆ ಅದರ ಬಗ್ಗೆ ಪೂರ್ಣವಾಗಿ ಹೇಳಬೇಕೆಂದರೆ ನನ್ನ ಬಳಿ ಮಾಹಿತಿ

ಇದೆ. ರಾಮಕೃಷ್ಣ ಅವರನ್ನು ಇವರು suspend ಮಾಡಿದರು, ಒಳ್ಳೆಯದು ಆಯಿತು.

ಶ್ರೀ ಹೆಚ್.ಕೆ. ಪಾಟೀಲ್:– ಪೂರ್ಣ ಹೇಳುವುದಲ್ಲ, ಈಗ ನೀವು ಏನು ಹೇಳಿದಿರಿ, ರಾಮಕೃಷ್ಣ, ನಾನು ಯಾರನ್ನು suspend ಮಾಡಿದೆ, ಅವನ ಹೆಸರು ಹೇಳಿದಿರಿ. ಅವನ ಪತ್ರ ಇಟ್ಟುಕೊಂಡು ಹೇಳುತ್ತಿದ್ದೀರಿ. ಎಷ್ಟು ಕೋಟಿ ಎಂಬುದನ್ನು ನಾನೂ ಹೇಳುತ್ತಿದ್ದೇನೆ. ನನಗೆ ಮಾಹಿತಿ ಬಂದ 48 ಗಂಟೆಯೊಳಗೆ ನಾನು ಸಾರ್ವಜನಿಕರಿಗೆ ಏನು ಹೇಳಬೇಕು, ನಿಮಗೆ ಏನು ಹೇಳಬೇಕು, ಹೇಳಿದ್ದೇನೆ. ಅದಕ್ಕೆ ನೀವು ಈ ರೀತಿ ಬಣ್ಣ ಕೊಡುವುದಕ್ಕೆ ಹೋಗಬೇಡಿ. ಅದು 132 ಕೋಟಿ ಇದ್ದದ್ದು. ಆ ಪತ್ರ ಏನು ನಿಮಗೆ 132 ಕೋಟಿಯದು ಕೊಟ್ಟಿದ್ದಾನೆ, ಅದು ಈಗ 990 ಕೋಟಿ ರೂ. ಆಗಿದೆ. ನಿನ್ನೆ ಇಲ್ಲಿಯೇ ನಾನು ಉತ್ತರ ಹೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಹೇಳುತ್ತಿರುವುದು......

ಶ್ರೀ ಹೆಚ್.ಕೆ. ಪಾಟೀಲ್:– ಬೆಳಕು ಚೆಲ್ಲಿ. ಏಕೆಂದರೆ ರಾಜ್ಯದ ವಿಷಯ ಅದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಬಹಳ ಮುಖ್ಯವಾದ ವಿಷಯ.

ಶ್ರೀ ಹೆಚ್.ಕೆ. ಪಾಟೀಲ್:– ಅದು ಯಾರೇ ತಪ್ಪು ಮಾಡಿರಲಿ, ಎಲ್ಲಿಯೇ ತಪ್ಪು ಮಾಡಿರಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನೀವು 2010–11ನೇ ಸಾಲಿನಿಂದಲೇ...

ಶ್ರೀ ಕೆ.ಬಿ. ಕೋಳಿವಾಡ:– ಕಾಗೇರಿಯವರೆ ಏನಾದರೂ ಗೊತ್ತಿದ್ದರೆ ಎಲ್ಲವನ್ನೂ ಸಂಪೂರ್ಣವಾಗಿ ಹೇಳಿಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಹೇಳುತ್ತೇನೆ. 2010–11ನೇ ಸಾಲಿನಿಂದಲೇ ಈ ವಿಷಯ ಚರ್ಚೆಯಲ್ಲಿದೆ. ಮತ್ತೆ ಈಗ ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳಲಿ. ನಾನು ಹೇಳುವುದೇನೆಂದರೆ, ನಾನು ಹೇಳುತ್ತಿರುವುದು spill over ಆಗಿ ಇನ್ಯಾವುದೋ ಬ್ಯಾಂಕ್ ಖಾತೆಯಲ್ಲಿ

ಹೋಗುವುದು ಉಳಿದು ಖರ್ಚಾಗದೆ ಮುಂದಿನ ವರ್ಷಕ್ಕೆ 1500 ಕೋಟಿ ರೂ. ಆಯಿತು ಅದು ಎಂದು ಮತ್ತೆ ಹೇಳುವ ಬದಲು ಖರ್ಚು ಮಾಡಲು ನೋಡಿ. ಖರ್ಚು ಮಾಡಿ ಮುಗಿಸಿ. ಇನ್ಯಾವುದೋ ಬ್ಯಾಂಕ್ ಖಾತೆಯಲ್ಲಿ ಇತ್ತು ಎಂದು ಏಕೆ ಹೇಳಿಸಿಕೊಳ್ಳಬೇಕು? ನೀವು ಖರ್ಚು ಮಾಡಿ ತೋರಿಸಿ ಎನ್ನುವುದು ನನ್ನ ಉದ್ದೇಶ. ಕೊಟ್ಟಿರುವ ಹಣ ಹೀಗೆ ಹೇಗೆ ಬ್ಯಾಂಕ್ ಖಾತೆಯಲ್ಲಿ ಹೋಗಿ ಉಳಿಯುತ್ತದೆ ಹೇಗೇಗೋ? ನೀವು ಖರ್ಚು ಮಾಡಿ ತೋರಿಸಿ. ಆ ವರ್ಷದ್ದು, ಆ ವರ್ಷವೇ ಖರ್ಚಾದರೆ ಈ ರೀತಿ ಬ್ಯಾಂಕ್ ಖಾತೆಗೆ ಹೋಗುವುದು ತಪ್ಪುತ್ತದೆ. ಹಾಗಾಗಿ...

ಶ್ರೀ ಬಸವರಾಜ ಬೊಮ್ಮಾಯಿ:- ಅದೇನೆಂದರೆ, ಕೇಂದ್ರ ಸರ್ಕಾರದ ಈ scheme ಗೆ ಏನು ವರದಿ ಕೊಡಬೇಕು, ಖರ್ಚಾಗಿದೆ ಎಂದು ಈಗಾಗಲೇ ವರದಿ ಕೊಟ್ಟು achievement ಅನ್ನು ತೋರಿಸಿಕೊಂಡಿರುವಂತಹದ್ದು. ಆದುದರಿಂದ ಮತ್ತೆ ಖರ್ಚು ಮಾಡುವುದಕ್ಕೆ ಅವರು ಬಹಳ ಯೋಚನೆ ಮಾಡಿ ಖರ್ಚು ಮಾಡಬೇಕು. ಹಾಗೆ ಸುಮ್ಮ್-ಸುಮ್ಮನೆ ಖರ್ಚು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈಗ ಪ್ರತಿ ವರ್ಷದ್ದನ್ನು ಇವರು lapse ಆಗದಂತೆ ಆಯಾ ವರ್ಷದ್ದು ಆಯಾ ವರ್ಷವೇ ಖರ್ಚಾಗುವುದಕ್ಕೆ ಏನು ಬೇಕೋ ಆ ಪ್ರಯತ್ನವನ್ನು ಮಾಡಲಿ. ನಾವು ಒಪ್ಪಿಗೆ ಕೊಟ್ಟಂತಹ ಬೇಡಿಕೆಗೆ ಅನುಮೋದನೆ ಮಾಡಿರುವಂತಹ ಹಣವನ್ನು ಖರ್ಚು ಮಾಡಿ ತೋರಿಸಲಿ ನೋಡೋಣ. ನಿಮ್ಮ ಇಲಾಖೆಗೆ ಕೊಡುವುದೇ ಕಡಿಮೆ. ಅದನ್ನು ಕೊಡುವುದಕ್ಕೆ ನೀವೂ ಸಹ ವಿಫಲರಾದರೆ ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶ್ವಾಸ ಉಳಿಯುವುದಿಲ್ಲ. ವಿಶ್ವಾಸ ಉಳಿಯಬೇಕೆನ್ನುವುದಾದರೆ ಈ ಹಣ lapse ಆಗದೆ ಅದು ಪೂರ್ಣ ಖರ್ಚಾಗುವಂತೆ ನೀವು ನೋಡಬೇಕೆಂದು ಆಗ್ರಹಿಸುತ್ತೇನೆ. ತಾವು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು:- ನಾನೇನೋ ತಾರತಮ್ಯ ಮಾಡುತ್ತಿದ್ದೇನೆ ಎಂದು ಒಂದು ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದೆ. ನೀವ್ಯಾರೂ ನಿಮ್ಮ ಪಕ್ಷದಿಂದ ಮಾತನಾಡುವುದಕ್ಕೆ ಹೆಸರನ್ನು ಕೊಟ್ಟಿಲ್ಲ. ಆದರೂ ಮಾತನಾಡಿ.

ಶ್ರೀ ವೈ.ಎಸ್.ವಿ. ದತ್ತಾ:- ಅಲ್ಲ ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ಬೇಡ ನೀವು ಮಾತನಾಡಿ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ತಾವು ಹೇಳಿದ್ದಕ್ಕೆ ಹೇಳುತ್ತಿದ್ದೇನೆ.

ಅಧ್ಯಕ್ಷರು:- ಪತ್ರಿಕೆಯಲ್ಲಿ ಬಂದಿದ್ದಕ್ಕೆ ನಾನು ಹೇಳಿದ್ದು.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಖಂಡಿತಾ ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ನಾವು ಎಂದೂ ಕೂಡಾ ನೀವು ತಾರತಮ್ಯ ಧೋರಣೆ ಅನುಸರಿಸಿದ್ದೀರಿ ಎಂದು ನಾವ್ಯಾರೂ ಕೂಡಾ ಹೇಳಿಲ್ಲ. ಆದರೆ, ಒಂದೇ ಒಂದು. ನಮ್ಮ ಶಾಸಕಾಂಗ ಪಕ್ಷದ ನಾಯಕರಾದ ಕುಮಾರಸ್ವಾಮಿಯವರು ಮಾತನಾಡುತ್ತಿದ್ದಾಗ ಸ್ವಲ್ಪ ಕಾಲಾವಕಾಶ ಅವರಿಗೆ ಹೆಚ್ಚಿಗೆ ಬೇಕಿತ್ತು. ಮೊಟಕಾಯಿತು ಎನ್ನುವುದಕ್ಕಷ್ಟು ಮಾತ್ರ ಸೀಮಿತವಾದ ಉದ್ದೇಶದಲ್ಲಿ ಕೊಂಚ ಅಸಮಾಧಾನವಾಗಿದೆ.

ಅಧ್ಯಕ್ಷರು:- ಆಯಿತು, ಬೇಡ. ಮಾತನಾಡಿ.

ಶ್ರೀ ವೈ.ಎಸ್.ವಿ. ದತ್ತಾ:- ಅದನ್ನು ಬಿಟ್ಟರೆ ಖಂಡಿತವಾಗಿ ಸಭಾಧ್ಯಕ್ಷರ ಪೀಠಕ್ಕೆ ವೈಯಕ್ತಿಕವಾಗಿ ತಮ್ಮ ಬಗ್ಗೆ ನಮ್ಮ ಪಕ್ಷಕ್ಕೆ ಅಪಾರವಾದ ಗೌರವ ಇದೆ. ಒಂದು ನಾವು ಇಲಾಖೆವಾರು ಮಾತನಾಡುವುದಕ್ಕೆ ಪಟ್ಟಿಯನ್ನು ನಿನ್ನೆ ಶಾಸಕಾಂಗ ಪಕ್ಷದ ಸಭೆಯಾದ ಮೇಲೆ ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು:- ಈಗ ನೀವು ಮಾತನಾಡುವುದನ್ನು ಹೇಳಿ ಮಾರಾಯರೆ.

ಶ್ರೀ ವೈ.ಎಸ್.ವಿ. ದತ್ತಾ:- ಅದಕ್ಕೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಮೇಲೆ ಶಿವಲಿಂಗೇಗೌಡರು ಮಾತನಾಡುತ್ತಾರೆ.

ಅಧ್ಯಕ್ಷರು:- ಮಾತನಾಡಲಿ ಶಿವಲಿಂಗೇಗೌಡರೆ ಹೇಳಿ ನೋಡಿ ಅರ್ಧ ಗಂಟೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಬಿ.ಜೆ.ಪಿ ಪಕ್ಷದವರು ಒಂದೂವರೆ ಗಂಟೆ ಮಾತನಾಡಿದರು.

ಅಧ್ಯಕ್ಷರು:- ವಿರೋಧ ಪಕ್ಷದವರು, ಅದಕ್ಕೋಸ್ಕರ. ಆಯಿತು ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅವರು ವಿರೋಧ ಪಕ್ಷದವರು. ನಾವೂ 40 ಜನ ಎಂ.ಎಲ್.ಎ ಗಳಿದ್ದೇವೆ. ಸದಸ್ಯರ ಸಂಖ್ಯೆ ಮೇಲೆ decide ಮಾಡಿ.

ಶ್ರೀ ಸಾ.ರಾ. ಮಹೇಶ್:- ಇದನ್ನೇ ನಿನ್ನೆ ಕುಮಾರಸ್ವಾಮಿಯವರು ಹೇಳಿದ್ದು. ನೀವು ಮೊನ್ನೆಯಿಂದ ತೆಗೆಯಿರಿ. ಮೊನ್ನೆಯಿಂದ ಸದನ ಪ್ರಾರಂಭವಾದಾಗಿನಿಂದ ನೀವು record ತೆಗೆಸಿ. ಅವರೆಷ್ಟು ಸಮಯ ಮಾತನಾಡಿದ್ದಾರೆ, ನಾವೆಷ್ಟು ಸಮಯ ಮಾತನಾಡಿದ್ದೇವೆ. ನಮ್ಮ ನಾಯಕರು ಎಷ್ಟು ಸಮಯ ಮಾತನಾಡಿದ್ದಾರೆ, ಆ ನಾಯಕರು ಎಷ್ಟು ಸಮಯ ಮಾತನಾಡಿದ್ದಾರೆ ಒಂದು ಬಾರಿ ತಾವೇ ನೋಡಿ ನಂತರ ನಿರ್ಧಾರ ಮಾಡಿ.

ಅಧ್ಯಕ್ಷರು:- ನನಗೆ ನನ್ನ ಇಚ್ಛೆ ನನ್ನ ತೀರ್ಮಾನ, ನನಗೆ ಏನು ಕಂಡಿದೆ, ಅದನ್ನು ತೀರ್ಮಾನ ಮಾಡಿದ್ದೇನೆ. ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ನಿಮ್ಮ ಸರ್ವಾಧಿಕಾರವನ್ನು ನಾವು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಈ ವ್ಯವಸ್ಥೆಯೊಳಗೆ ನಾವು ಪ್ರಶ್ನೆ ಮಾಡುವುದಿಲ್ಲ.

ಅಧ್ಯಕ್ಷರು:- ಸರ್ವಾಧಿಕಾರಿ ಅಲ್ಲಾರಿ, ಎಂತಹ ಭಾಷೆ ಬಳಸುತ್ತೀರಿ?

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಸರ್ವಾಧಿಕಾರ ಅಲ್ಲ, ನಿಮ್ಮ ಪರಮಾಧಿಕಾರವನ್ನು.

ಶ್ರೀ ಸಾ.ರಾ. ಮಹೇಶ್:- ಸಾರ್ವಭೌಮಾಧಿಕಾರ ಎನ್ನುವುದನ್ನು ಅವರು ತಪ್ಪಾಗಿ ಹೇಳಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಿಮ್ಮ ಸಾರ್ವಭೌಮಾಧಿಕಾರವನ್ನು ನಾವು ಪ್ರಶ್ನೆ ಮಾಡುವಂತಿಲ್ಲ. ದಯವಿಟ್ಟು ಕ್ಷಮಿಸಿ.

ಅಧ್ಯಕ್ಷರು:- ಮಾತನಾಡಿ, ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):- ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ದಿ ಇಲಾಖೆ ಬಗ್ಗೆ ಸನ್ಮಾನ್ಯ ಸಚಿವರು ಬೇಡಿಕೆಯನ್ನು ಮಂಡಿಸಿದ್ದಾರೆ. ಆಯವ್ಯಯದಲ್ಲಿ ಕೊಟ್ಟಿರುವಂತಹ ಹಣಕ್ಕೆ ನಾವು ಖರ್ಚು ಮಾಡುವುದಕ್ಕೆ ಅನುಮೋದನೆಯನ್ನು ಕೊಡಬೇಕು ಎನ್ನುವುದನ್ನು ಎಲ್ಲಾ ಬಾಬ್ತಿಗೆ ಎಷ್ಟೆಷ್ಟು ಹಣವನ್ನು ಇಟ್ಟಿದ್ದೇವೆ, ಯಾವ ರೀತಿ 2015-16ನೇ ವಾರ್ಷಿಕ ವರ್ಷದಲ್ಲಿ ಹಣವನ್ನು ವಿನಿಯೋಗ ಮಾಡುತ್ತೇವೆ ಎನ್ನುವುದನ್ನು ಚಿತ್ರಣವನ್ನು ಇಟ್ಟಿದ್ದೀರಿ. ಅದರಲ್ಲಿ ಮೊದಲನೆಯದು, ಮೂಲಭೂತವಾಗಿ ಮಹಾತ್ಮಾಗಾಂಧೀಜಿಯವರು ಗ್ರಾಮ ಸ್ವರಾಜ್ಯದ ಕನಸನ್ನು ಕಂಡಿದ್ದರು. ಈ ರಾಷ್ಟ್ರ ಏನಾದರೂ ನೆಮ್ಮದಿಯಿಂದ ಇದೆ, ಅಭಿವೃದ್ಧಿಯ ಪಥದಲ್ಲಿ ಇದೆ ಎನ್ನುವುದಾದರೆ ಗ್ರಾಮೀಣ ಸ್ವರಾಜ್ಯ ಆಗಬೇಕು. ಗ್ರಾಮೀಣ ಬದುಕು ನನಸಾಗಬೇಕು, ಗ್ರಾಮೀಣ ಬದುಕಿಗೆ ಒಂದು ಅರ್ಥ ಬರಬೇಕು. ಅವರೆಲ್ಲಾ ಮೂಲಭೂತ ಸೌಕರ್ಯಗಳಿಂದ ವಂಚಿತರಾಗದೆ ಎಲ್ಲಾ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ಹೊಂದಿರಬೇಕೆನ್ನುವುದು ಅವರ ಇಚ್ಛೆಯಾಗಿತ್ತು. ಅದರಂತೆ ಅವರು ಕಂಡಂತಹ ಕನಸಿನಲ್ಲಿ ಶುದ್ಧ ಕುಡಿಯುವ ನೀರನ್ನು ಕೊಡುವುದು, ಗ್ರಾಮೀಣ ಪ್ರದೇಶದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು, ನೈರ್ಮಲ್ಯವನ್ನು ಕಾಪಾಡುವುದು ಮತ್ತು ಉತ್ತಮವಾದ ರಸ್ತೆ, ಚರಂಡಿ, ಈ ರೀತಿ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಹೊಂದಿರಬೇಕೆನ್ನುವುದು ಇವತ್ತಿನ ನಾಗರೀಕತೆಯ ವೈಜ್ಞಾನಿಕ ಲೋಕದಲ್ಲಿ ನಾವು ನಿರೀಕ್ಷಣೆ ಮಾಡುವಂತಹದ್ದು. ಆದರೆ ನಾವು ಪಾಟೀಲರ ಸಾಮರ್ಥ್ಯದ ಬಗ್ಗೆ ಮಾತನಾಡುವುದರ ಜೊತೆಗೆ ಅದಕ್ಕೆ ಕೊಟ್ಟಿರುವ ಹಣವೆಷ್ಟು, ನಿಜವಾಗಿಯೂ ಆ ಇಲಾಖೆಗೆ ಅಷ್ಟು ಹಣ

ಸಾಕಾಗುತ್ತದೆಯೇ, ಎಷ್ಟು ಕಾರ್ಯಕ್ರಮಗಳಿದ್ದಾವೆ. ಆ ಎಲ್ಲಾ ಕಾರ್ಯಕ್ರಮಗಳಿಗೆ ಅವರು ಸಮರ್ಥವಾಗಿ ಕೆಲಸ ಮಾಡಿ ಈ ರಾಜ್ಯದ ಜನತೆಗೆ ಈ ಗ್ರಾಮೀಣ ಪ್ರದೇಶದ ಬದುಕಿಗೆ ಒಂದು ವ್ಯವಸ್ಥೆಯನ್ನು ತಂದು ಕೊಡಬೇಕಾದರೆ ಇದು ಸಾಧ್ಯವೇ ಎನ್ನುವ ಚಿಂತನೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಆಮೇಲೆ ಇಲಾಖೆಯಲ್ಲಿರುವ ವೈಫಲ್ಯಗಳ ಬಗ್ಗೆ, ಇಲಾಖೆಯಲ್ಲಿರುವ ಅಸಮರ್ಥತೆ ಬಗ್ಗೆ ಇಲಾಖೆ ಯಾವ ಕಡೆ ದಾರಿ ತಪ್ಪುತ್ತಿದೆ, ಯಾವ್ಯಾವ ಯೋಜನೆಗಳಲ್ಲಿ ದಾರಿ ತಪ್ಪುತ್ತಿದೆ, ಎಲ್ಲೆಲ್ಲಿ ಅಸಮರ್ಥರಿದ್ದಾರೆ, ಏತಕ್ಕೋಸ್ಕರ ದಾರಿ ತಪ್ಪುತ್ತಿದೆ ಎನ್ನುವುದನ್ನು ಈ ಸದನದ ಮೂಲಕ ಅವರ ಗಮನವನ್ನು ಸೆಳೆಯೋಣ. ನಾನು ಆಯವ್ಯಯವನ್ನು ಮಂಡನೆ ಮಾಡಿದಾಗ ಸ್ವಲ್ಪಮಟ್ಟಿಗೆ ಯೋಚನೆ ಮಾಡಿದೆ, ಇಟ್ಟಿರುವ ಹಣ ಸಾಲದು, ಇವರು ಏತಕ್ಕೆ ವೇಗವಾಗಿ ಹೋಗುವುದಿಲ್ಲವೆಂದರೆ, ಕಂಟ್ರೋಲ್ ಮಾಡುತ್ತಾರೆಂದರೆ, ಹಣ ಕೊಟ್ಟಿರುವುದೇ ಇಷ್ಟು, ಇದು ಒಂದು ತಿಂಗಳಿಗೆ, ಎರಡು ತಿಂಗಳಿಗೆ, ಮೂರು ತಿಂಗಳಿಗೆ ಪ್ರೋಗ್ರೆಸ್ ಆಗಿ ಮುಗಿದು ಹೋಗಿಬಿಟ್ಟರೆ, ಇನ್ನು 9 ತಿಂಗಳು ಉತ್ತರ ಹೇಗೆ ಹೇಳುವುದು ಎನ್ನುವ ಭಾವನೆ ಇಲಾಖೆಯಲ್ಲಿರುವ ಇವರಿಗೆಲ್ಲಾ ಬಹುಶಃ ಇರಬಹುದು, ನಾನು ಹೇಗೆ ಯೋಚನೆ ಮಾಡುತ್ತಿರುತ್ತೇನೆ. ಇವರಿಗೆ ಕೊಟ್ಟಿರುವ ಹಣ ಬೇಗ ಮುಗಿದು ಹೋದರೆ, ಬೇಗ ಬೇಗ ಪ್ರೋಗ್ರೆಸ್ ಕೊಟ್ಟು, ಬೇಗ ಬೇಗ ಕಾರ್ಯಕ್ರಮ ಮಾಡಿದರೆ, ಆ ಮೇಲೆ 9 ತಿಂಗಳು, 8 ತಿಂಗಳು ಏನು ಮಾಡುವುದು, ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕಾ? ಈ ಭಾವನೆ ಇರಬೇಕು. ಆದುದರಿಂದಲೇ ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಉತ್ತಮವಾದ ಹೆಸರನ್ನು ಗಳಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ, ಮೊದಲು ಸಂಪನ್ಮೂಲದ ಕೊರತೆ ಅದನ್ನು ಈ ಸದನದಲ್ಲಿ ನಾವು ಒಪ್ಪಿಕೊಳ್ಳಬೇಕು. ಪ್ರತಿಯೊಂದು ಇಲಾಖೆಯ ಪ್ರತಿಯೊಂದು ಯೋಜನೆಗೆ ಇಟ್ಟಿರುವ ಸಂಪನ್ಮೂಲದ ಕೊರತೆಯನ್ನು ನಾವು ಅವಲೋಕನ ಮಾಡಿದಾಗ ಅದರ ಅರ್ಥ ನಮಗೆ ಗೊತ್ತಾಗುತ್ತದೆ. ಈಗ ಅದನ್ನು ಕಾರ್ಯಗತ ಮಾಡುವ ಆಡಳಿತ ವ್ಯವಸ್ಥೆಯಲ್ಲಿ ಮೊದಲು ಏನಿದೆ ತಪ್ಪು, establishment ಅನ್ನು ಜಾಸ್ತಿ

ಮಾಡಿಕೊಂಡಿದ್ದೀರಿ. ಹೇಗೆ establishment ಆಗಿದೆ, ಹೇಗೆ establishment ಜಾಸ್ತಿಯಾಗಿದೆ? ಗ್ರಾಮೀಣಾಭಿವೃದ್ಧಿ ಅಧಿಕಾರಿಗಳು ಏನೂ ಬೇಕಾಗಿತ್ತು, ಅಂದು ನಾವು ಇರಲಿಲ್ಲ. ಅಂದಿನ ವಿಧಾನ ಸಭೆಯಲ್ಲಿ ಪಿಡಿಓಗಳ ಬಗ್ಗೆ ತೀರ್ಮಾನವಾಗಿರಬಹುದು. ಅಲ್ಲಿ ಇನ್ನೊಬ್ಬ secretary ಕುಳಿತಿದ್ದಾನಲ್ಲ, ಅವನಿಗೆ ಏನು ಕೆಲಸ ಕೊಟ್ಟಿದ್ದೀರಿ? ಆ secretaryಗಳಿಗೆ ಏನು ಕೆಲಸವಿದೆ? ಈ ಪಿಡಿಓಗಳು ಹೇಳುತ್ತಾರೆ, ನಾನು 4 ದಿವಸ ಊರಿಗೆ ಹೋಗಿ ಬರುತ್ತೇನೆ ನೀನು ನೋಡಿಕೊಂಡಿರು, ಮತ್ತೆ ನಾನು ಊರಿಗೆ ಹೋಗುತ್ತೇನೆ, ನೀನು ನೋಡಿಕೊಂಡು ಇರು ಎಂದು, ಅಲ್ಲಿ ಏನಿದೆ, 10 ಜನ ಸದಸ್ಯರು 6 ಹಳ್ಳಿ, ಒಬ್ಬ secretary ಒಬ್ಬ ಪಿಡಿಓ, ಊರಿಗೆ 6 ಜನ ನೀರು ಬಿಡುವವರು. ಆ establishment ವ್ಯವಸ್ಥೆಯನ್ನು ನೋಡಿದರೆ, 27 ಜನ ಸದಸ್ಯರಿರುವ ಪಂಚಾಯತಿಗೂ ಒಬ್ಬನೆ ಸೆಕ್ರೆಟರಿ, ಒಬ್ಬನೆ ಪಿಡಿಓ, 10 ಜನ ಸದಸ್ಯರಿರುವ ಪಂಚಾಯತಿಗೂ ಒಬ್ಬನೆ ಸೆಕ್ರಟರಿ, ಒಬ್ಬನೆ ಪಿಡಿಓ, ಅವರು ಏನು ಮಾಡುತ್ತಿದ್ದಾರೆ, ನಿಜವಾಗಿಯೂ ಕಾರ್ಯಗತವಾಗುತ್ತಿದೆಯಾ? ಈಗ ನಮ್ಮ ಹಳ್ಳಿಗಳ ಕಡೆಯೆಲ್ಲಾ ಜನರು ಮಾತನಾಡುತ್ತಿದ್ದಾರೆ, ಹಿಂದೆ ಇದ್ದ ಸೆಕ್ರೆಟರಿಗಳೇ ಪರವಾಗಿರಲಿಲ್ಲ, ಅವರ ಕೈಯಲ್ಲಿ ಕೆಲಸವಾದರೂ ಮಾಡಿಸಿಕೊಳ್ಳಬಹುದಾಗಿತ್ತು, ಈ ಪಿಡಿಓಗಳು ಸ್ವಲ್ಪ standard ಆಗಿ ಕೈಗೂ ಸಿಗುವುದಿಲ್ಲ, ಕೆಲಸವೂ ಮಾಡುವುದಿಲ್ಲವೆಂದು ಮಾತನಾಡಿಕೊಳ್ಳುವ ಒಂದು ಪರಿಪಾಠ ಇವತ್ತು ನಮ್ಮ ಹಳ್ಳಿಗಳಲ್ಲಿ ನಡೆಯುವುದನ್ನು ಜನರು ನಮ್ಮ ಹತ್ತಿರ ಬಂದು ಹೇಳಿಕೊಡುತ್ತಾರೆ, ಈ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ಅಲ್ಲಿನ establishmentಗೆ ನೀವು ಹಣವನ್ನು ಜಾಸ್ತಿ ಕೊಡುವುದರ ಬದಲು ಆ ಇಂಜಿನಿಯರಿಂಗ್ ವಿಭಾಗ, ಕಾಗೇರಿಯವರು ಹೇಳಿದ್ದು ಸತ್ಯ, ನಿಮ್ಮ ಕನಸು ಒಳ್ಳೆಯದು. ಗ್ರಾಮೀಣ ಕುಡಿಯುವ ಯೋಜನೆಯನ್ನು ನೀವು ಪ್ರತ್ಯೇಕ ವಿಭಾಗ ಮಾಡಿ ಅದಕ್ಕೆ ಕಾಯಕಲ್ಪ ಕಲ್ಪಿಸಬೇಕೆನ್ನುವ ಉದ್ದೇಶದಿಂದ ನೀವು ಏನೊಂದು ಉಪ ವಿಭಾಗವನ್ನು ರಚನೆ ಮಾಡಿದಿರಿ, ಡಿವಿಷನ್‌ಗಳನ್ನು ರಚನೆ ಮಾಡಿದಿರಿ, ಇದು ನಿಜವಾಗಿಯೂ ಒಳ್ಳೆಯ concept, ಒಳ್ಳೆಯ ವಿಚಾರ ಆದರೆ ಮೂಲಭೂತವಾಗಿ Chief Engineer ಸಿಕ್ಕಿದ್ದಾರೆ, Executive Engineers

ಸಿಗುತ್ತಾರೆ, AEE ಸಿಗುತ್ತಾರೆ, ಈ ಜೂನಿಯರ್ ಇಂಜಿನಿಯರ್ಸ್ ಒಬ್ಬನೂ ಇಲ್ಲವಲ್ಲ, sub division ಹೇಗೆ ಓಡುತ್ತದೆ? ಅಲ್ಲಿ ಮೊದಲೇ RDPRನಲ್ಲಿ 11 ಜನ ಸ್ಟಾಫ್ ಗೆ 4 ಜನ ಇಂಜಿನಿಯರ್ಸ್‌ಗಳು ನನ್ನ ಕೇತ್ರದಲ್ಲಿದ್ದರು, ಅದರಲ್ಲಿ ಎರಡು ಜನ, ನಮ್ಮ ಕ್ಷೇತ್ರದಲ್ಲಿ ಒಂದು ತರಹ punishment ಏನಪ್ಪ ಎಂದರೆ ಎಷ್ಟು ಸಾರಿ ಸಸ್ಪೆಂಡ್ ಆಗಿದ್ದೀಯಾ ಎಂದು ಕೇಳುತ್ತಾರೆ. ಚಾಮರಾಜನಗರ ಅಲ್ಲಿ ಇಲ್ಲಿ ಮೂರ್‍ನಾಲ್ಕು ಸಾರಿ ಆಗಿದ್ದೇನೆ ಎಂದರೆ, ಬಾ ನೀನು ಸಾಕು ಒಳ್ಳೆಯ ವ್ಯಕ್ತಿ ಎಂದು ಅವನನ್ನು ನಮ್ಮ ಕಡೆಗೆ ತಳ್ಳುತ್ತೀರಿ. ಯಾವ ತಳ್ಳುತ್ತೀರೋ, ನಾವು ಯಾವ ಕರ್ಮ ಮಾಡಿ ಇಲ್ಲಿಗೆ ಬಂದಿದ್ದೇವೋ ಗೊತ್ತಿಲ್ಲ. ಎರಡು ಜನ ಇಂಜಿನಿಯರ್ಸ್‌ಗೆ ಎಂ.ಬಿ. ಪುಸ್ತಕ ಬರೆಯುವುದಕ್ಕೆ ಬರುವುದಿಲ್ಲ. ಸುಮ್ಮನೆ ಕೂರಿಸಿ ಸಂಬಳ ಕೊಡುತ್ತಿದ್ದಾರೆ. ಇನ್ನು ಇಡೀ sub division ಅನ್ನು 2 ಜನ ಇಂಜಿನಿಯರ್ಸ್ ನೋಡಿಕೊಳ್ಳಬೇಕು, ಗ್ರಾಮ ಪಂಚಾಯತಿ ಕೆಲಸ ನೋಡಬೇಕು, ಜಿಲ್ಲಾ ಪಂಚಾಯತಿ ಕೆಲಸ, ತಾಲ್ಲೂಕು ಪಂಚಾಯತಿ ಕೆಲಸ ನೋಡಬೇಕು, ಜೊತೆಗೆ ವಾಟರ್ ಸಪ್ಲೈ ಕೆಲಸ ನೋಡಬೇಕು. MLA LAD ಗ್ರಾಂಟ್ ನೋಡಬೇಕು, MP LAD ಗ್ರಾಂಟ್ ನೋಡಬೇಕು, ರಾಜ್ಯ ಸಭಾದವರು ನೋಡಬೇಕು. ಇಷ್ಟೆಲ್ಲಾ ಗ್ರಾಂಟ್ ಅನ್ನು ಇಬ್ಬರು ಒಂದು ಉತ್ತಮವಾದ ಗುಣಮಟ್ಟದ ಕಾಮಗಾರಿಯನ್ನು ನಿರೀಕ್ಷಣೆ ಮಾಡುವುದಕ್ಕೆ ಸಾಧ್ಯತೆ ಇದೆಯೇ? ನಾವೆಲ್ಲಾ ಇಲ್ಲಿ ಕುಳಿತು ಭಾಷಣ ಮಾಡುತ್ತೇವೆ, ಎಲ್ಲಾ ಮಾತನಾಡುತ್ತೇವೆ, ಎಲ್ಲಿ ನಾವು ಮೂಲತಃ ಎಡವಿದ್ದೇವೆ, ಗುಣಮಟ್ಟದ ಕಾಮಗಾರಿಯ ಗುಣಮಟ್ಟದ ಕ್ವಾಂಟಿಯನ್ನು ನಾವು ಏನಾದರೂ ಕಂಟ್ರೋಲ್ ಮಾಡಬೇಕೆನ್ನುವ ಅಭಿಲಾಷೆ ಇದ್ದರೆ ಮೂಲಭೂತವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ ಸಮರ್ಥ ಇಂಜಿನಿಯರ್ಸ್ ಅನ್ನು ಇವತ್ತು ನೀವು ಹಾಕುವುದು ಒಳ್ಳೆಯದು. ಇಬ್ಬರು ಇಂಜಿನಿಯರ್, ಒಬ್ಬರು ಕರೆದು water supplyಗೆ ಎಂ.ಬಿ. ಬರೆ ಎಂದರೆ, ಎಲ್ಲಿ ಒಬ್ಬ ಜಿಲ್ಲಾಪಂಚಾಯತಿ ಸದಸ್ಯ ಬಂದು ಬಾ ಇಲ್ಲಿ ನನ್ನ ಬಿಲ್ ಬರೆ ಎನ್ನುತ್ತಾನೆ. ಯಾವ task force? ನಾವು ರೆಷಲ್ಯೂಷನ್ ಮಾಡಿ ಕೊಟ್ಟರೆ, ಅದನ್ನು ಕಾರ್ಯಗತ ಮಾಡಲು ಎಂ.ಬಿ. ಬರೆಯಲು ಇಂಜಿನಿಯರ್ ಬೇಡವೇ? AEE ಬರೆದುಕೊಂಡು, AEE ಸಹಿ

ಹಾಕುವುದಾ? ನಮ್ಮ sub division ತೆಗೆಸಿ ನೋಡಿ, ಯಾರಾದರೂ ಇದ್ದಾರಾ? ಅಲ್ಲಿ ಇದ್ದವರನ್ನೇ ಅಲ್ಲಿಗೆ 2 ಜನ ಇಲ್ಲಿಗೆ 2 ಜನ ಮಾಡಿದಿರಿ, ಅವನಿಗೆ ಕೇಸಿಂಗ್ ಎಂದರೆ ಗೊತ್ತಿಲ್ಲ, ಉದ್ದ ಅಗಲ ಗೊತ್ತಿಲ್ಲ, ಬರೆದುಕೊಡು ಎಂದರೆ ಅಂದಾಜಿನಲ್ಲಿ ಏನಿದೆ ಅದನ್ನೆಲ್ಲಾ ಕಾಪಿ ಮಾಡಿ ಎಂ.ಬಿ. ಬರೆದುಬಿಡುತ್ತಾನೆ, ಯಾರು ಸಿಕ್ಕಿಹಾಕಿಕೊಳ್ಳಬೇಕು? ಇಂಥ ಕರ್ಮದ ಪರಿಸ್ಥಿತಿ ನಿಜವಾಗಿಯೂ ಅಲ್ಲಿ ಜಿಲ್ಲಾಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮಪಂಚಾಯತಿ ಸಂಪೂರ್ಣವಾಗಿ ಏನಾದರೂ ಗ್ರಾಮೀಣ ಪ್ರದೇಶದ ಜನತೆಯ ಮತದಾರರ ಹತ್ತಿರ. ನಾಗರೀಕರ ಹತ್ತಿರ ನಾವೇನಾದರೂ ಉಗಿಸಿಕೊಳ್ಳುತ್ತಿದ್ದರೆ, ಅನ್ನಿಸಿಕೊಳ್ಳುತ್ತಿದ್ದರೆ, ಯಾವನು ಕಂಟ್ರಾಕ್ಟರ್, "ಬೇಲಿ ಎದ್ದು ಹೊಲ ಮೇಯ್ದಂತೆ" ಯಾವನು ಇಂಜಿನಿಯರ್ ಹೋಗದಿದ್ದರೆ, ಒಬ್ಬ ಇಂಜಿನಿಯರ್ ಮಾರ್ಚ್ ಕೊನೆಯಲ್ಲಿ ಬಿಲ್ ಮಾಡುವುದಕ್ಕೆ ಅಳತೆ ತೆಗೆದುಕೊಳ್ಳುವುದಕ್ಕೆ ಪುರಸೊತ್ತಿಲ್ಲದೆ, ನಾನು ಅಲ್ಲಿಂದ ಬರುತ್ತಿದ್ದೇನೆ, ಮೋಟಾರ್ ಸೈಕಲ್‌ನಲ್ಲಿ ಇಂಜಿನಿಯರ್ ಹಿಂದೆ ಕುಳಿತಿದ್ದಾನೆ, ಕಂಟ್ರಾಕ್ಟರ್ ಮೋಟಾರ್ ಸೈಕಲ್ ಓಡಿಸಿಕೊಂಡು ಮುಂದೆ ಹೋಗುತ್ತಿದ್ದಾನೆ. ಏನಯ್ಯ ಹೀಗೆ ಹೋಗುತ್ತಿದ್ದೀರೆಂದರೆ, ಅಳತೆ ತೆಗೆದುಕೊಳ್ಳುತ್ತಿದ್ದೇವೆ ಎನ್ನುತ್ತಾರೆ, ಮೋಟಾರ್ ಸೈಕಲ್‌ನಲ್ಲಿ ಅಳತೆ, ಏಕೆಂದರೆ, ಇವನು ಹಿಂಸೆ ಮಾಡುತ್ತಿದ್ದಾನೆ ನಾವು ಕೊಡುವುದಕ್ಕಾಗುತ್ತಿಲ್ಲ, ದುಡ್ಡು ಲ್ಯಾಪ್ಸ್ ಆಗುತ್ತದಂತೆ ನಾನು ಎಂ.ಬಿ. ಬರೆಯಬೇಕು ಎನ್ನುತ್ತಾನೆ. ಮೋಟಾರ್ ಸೈಕಲ್ ರೈಡಿಂಗ್ ಮಾಡಿಯೇ ನೀವು ಎಂ.ಬಿ. ಬರೆಯುವುದು ಎಂದರೆ ಅದಕ್ಕೆ ಇಂಜಿನಿಯರ್‌ನೂ ಬಯ್ಯುವಂತಿಲ್ಲ, ಒಬ್ಬ ಇಂಜಿನಿಯರ್ ಏನು ಮಾಡುತ್ತಾನೆ, ಜಾವಗಲ್ ಹೋಬಳಿ ಸೇರಿ 2 ಎಂಎಲ್‌ಎ ಕ್ಷೇತ್ರಗಳು ಬರುತ್ತದೆ, ಅವನು ಏನು ಮಾಡುತ್ತಾನೆ? ಈ ಪರಿಸ್ಥಿತಿ ಇಡೀ ರಾಜ್ಯದಲ್ಲೇ ಇದೆ ಎಂದು ಎಲ್ಲಾ ಕಡೆಯ ಎಂಎಲ್‌ಎಗಳು ಹೇಳುತ್ತಿರುವುದನ್ನು ನಾವು ಕೇಳಿದ್ದೇವೆ. ಅದಕ್ಕೆ ಪಾಟೀಲ್ ಸಾಹೇಬರು ದಯಮಾಡಿ, ಇದನ್ನು ನಾನು ಹಲವಾರು ಸಾರಿ ಹೇಳಿದ್ದೇನೆ, ಕೇಳಿದ್ದೇವೆ, ನಮ್ಮಲ್ಲಿ ಹೋದ ವರ್ಷದ ಎಂಎಲ್‌ಎ ಬಿಲ್ ಬರೆದಿಲ್ಲ, ಅವರ ಕೈಯಲ್ಲಿ ಆಗುವುದಿಲ್ಲ. ಕಾಂಕ್ರೀಟ್ ಐಟಂ ಎಂದರೆ ಸ್ವತ: ಇಂಜಿನಿಯರ್

ಇಲ್ಲದೆ ಕಂಟ್ರಾಕ್ಟರ್ ಬಿಟ್ಟರೆ ಕಾಂಕ್ರೀಟ್ ಇರುತ್ತದೆಯೇ? ಯಾವನು ಅವನಿಗೆ ಬೇಕಾದಷ್ಟು ಹಾಕಿಕೊಳ್ಳುತ್ತಾನೆ, 4 ದಿವಸಕ್ಕೆ ಚೆನ್ನಾಗಿ ಕಾಣುತ್ತದೆ, 5ನೇ ದಿವಸಕ್ಕೆ ಕಿತ್ತು ಹೋಗುತ್ತದೆ. ಜನ ಈ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಎಂದರೆ, ಹೊಲಸಪ್ಪ, ಎಲ್ಲಾ ಕಳಪೆ ಕಾಮಗಾರಿ ಮಾಡುತ್ತಾರೆ, ಕಳಪೆ ವಸ್ತು ಬಳಸುತ್ತಾರೆ, ಕಳಪೆ ರೀತಿಯ ಕೆಲಸ ಮಾಡಿ ಬರೀ ದುಡ್ಡು ಹೊಡೆಯುವುದೇ ಇವರ ಕಾರ್ಯಕ್ರಮ ಎನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ನೀವೇನೂ ಒಳ್ಳೊಳ್ಳೆಯ concept ಇಟ್ಟುಕೊಂಡು ಎಲ್ಲವನ್ನೂ ಕೊಟ್ಟಿರಿ, ಎಲ್ಲಾ ಯೋಜನೆಗಳನ್ನು ಜಾರಿಗೆ ತಂದಿರಿ, ಆದರೆ ಅವನ್ನು ಜಾರಿ ಮಾಡುವವರು ಬೇಕಲ್ಲ? ಒಂದು ತಾಲ್ಲೂಕನ್ನು ಒಬ್ಬ ಇಂಜಿನಿಯರ್, ಒಬ್ಬ ವಾಟರ್ ಸಪ್ಲೈಗೆ ಒಬ್ಬ ಜಿಲ್ಲಾ ಪಂಚಾಯತಿಗೆ ಮಾಡುವುದಕ್ಕೆ ಸಾಧ್ಯವೇ? ಇದಕ್ಕೆ ತನ್ನಿ. ನಾವು ಶಾಸಕರು BJP ಯ ಕಾಗೇರಿಯವರು ಇಂಜಿನಿಯರ್ಸ್ ನೇಮಿಸಿ ಎಂದು ಹೇಳುತ್ತಿದ್ದರು. ಅಲ್ಲಿಯೂ ನೇಮಿಸಲಿಲ್ಲ. ಉದ್ಯೋಗ ಖಾತರಿ ಯೋಜನೆಗೆ ಇಂಜಿನಿಯರ್‌ಗಳನ್ನು ಟೆಂಪರರಿಯಾಗಿ ತೆಗೆದುಕೊಂಡಿದ್ದೀರಿ. ಅವರು ಅವರನ್ನು ಹೇಗೆ ಎಳೆದುಕೊಂಡು ಹೋಗುತ್ತಾರೆ ಗೊತ್ತಾ? ಅವರು ಹೆದರಿಕೊಂಡು ಅತ್ತಲಾಗೆ ಕದ್ದೇ ಹೋದರು. ಎತ್ತ ಹೋದರೋ ಗೊತ್ತಾಗಲಿಲ್ಲ. ಬೇಡ ಇಲ್ಲಿ ಏನೇನೋ ಬರೆಸಿಕೊಳ್ಳುತ್ತಾರೆ, ನಾವು ಇರುವುದೇ ಇಲ್ಲವೆಂದು ಹೇಳಿದರು. ಈ ರೀತಿ ಹಗ್ಗ ಮೂಗು ದಾರ ಇಲ್ಲದೇ ಇದ್ದರೆ ಯಾವ ರೀತಿ ಈ ಪರಿಸ್ಥಿತಿಯನ್ನು ನಾವು ನಿಭಾಯಿಸುವುದಕ್ಕೆ ಸಾಧ್ಯ? ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗೆ ನೀವು ಯಾವುದೇ ಬಂಡವಾಳ ಹೂಡಿದರೂ ಅದಕ್ಕೆ ನಿಮಗೆ ಒಳ್ಳೆಯ ಹೆಸರು ಬರಬೇಕಾದರೆ ನೀವು ದಕ್ಷ ಇಂಜಿನಿಯರಿಂಗ್ ಸೆಲ್ ಮಾಡುವುದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದಾದ ಮೇಲೆ ರಸ್ತೆಗಳು ಗ್ರಾಮೀಣಾಭಿವೃದ್ಧಿ ರಸ್ತೆಗಳು ಒಂದೊಂದು ಕ್ಷೇತ್ರದಲ್ಲಿ 500, 600, 700 ರಿಂದ 800 ಕಿಲೋ ಮೀಟರ್‌ವರೆಗೆಯೂ ರಸ್ತೆಗಳು ಇವೆ. ನೀವು ಕೊಡುವ ಹಣ ಎಷ್ಟು? ಬರೀ ಮಣ್ಣು ಚೆಲ್ಲುವುದಕ್ಕೆ ಸಾಧ್ಯವಾ? ವರ್ಷಕ್ಕೆ ಒಂದು ಸಾರಿ ದುರಸ್ತಿ ಮಾಡಿ ರಸ್ತೆಗಳು ಮಾಡುವುದಕ್ಕೆ ಸಾಧ್ಯವಾ? ನೀವು ತಂದಿರಿ. ನಾನು

ಉದ್ಯೋಗ ಖಾತರಿಗೆ ಬರುತ್ತೇನೆ. ನೀವು ಉದ್ಯೋಗ ಖಾತರಿ ಯೋಜನೆಯನ್ನು ಸಫಲಗೊಳಿಸಿಕೊಳ್ಳುವುದಕ್ಕೆ ನೀವು ಏನು ಪುಸ್ತಕಗಳನ್ನು ಬಿಡುಗಡೆ ಮಾಡಿ ನೀವು ಮುಖ್ಯಮಂತ್ರಿಗಳೂ ಸೇರಿ ಅಷ್ಟು ಯೋಜನೆಗಳನ್ನು ಏನು ತಂದಿರಿ, ನಮ್ಮ ಹೊಲ, ನಮ್ಮ ಕಣ, ಆಟದ ಮೈದಾನ ಇವೆಲ್ಲ ತಂದಿರಿ, ಅದೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವುಗಳನ್ನು ಅನುಷ್ಠಾನಗೊಳಿಸಬೇಕಾದರೆ ಇರತಕ್ಕಂತಹ ನಿಬಂಧನೆಗಳೇನಿವೆ, ಇವತ್ತು ಏನಾಗಿದೆ ಎಂದರೆ, ಎಲ್ಲೋ ಒಂದು ಕಡೆ ಎಲ್ಲರಿಗೂ ಸಂಶಯ. ಅಕ್ಕಿ ಮುಗಿಯಬಾರದು, ಮಕ್ಕಳು ಬಡವಾಗಬಾರದು. ಅಕ್ಕಿ ಮುಗಿಯದೆ ಇದ್ದರೆ ಮಕ್ಕಳು ಬಡವರಾಗದೆ ಏನು ಮಾಡುತ್ತಾರೆ? ಅಕ್ಕಿ ಮುಗಿಯಬೇಕು ಮಕ್ಕಳು ಚೆನ್ನಾಗಿರಬೇಕು. ನಿಮ್ಮ ದುಡ್ಡು ಏನೋ ಕೊಡುತ್ತೀರಿ. ಕಾನೂನಿನ ಚೌಕಟ್ಟಿನೊಳಗೆ ಆ ಹಣವನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಆಟದ ಮೈದಾನ ಮಾಡಬೇಕು. ಆಟದ ಮೈದಾನ ಮಾಡಬೇಕೆಂದರೆ ಅದಕ್ಕೆ 10,000 ರೂ. NMR ಬರುತ್ತದೆ. 10,000 ರೂ. NMR ಅನ್ನು ಹಾಕಬೇಕೆಂದರೆ, ಅಲ್ಲಿ ಯಾರೂ ಇವತ್ತು ಕೂಲಿ ಮಾಡುವವರು ಇಲ್ಲ. ನಾವು ವಿಧಾನಸಭೆಯಲ್ಲಷ್ಟೇ ಕೂಲಿಕಾರರು ಎಂದು ಹೇಳುತ್ತೇವೆ. ಈ 194 ರೂ. ದುಡ್ಡಿಗೆ ಯಾರು ಬರುತ್ತಾರೆ? ಸುಮ್ಮನೆ ಬೋಗಸ್ ಇದು. ಇಲ್ಲಿ ಕುಳಿತುಕೊಂಡು ಸುಮ್ಮನೆ ಸುಳ್ಳು ಹೇಳಿಕೊಂಡು ಹೋಗಬೇಕು ಅಷ್ಟೆ. 350 ರಿಂದ 500 ರೂಪಾಯಿ ಕೊಟ್ಟರೂ ಗ್ರಾಮೀಣ ಪ್ರದೇಶದಲ್ಲಿ ಬೆಳಿಗ್ಗೆ ಎದ್ದು ಮೋಟಾರ್ ಸೈಕಲ್ ಹಾಕಿಕೊಂಡು ನಾವೇ ಹೋಗಿ ಅವನ ಮನೆ ಹತ್ತಿರ ಕುಳಿತುಕೊಂಡು ಮೋಟಾರ್ ಸೈಕಲ್‌ನಲ್ಲಿ ಕೂರಿಸಿಕೊಂಡು ಟೀ ಕುಡಿಸಿಕೊಂಡು ಕೂಲಿಕಾರರನ್ನು ಕರೆದುಕೊಂಡು ಬರಬೇಕು. ಕರೆದುಕೊಂಡು ಬಂದು ತೆಂಗಿನಕಾಯಿ ಕೆಡವು ಎಂದು ಹೇಳಬೇಕು. ತೆಂಗಿನ ಕಾಯಿ ಕೆಡುವುವವರು ಇಲ್ಲ, ಹೋಗಿಬಿಟ್ಟಿದ್ದಾರೆ. ನಾನು as a MLA ಅವರ ಮನೆ ಮುಂದೆ ಹೋಗಿ ನಿಂತುಕೊಂಡು ಬಾರಪ್ಪ ಕೆಲಸಕ್ಕೆ ಎಂದು ಕರೆದುಕೊಂಡು ಬರುತ್ತೇನೆ. ಇಲ್ಲದಿದ್ದರೆ ಅವರು ಬರುವುದೇ ಇಲ್ಲ. ಆ ಪರಿಸ್ಥಿತಿ ಇರುವುದರಿಂದ ನಿಮ್ಮ ಉದ್ಯೋಗ ಖಾತರಿಯಲ್ಲಿ ಯಾರು ಬರುತ್ತಾರೆ, ಬರುವುದಿಲ್ಲ. ಅಲ್ಲಿ ಯಾರದೋ ಒಂದು 20 ಜನರ ಹೆಸರಿಗೆ job card

ಮಾಡಿ ಕೊಟ್ಟಿರುತ್ತೀರಿ. ಆ job card ಗೆ ನೀವು ದುಡ್ಡು ತುಂಬುತ್ತೀರಿ. ಒಳ್ಳೆಯ ಪದ್ಧತಿ ಮಾಡಿದ್ದೀರಿ. Contract ಮಾಡಿದವನಿಗೆ ಇವನು ತೆಗೆದು ಕೊಡಬೇಕಲ್ಲ? ಅವನಂತೂ ಕೂಲಿಗೆ ಬರುವುದಿಲ್ಲ. JCB ಯಲ್ಲೋ ಮತ್ತೊಂದರಲ್ಲೋ, ಯಾರೋ ಲೇಬರ್ contractor ಬಿಹಾರದವರೋ ಇಲ್ಲಾ ಉತ್ತರ ಕರ್ನಾಟಕದವರೋ ಯಾರೋ ಒಂದಷ್ಟು ಜನ ಬರುತ್ತಾರೆ, ಅವರ ಕೈಯಲ್ಲಿ ಮಾಡಿಸಿ ಬಿಡುತ್ತಾರೆ. ಕೆಲಸ ಮಾಡಿಸಿ ದುಡ್ಡು ತೆಗೆದುಕೊಳ್ಳುವ ಹೊತ್ತಿಗೆ ಇವನ ಹೆಸರಿಗೇ ಹೋಗಬೇಕು, ಊರಿನವರೇ ಆಗಬೇಕು, job card ಇರುವವನೇ ಆಗಬೇಕು. ಆ job card ಇರುವವನಿಗೋ ಊರಿನವನಿಗೋ ಕೊಟ್ಟರೆ ಅವನು ಚೆಕ್ ಕೊಡದೆ ಎತ್ತಿಕೊಂಡು ಹೋಗುತ್ತಾನೆ. ಚೆಕ್ ಕೊಡದೆ ಹೋದರೆ ಅವನು ಎಲ್ಲಿಂದ ಆ ಕೆಲಸ ಮಾಡುವುದಕ್ಕೆ ಸಾಧ್ಯ? ಇದು ನಮ್ಮ ಎಲ್ಲ ಶಾಸಕರಿಗೆ ಗೊತ್ತಿಲ್ಲವಾ ಹಾಗಾದರೆ? ಇದನ್ನು ನಾವು ಇಲ್ಲಿ ಕುಳಿತುಕೊಂಡು ಮಾತನಾಡಿಕೊಂಡು ಹೋಗುತ್ತಲೇ ಇದ್ದರೆ, ಮಾತನಾಡಿದರೆ ಬೇಜಾರಾಗುತ್ತದೆ, ಯಾರೋ ಏನೋ ಅಂದುಕೊಳ್ಳುತ್ತಾರೆ ಎಂದು ಹೋದರೆ, ಈ ಅಸತ್ಯವನ್ನು ಎಷ್ಟು ದಿವಸ ಮುಚ್ಚಿಡುತ್ತೀರಿ?

ಶ್ರೀ ಎನ್. ಚಲುವರಾಯಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, actually ನೀವು ಮಾನ್ಯ ಶಿವಲಿಂಗಯ್ಯನವರು ಹೇಳಿದ ಹಾಗೆ ಮಾಡುವುದಕ್ಕಾಗುವುದಿಲ್ಲ. Government of India ದ Guidelines ಇದೆ. ನೀವು ಅದನ್ನು implement ಮಾಡಬೇಕು. Purpose ಅದೇ ಇದೆ. Practical ಆಗಿ ಯೋಚನೆ ಮಾಡಿದಾಗ ಒಂದು ಕಡೆ ಅವರಿಗೆ ಅಸೆಟ್ create ಆಗುವುದಿಲ್ಲ, ಒಂದು ಕಡೆ ನಮ್ಮ ರಾಜ್ಯದಲ್ಲಿ ಅದನ್ನು ವ್ಯವಸ್ಥಿತವಾಗಿ ಖರ್ಚು ಮಾಡುವ ಪರಿಸ್ಥಿತಿಗೆ ಹೋಗುವುದಿಲ್ಲ. ಅಲ್ಲೋ ಇಲ್ಲೋ ಒಂದಷ್ಟು ಲೋಪದೋಷಗಳಾಗುತ್ತವೆ, ಅಧಿಕಾರಿಗಳು ಒಂದಷ್ಟು ತಿದ್ದಿಕೊಳ್ಳುತ್ತಾರೆ, ಒಂದಷ್ಟು ಕೆಲಸ ಮಾಡುವುದಕ್ಕೆ ಆಗದೆ ಕೈ ಬಿಟ್ಟು ಹೋಗುತ್ತಾರೆ. ಕೆಲವು ರಾಜ್ಯಗಳಲ್ಲಿ indirect ಆಗಿ ರಾಜ್ಯದ ಮಂತ್ರಿಗಳು ರಾಜ್ಯದ ಅಧಿಕಾರಿಗಳು push up ಮಾಡಿ ಎಲ್ಲೂ misuse ಆಗದ ಹಾಗೆ ಹಣ ಖರ್ಚಾಗತಕ್ಕಂಥದ್ದಕ್ಕೆ ಅಸೆಟ್ ಕ್ರಿಯೇಟ್ ಆಗತಕ್ಕಂಥದ್ದಕ್ಕೆ

ನೀವು ಓರಲಿ ಸಪೋರ್ಟ್ ಮಾಡಿದರೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಳ್ಳಿಗಳಲ್ಲಿ ಏನೇನು ಗೈಡ್‌ಲೈನ್ಸ್ ಇದೆ, ಒಂದಷ್ಟು ಕೆಲಸಗಳು ಕ್ರಿಯೇಟ್ ಆಗುತ್ತವೆ, ಪಂಚಾಯತಿಗೆ ಒಂದು ಚೂರು development ಆಗುತ್ತದೆ. ಆದರೆ ultimately ಹಣಕ್ಕೆ accountability ಇರುತ್ತದೆ. ಅವರು ಹೇಳಿದ ಹಾಗೆ ಪ್ರಾಮಾಣಿಕವಾಗಿ ಕೆಲಸ ಮಾಡಿ ದುಡ್ಡು ತೆಗೆದುಕೊಳ್ಳುವ ಪ್ರಶ್ನೆ ಇಲ್ಲ. ಅವರೇನಿದ್ದರೂ contractor ಅದು JCBಯಲ್ಲಾದರೂ ಮಾಡಬಹುದು ಅಥವಾ ಲೇಬರ್ ಆದರೂ ಕರೆದುಕೊಂಡು ಬಂದು ಮಾಡಬಹುದು, ಅವನು ಮಾಡಬೇಕು. ಹಳ್ಳಿಗಳಲ್ಲಿ ಒಂದು ತೆಂಗಿನ ಕಾಯಿ ಕೆಡವಿದರೆ ಒಂದು ಮರಕ್ಕೆ 10 ರೂಪಾಯಿ ಎಂದು 300, 400 ಅಥವಾ 500 ರೂಪಾಯಿ ಸಿಗುತ್ತದೆ. ಕಬ್ಬು ಗದ್ದೆಗೆ ಹೋದರೆ 400 ರೂಪಾಯಿ ಸಿಗುತ್ತದೆ. ಇಲ್ಲಿ 200 ರೂಪಾಯಿಗೆ ಯಾರೂ ಬರುವುದಿಲ್ಲ. ಪ್ರಾಮಾಣಿಕವಾಗಿ ಮಾಡುವುದಕ್ಕಾಗುವುದಿಲ್ಲ. ಆದರೆ ನೀವು answer ಮಾಡುವುದಕ್ಕೂ ಆಗುವುದಿಲ್ಲ. ನನಗೂ ಗೊತ್ತು. ಇದಕ್ಕೆ ಏನಾದರೂ ಒಂದು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡು ರೆಮಿಡಿ ಮಾಡಿ, ನಿಮ್ಮ ಅಧಿಕಾರಿಗಳ ಮೂಲಕ ನೀವು ಡೈರೆಕ್ಷನ್ ಕೊಟ್ಟು ಮಾಡಿದರೆ ರಾಜ್ಯಕ್ಕೆ ಒಂದಷ್ಟು ಉಪಯೋಗವಾಗುತ್ತದೆ. ಅಸೆಟ್ ಕ್ರಿಯೇಟ್ ಆಗುತ್ತದೆ, ಪಂಚಾಯತ್ ಲೆವಲ್‌ನಲ್ಲಿ development ಆಗುತ್ತದೆ. ಇದನ್ನು ಏನಾದರೂ ಮಾಡುವುದಕ್ಕೆ ಸಾಧ್ಯವಾದರೆ ಯೋಚನೆ ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಇದು ಎಲ್ಲರಿಗೂ ಗೊತ್ತಿದೆ. ನಾವು ಅನೇಕ ಸಾರಿ ಈ ಸದನದಲ್ಲಿ ಮಾತನಾಡಿದ್ದೇವೆ. ಇದನ್ನೇ ಬಿಟ್ಟುಕೊಂಡು ಹೋದರೆ ಹೇಗೆ ಅಸೆಟ್ ಕ್ರಿಯೇಟ್ ಆಗುತ್ತದೆ, ಆರ್ಥಿಕ ಸಬಲತೆ ಹೇಗೆ ಆಗುತ್ತದೆ, ಗ್ರಾಮ ಸ್ವರಾಜ್ಯ ಹೇಗೆ ಆಗುತ್ತದೆ, ಗ್ರಾಮ ಪಂಚಾಯತಿಗೆ ಹೆಚ್ಚಿಗೆ ಹಣ ಬರುವುದು ಉದ್ಯೋಗ ಖಾತರಿಯಲ್ಲಿ. ಆ ಉದ್ಯೋಗ ಖಾತರಿ ಯೋಜನೆಯಲ್ಲಿ ಬರತಕ್ಕಂತಹ ಹಣವನ್ನು ನೀವು ಸಮರ್ಥವಾಗಿ ಬಳಕೆ ಮಾಡಬೇಕಾದರೆ ಎಲ್ಲೋ ಒಂದು ಕಡೆ ಕಾನೂನಿನ ಚೌಕಟ್ಟು ಅಡ್ಡ ಬಂದು ಇವತ್ತು ಆ ಹಣವನ್ನು ಉಪಯೋಗಿಸುವುದಕ್ಕೆ ಆಗದೆ, ಆಗ ಅಲ್ಲಿ ಭ್ರಷ್ಟಾಚಾರ ಪ್ರಾರಂಭವಾಗುತ್ತದೆ. ಅಲ್ಲಿ ಭ್ರಷ್ಟಾಚಾರ ಆಗುವುದು ಕಾನೂನನ್ನು ಬಿಟ್ಟು ಬೇರೆ

ಕಡೆಗೆ. JCB ಏನು ಉಪಯೋಗಿಸಬಾರದು ಎಂದು ಇದೆ. ಇವರು JCBಯಲ್ಲಿ ಕೆಲಸ ಪ್ರಾರಂಭ ಮಾಡಿಕೊಳ್ಳುತ್ತಾನೆ. ಅಲ್ಲಿ ಅಪೋಸಿಷನ್‌ನವರು ಇದ್ದೇ ಇರುತ್ತಾರೆ. ಅವನು ಹೋಗಿ ಅದರ ಫೋಟೋ ಹೊಡೆದು ombudsmenಗೆ ಕೊಡುತ್ತಾನೆ. ಅವನು ಅಲ್ಲಿ ಬಂದು ಅಲ್ಲಿ ಏನೋ ಒಂದು ವ್ಯವಹಾರ ನಡೆಯುತ್ತದೆ. ಇದೆಲ್ಲಾ ಸೃಷ್ಟಿ ಮಾಡುವುದರಿಂದ ಸಮಸ್ಯೆ ಬಗೆಹರಿಯುತ್ತದೆ ಎಂದು ತಿಳಿದುಕೊಂಡಿದ್ದೀರಾ? No. No. ಇದರಿಂದ ಇನ್ನು ಒಂದು ಹೆಜ್ಜೆ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ ಹೊರತು ಕಡಿಮೆಯಾಗುವುದಿಲ್ಲ. ನಿಮ್ಮ ಅಭಿಪ್ರಾಯ ಒಳ್ಳೆಯದು. ನಿಮ್ಮ ಚಿಂತನೆ ಒಳ್ಳೆಯದು. ಆದರೆ ಇದರಿಂದ ಒಳ್ಳೆಯದಾಗಿಲ್ಲ. ನಾವು ದಿನನಿತ್ಯ ನೋಡುತ್ತಿದ್ದೇವೆ. ದಿನನಿತ್ಯ solve ಮಾಡುತ್ತಿದ್ದೇವೆ. **"ನಮ್ಮ ಹೊಲ, ನಮ್ಮ ರಸ್ತೆ"** ಎಂತಹ concept ಇವತ್ತು ನಿಜವಾಗಿಯೂ ಒಂದೂವರೆ ಎರಡು ಕಿ.ಮೀ. ನಲ್ಲಿ ಬೆಳೆದಂತಹ ಬೆಳೆ ಕೋಸು ಬೆಳೆದರೆ ಅದನ್ನು ಎತ್ತಿಕೊಂಡು ಬರುವುದಕ್ಕಾಗದೆ ಅಲ್ಲಿಂದ ಹೇರಿಕೊಂಡು ಬರುವುದಕ್ಕಾಗದೆ, ಬೆಳೆಯುವುದೇ ಬೇಡ ಅದು ಯಾರು tractor ನವನಿಗೆ ಕೂಲಿಯವನಿಗೆ ಕೂಲಿ ಕೊಡಬೇಕು. ಅಲ್ಲಿಂದ ಇಲ್ಲಿಗೆ ಹೊರುವುದಕ್ಕೆ ಕೂಲಿಗೆ ಹೋಗುತ್ತದೆ. ಒಂದು ಬೆಳೆ ಬೆಳೆದರೆ ಹೊಲದಿಂದ ಹೊರಕ್ಕೆ ತರುವುದಕ್ಕಾಗುವುದಿಲ್ಲ. **"ನಮ್ಮ ಹೊಲ ನಮ್ಮ ಮನೆ"** ಒಳ್ಳೆಯ concept. ಏನಾಗಿದೆ, ಯಾವ ಕಡೆಗೆ ಹೋಗಿದೆ, ಅದನ್ನು ಮಾಡುವುದಕ್ಕೆ ಪಕ್ಕದವನು ದಾರಿ ಬಿಡುವುದಿಲ್ಲ. ಇವನು JCB ತೆಗೆದುಕೊಂಡು ಹೋದರೆ ಅವನಿಗೆ ಅರ್ಜಿ ಬರೆಯುತ್ತಾನೆ. ಯಾರೂ ಬಂದು ಒಬ್ಬನೇ ಒಬ್ಬ ಕಾರ್ಮಿಕ water supply line ತೆಗೆಯುವವರು ಬಿಟ್ಟರೆ ಅದೂ ನಮ್ಮ ಉತ್ತರ ಭಾರತದವರು ನಮ್ಮ ಕರ್ನಾಟಕದವರಲ್ಲ, ಬಿಹಾರ ಆ ಕಡೆಯಿಂದ ಬರುತ್ತಾರೆ. ಅದು ಬಿಟ್ಟರೆ ನಮ್ಮವರು ಯಾರಾದರೂ ಒಬ್ಬರು ಹಾರೆ ಗುದ್ದಲಿ ಹಾಕಿ ತೆಗೆಯುತ್ತೇನೆ ಎಂದು ಹೇಳುವವರು ಇಡೀ ನಮ್ಮ ಕ್ಷೇತ್ರದೊಳಗೆ ಯಾರಿದ್ದಾರೆ? ಸುಮ್ಮನೆ ನಾವು ಅವರು ಕೂಲಿಕಾರರು ಅಲ್ಲಿದ್ದಾರೆ, ಇಲ್ಲಿದ್ದಾರೆ ಎಂದು ಹೇಳುತ್ತೇವೆ. ಅವರಿಗೆ ದುಡ್ಡು ಕೊಡುವುದಕ್ಕೆ ಇಲ್ಲಿ ಯಾರದೋ ಹೆಸರಿಗೆ job card ಹಾಕಿ ಅವನಿಗೆ ಕೊಡುವುದಕ್ಕೆ ಹೋಗುತ್ತಾರೆ. ಇಲ್ಲಿ

ಯಾರು contract ಮಾಡಿಸಿರುತ್ತಾರೆ, ಇಲ್ಲಾ ಅವನು PDO ಮಾಡಿದ್ದರೆ ಅವನ ಹೆಸರಿಗೆ ದುಡ್ಡು ಕೊಡುವುದಿಲ್ಲ. ನೀನೇನು ಹರಿಶ್ಚಂದ್ರನೋ ಕೊಡುವುದಿಲ್ಲ ಹೋಗು ಅದೇನು ಮಾಡಿಕೊಳ್ಳುತ್ತೀಯ ಮಾಡಿಕೋ ಎಂದು ಹೇಳುತ್ತಾರೆ. ಅವನು ಅವನ ಅಕೌಂಟ್‌ಗೆ ಚೆಕ್ ಹಾಕಿ ಕಾಯುತ್ತಾ ಕೂತಿರಬೇಕು. ಉತ್ತರ ಭಾರತ.....

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಮಾನ್ಯ ಶಿವಲಿಂಗೇಗೌಡರೆ, ನಿಮ್ಮ ಬೆಂಗಳೂರಿನಲ್ಲಿ ಬಿಲ್ಡಿಂಗ್ ಕೆಲಸ ಮಾಡುತ್ತಾರಲ್ಲ, ಬೆಂಗಳೂರಿನಲ್ಲಿ building ಕೆಲಸ ಮಾಡುವವರು BMTC ಬಸ್ ಓಡಿಸುವವರು ಅವರೆಲ್ಲರೂ ಕೂಡ ಉತ್ತರ ಕರ್ನಾಟಕದವರೇ.

ಶ್ರೀ ಕೆ.ಎಸ್. ಮಂಜುನಾಥಗೌಡ:- ನಿಮ್ಮ ಬೆಂಗಳೂರು ಎಂದು ಹೇಳಬೇಡಿ, ನಮ್ಮ ಬೆಂಗಳೂರು ಎಂದು ಹೇಳಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಇವತ್ತಿನವರೆಗೆ ನಮ್ಮ ಬೆಂಗಳೂರು ಆಗಿಲ್ಲ. ಇವತ್ತಿನವರೆಗೂ ಉತ್ತರ ಕರ್ನಾಟಕಕ್ಕೆ ಅದು ನಮ್ಮ ಬೆಂಗಳೂರು ಆಗಿಲ್ಲ. ಅದು ನಿಮ್ಮ ಬೆಂಗಳೂರಾಗಿಯೇ ಉಳಿದಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ರೀ ಸ್ವಾಮಿ ನಡಹಳ್ಳಿಯವರೆ, ಈಗಲೇ ಏಕೆ ಆ ಮಾತೆಲ್ಲಾ, ಈಗ ಅದೆಲ್ಲಾ ಬೇಡ ಸುಮ್ಮನಿರಿ.

ಶ್ರೀ ಸಾ.ರಾ. ಮಹೇಶ್:- ನಿಮ್ಮ ಮನೆ ಇರುವುದೇ ಬೆಂಗಳೂರಿನಲ್ಲಿ, ಅಲ್ಲಿರುವುದು ನಿಮ್ಮ ಬೆಂಗಳೂರಲ್ಲವೇನಪ್ಪಾ, ಹೀಗಿದ್ದರೂ ನಿಮ್ಮ ಬೆಂಗಳೂರಲ್ಲ ಎಂದು ಹೇಳುತ್ತೀರಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಬೆಂಗಳೂರು ಯಾವತ್ತೂ ಕೂಡ ಉತ್ತರ ಕರ್ನಾಟಕದ್ದು ಆಗುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ:- ಇವರ ಮನೆ ಇರುವುದು ಬೆಂಗಳೂರಿನಲ್ಲಿ, ವಾಸ ಮಾಡುವುದು ಬೆಂಗಳೂರಿನಲ್ಲಿ, , ,

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ರೀ ನಡಹಳ್ಳಿಯವರೆ, ನಿಮ್ಮ ಮನೆ ಬೆಂಗಳೂರಿನಲ್ಲಿ ಇಲ್ಲವೇನ್ರಿ? ಏಕೆ ಬೆಂಗಳೂರಿನಲ್ಲಿ ಮನೆ ಇಟ್ಟುಕೊಳ್ಳುತ್ತೀರಿ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಕಳೆದ 30 ವರ್ಷದಿಂದ ಉತ್ತರ ಕರ್ನಾಟಕ ಭಾಗಕ್ಕೆ ಬಂದಿರತಕ್ಕಂಥ ನೀರಾವರಿ ಗ್ಯಾಂಟ್ ಎಷ್ಟು ಮತ್ತು ನಮ್ಮ ದಕ್ಷಿಣ ಕರ್ನಾಟಕ ಭಾಗಕ್ಕೆ ಬಂದಿರತಕ್ಕಂಥ ನೀರಾವರಿ ಗ್ರ್ಯಾಂಟ್ ಎಷ್ಟು ಎಂಬುದನ್ನು ನೋಡಿಕೊಂಡು ಮಾತನಾಡಬೇಕು.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಮಾನ್ಯ ಉಪಾಧ್ಯಕ್ಷರೆ, ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಗ್ಗೆಯೇ ಚರ್ಚೆಯಾಗಬೇಕು. ಆದರೆ ಇಲ್ಲಿ ನಾನು ಕಳೆದ ಎರಡು ದಿವಸದಿಂದ ನೋಡುತ್ತಿದ್ದೇನೆ ಮೂರು ದಿವಸದಿಂದ ನೋಡುತ್ತಿದ್ದೇನೆ, ಈ ಭಾಗದಲ್ಲಿ ಏನು ತೊಂದರೆಯಿದೆ, ಅದಕ್ಕೆ ಹೆಚ್ಚು ಒತ್ತು ಕೊಡತಕ್ಕಂಥ ಕೆಲಸವಾಗಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ರೀ ಈಗ ನಾವು ನಿಮ್ಮ ಬಗ್ಗೆಯೇ ಮಾತನಾಡುತ್ತಿದ್ದೇವೆ, ಇದೇನು ನಿಮ್ಮದಲ್ಲವೇನ್ರಿ,

ಶ್ರೀ ಸಿ.ಎನ್. ಬಾಲಕೃಷ್ಣ:- ಮಾನ್ಯ ಉಪಾಧ್ಯಕ್ಷರೆ, ನಿಮ್ಮ ಬೆಂಗಳೂರು ಎಂದು ಹೇಳಿರುವುದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು:- ಈಗ ಎಲ್ಲರೂ ಕುಳಿತುಕೊಳ್ಳಿ, ಶಿವಲಿಂಗೇಗೌಡರೆ ನೀವು ಮಾತನಾಡಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಯಾರೂ picnicಗೆಂದು ಬಂದಿಲ್ಲ. ಇಲ್ಲಿ ನಿಜವಾಗಿಯೂ ಈ ಸರ್ಕಾರಕ್ಕೆ ಬೆಳಗಾವಿಯಲ್ಲಿ ನೀವು ಅಧಿವೇಶನ ನಡೆಸುತ್ತಿದ್ದೀರಿ, ಈ ಭಾಗದ ಜನರಿಗೆ ಏನಾದರೂ ಸಂದೇಶ ಕೊಡಬೇಕೆಂದರೆ ಸದನದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಗಂಭೀರವಾದಂಥ ಚರ್ಚೆಯಾಗಬೇಕು.

ಉಪಾಧ್ಯಕ್ಷರು:- ನೀವು ಈಗ ಕುಳಿತುಕೊಳ್ಳುತ್ತೀರೋ ಇಲ್ಲವೋ, ನೀವು ಈಗ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಈಗ ನಾನು ಹೇಳುತ್ತಿರುವುದೆಲ್ಲವೂ ಉತ್ತರ ಕರ್ನಾಟಕದ ಬಗ್ಗೆಯೇ ಆಗಿದೆ. ನೀವು ತಪ್ಪು ತಿಳಿದುಕೊಂಡರೆ ನಾನೇನು ಮಾಡೋಣ ಹೇಳಿ. ಉತ್ತರ ಕರ್ನಾಟಕ, ಉತ್ತರ ಕರ್ನಾಟಕ ಎಂದು ನಾನು ಬಡಿದುಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು:- ಈಗ ಆ ವಿಚಾರ ಬೇಡ, ಒಂದು ದಿವಸ ಅದಕ್ಕಾಗಿಯೇ ಚರ್ಚೆಯಿದೆ, ಆ ಒಂದು ದಿವಸ ಇದರ ಬಗ್ಗೆ ಆಗ ಮಾತನಾಡಿ. ಶಿವಲಿಂಗೇಗೌಡರೆ, ನೀವು ಈಗ ಬೇಡಿಕೆ ಬಗ್ಗೆ ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಸನ್ನಿವೇಶದಲ್ಲಿ NREG ಕಾರ್ಯಕ್ರಮವನ್ನು, ಒಂದು ಉತ್ತಮವಾದಂಥ ಯೋಜನೆಯನ್ನು ಯಾವ concept ಇಟ್ಟುಕೊಂಡು ತಂದರೋ ಅದರ ಪ್ರಕಾರ ಗ್ರಾಮ ಸ್ವರಾಜ್ಯವಾಗಬೇಕು, ನಿಜವಾಗಿಯೂ ಆಗುತ್ತದೆ ಎಂದು ತಿಳಿದುಕೊಂಡೆವು, ನೀವು ಒಂದು ಬುಕ್‌ನ್ನು ಕಳುಹಿಸಿದ್ದೀರಲ್ಲಾ, ಅದನ್ನು ತೆಗೆದುಕೊಂಡು ಪ್ರತಿ ಪಂಚಾಯತಿಗೂ ನಾನು ಹೋದೆ, ಅಲ್ಲಿಗೆ ಹೋದರೆ ಸ್ವಾಮಿ ನಿಮಗೆ ಕೈಮುಗಿಯುತ್ತೇವೆ, ನಾವು ಈ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದರು. ಯಾವ ಗ್ರಾಮ ಪಂಚಾಯತಿಯಲ್ಲಿ ಕೇಳಿದರೂ, ಏನಾದರೂ ಮಾಡಿ ಇದೊಂದು ರಸ್ತೆ ಮಾಡ್ರಯ್ಯ ಎಂದರೆ, ಇಲ್ಲಾ ಸ್ವಾಮಿ ನಾವು ಮಾಡುವುದಿಲ್ಲವೆನ್ನುತ್ತಾರೆ. ಏಕೆ ಎಂದು ಕೇಳಿದರೆ, ಜಾಬ್ ಕಾರ್ಡ್ ಎಲ್ಲವೂ ಅಲ್ಲಿ, ದುಡ್ಡನ್ನು online ನಲ್ಲಿ ಹಾಕುತ್ತಾರೆ, ಅವನ ಮುಂದೆ ಹೋಗಿ ರಾತ್ರಿ ಹೊತ್ತು ಮಲಗಿಕೊಳ್ಳಬೇಕು, ಸ್ವಾಮಿ ಬೆಳಿಗ್ಗೆ ದುಡ್ಡು ಬರುತ್ತದೆಂದರೆ ನಮಗೆ ಆಗುವುದಿಲ್ಲ. ನೀವು ಯಾರ ಕೈಯಲ್ಲಾದರೂ ಮಾಡಿಸಿಕೊಳ್ಳಿ, ನಾವು ನೋಡಿ, ನೀವು ಕೊಟ್ಟಂಥ programme list ಅನ್ನು ಬಹಳ ಮಟ್ಟಿಗೆ, ಅದರಲ್ಲಿ labour oriented 60 percent ಬರುತ್ತದಲ್ಲ, ಈ

ನಮ್ಮ ಕಣ ಯೋಜನೆಯಲ್ಲಿ, ಅದೊಂದನ್ನು ಹಾಕಿ. ಏಕೆಂದರೆ ಸಿಮೆಂಟ್, ಜಲ್ಲಿ, ಹೀಗೆ ಇವೆಲ್ಲವೂ labour oriented ನಲ್ಲಿ material supply bill ಅನ್ನು ಕೊಡುತ್ತಾರೆ, ಅದು material supply bill 70 ರಿಂದ 80 percent ನಲ್ಲಿ concept ಬಂದವುಗಳೆಲ್ಲದರ ಕೆಲಸ ಮುಗಿದು ಹೋಗಿದೆ, ಇನ್ನು 20 ಪರ್ಸೆಂಟ್ ಮಾತ್ರ NREGA ಯದ್ದು ಇದ್ದದ್ದು. ಅದು ಯಾರೋ ಅವರ ಮನೆಯವರನ್ನೋ, ಅದರ ಅಣ್ಣತಮ್ಮಂದಿರನ್ನೋ ಹಾಕಿಕೊಂಡು ದುಡ್ಡು ತೆಗೆದುಕೊಂಡು ಕಣ ಮಾಡಿದರು. ಎಲ್ಲ ಊರಿನಲ್ಲಿಯೂ ಕಣ ಚೆನ್ನಾಗಿ ಆಗಿದೆ. ಅದರಲ್ಲಿಯೂ ಈ ಕಣದಲ್ಲಿ ಒಂದು ದೊಡ್ಡ ತಪ್ಪು ಮಾಡಿದಿರಿ, ಅದನ್ನು ಈ ರೀತಿ ಉದ್ದ ಅಗಲ ಎಂದು ಮಾಡಿದ್ದೀರಲ್ಲ, ಅದರಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ, ಇನ್ನು ಸ್ವಲ್ಪ ದೊಡ್ಡದಾಗಿ ಮಾಡಬೇಕಾಗಿತ್ತು. ಇನ್ನಷ್ಟು ಅಗಲ ಮಾಡಿದರೆ ಯಾರಾದರೂ ಏನಾದರೂ ಬಡಿದುಕೊಳ್ಳುತ್ತಿದ್ದರು. ಅಲ್ಲಿ ಈಗ ನಾಲ್ಕು ಜನ ಕುಳಿತುಕೊಂಡು ಊಟ ಮಾಡುವುದಕ್ಕೂ ಆಗುವುದಿಲ್ಲ, ಎಂತದ್ದೋ ಒಂದನ್ನು ತೆಗೆದುಕೊಂಡು ಬಡಿಯುವುದಕ್ಕೂ ಆಗುವುದಿಲ್ಲ. ಮೊನ್ನೆ ದಿವಸ ಹೆಸರುಕಾಳು ಬಡಿಯುತ್ತಿದ್ದರು, ಹೀಗೆ ಒಂದು ಕಡೆ ಬಡಿಯುತ್ತಿದ್ದರೆ ಅದೆಲ್ಲವೂ ಚೆಲ್ಲಿ ಆಚೆಕಡೆಗೆ ಹೋಗುತ್ತಿತ್ತು. ಅಲ್ಲಿ ಬ್ಯಾಸ್ಕೆಟ್‌ಬಾಲ್‌ನ್ನು ಕೂಡ ಆಡುವುದಕ್ಕಾಗುವುದಿಲ್ಲ. ಆದುದರಿಂದ ದಯವಿಟ್ಟು ಇಂಥ ಯೋಜನೆಗಳನ್ನು ಮಾಡುವಾಗ ನಮ್ಮಂಥ grass root level MLA ಗಳ ಮಾತುಗಳನ್ನು ತೆಗೆದುಕೊಂಡರೆ ನಿಮಗೆ ಒಳ್ಳೆಯದಾಗುತ್ತದೆ, ನಾವೇನೂ ನಿಮಗೆ ಕೆಟ್ಟದ್ದು ಮಾಡುವುದಿಲ್ಲ, ನಾವು ಸಲಹೆಗಳನ್ನು ಹೇಳುತ್ತೇವೆ, ಸ್ವಾಮಿ ಸ್ವಲ್ಪ ಅಗಲ ಮಾಡಿ, ಕಣ ಎಂದರೆ ಒಂದು ಎತ್ತು ಗಾಡಿ ಸುತ್ತಲೂ ಒಂದು ರೌಂಡ್ ಬರಬೇಕು. ಆಗ ಅದು ನುರಿಯುತ್ತದೆ, 60X60 ಆದರೂ ಇರಬೇಕು ಅಥವಾ 100X100 ವಿಸ್ತೀರ್ಣವಾದರೂ ಇರಬೇಕು. ನೀವು ನೂರು ಕಟ್ಟುವುದನ್ನು ನಾಲ್ಕು ಊರಿನ ಒಂದು ಸೆಂಟರ್ ಪ್ಲೇಸ್‌ನಲ್ಲಿ ಕೇವಲ ಒಂದು ಕಟ್ಟಿ. ಆ ರೀತಿ ಒಂದು ಕಟ್ಟಿದಾಗ ಎಲ್ಲ ಜನರು ಅಲ್ಲಿಗೆ ಬಂದು ಗುರುತಿಸಿಕೊಂಡು ಅಲ್ಲಿ ಬಡಿದುಕೊಂಡು ತೆಗೆದುಕೊಂಡು ಹೋಗುತ್ತಾರೆ. ಈ ರೀತಿ ಮಾಡಿದರೆ ಟಾರ್

ರೋಡ್‌ಗೆ ಹಾಕುವುದು ತಪ್ಪುತ್ತದೆ. ಈಗ ನೋಡಿ ಪುನಃ ಟಾರ್ ರೋಡ್‌ಗೆ ಹಾಕುತ್ತಿದ್ದಾರೆ. ಅಲ್ಲಿ ಬಡಿದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ labour oriented ಕೆಲಸಗಳು ಮಾತ್ರ ಆಯಿತು. ಉದ್ಯೋಗ ಖಾತರಿಯಲ್ಲಿ ನೀವೇನಾದರೂ ಸಮರ್ಥವಾಗಿ ಉದ್ಯೋಗ ಖಾತರಿ ಹಣವನ್ನು ಉಪಯೋಗಿಸಬೇಕು ಎಂದಿದ್ದರೆ ಈಗಲೂ labour oriented ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತನ್ನಿ. ಶಾಲಾ ಕಾಂಪೌಂಡ್‌ಗಳನ್ನು ಕಟ್ಟುವುದನ್ನು ತನ್ನಿ, ಅದು ಕೆಲಸ ನಡೆಯುತ್ತದೆ. ಅದು labour oriented ಅಲ್ಲ, ಇದು materials oriented. ನೋಡಿ ನಿಮ್ಮವರು ಮಹಾನ್ ತಜ್ಞರು ಹೇಳುತ್ತಾರೆ, labour oriented 80% ಆದರೆ ಕೊಡುವುದಕ್ಕೆ ಬರುವುದಿಲ್ಲವೆನ್ನುತ್ತಾರೆ. ರಾಜೀವ್‌ಗಾಂಧಿ ಸೇವಾ ಕೇಂದ್ರವನ್ನು ಇಡೀ ಭಾರತ ದೇಶದಲ್ಲಿ ಎಲ್ಲ ಕಡೆ ಕಟ್ಟಿ open ಮಾಡಿದಿರಲ್ಲಾ ಸ್ವಾಮಿ, ಅವೆಲ್ಲಾ 80% labour oriented ಆಗುವುದಿಲ್ಲವೇ? 20% ಮಾತ್ರ labour ಬಂದಿರುವುದು, materials cost 80% ಬಂದಿರುವುದು ಈಗ ಚರಂಡಿ, ಊರೊಳಗೆ ಕಾಂಕ್ರೀಟ್ ರಸ್ತೆ, ಅದರ ಕಾಂಕ್ರೀಟ್ ರಸ್ತೆ ತೆಗೆದುಕೊಳ್ಳುವುದಿಲ್ಲ, ಮಣ್ಣು ಹಾಕಿ ಹೋಗಿ ಮನೆಗೆ ಎಂದು ಹೇಳುತ್ತಾರೆ. ಮೋರಿ, ಚರಂಡಿ, ಇಲ್ಲಾ ಚರಂಡಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಇಷ್ಟು ಪರ್ಸೆಂಟ್ ಎನ್ನುತ್ತಾರೆ. ಏತಕ್ಕೆ ಬೇಕು ಪರ್ಸೆಂಟ್? ನೀವು ಯಾವ ಊರನ್ನು ಸ್ವಚ್ಛಗೊಳಿಸಬೇಕಾಗಿದೆಯೋ, ಯಾವ ಊರಿಗೆ ಡ್ರೈನೇಜ್ ಮಾಡಬೇಕಾಗಿದೆಯೋ, ಯಾವ ಊರಿಗೆ ಚರಂಡಿ ಮಾಡಬೇಕಾಗಿದೆಯೋ, ಯಾವ ಊರಿಗೆ ಮೋರಿಗಳನ್ನು ಮಾಡಬೇಕಾಗಿದೆಯೋ ಅದಕ್ಕೆ ನೀವು ಪ್ರಾಧಾನ್ಯತೆಯನ್ನು ಕೊಡಿ. ಗುಣಮಟ್ಟವನ್ನು ಕಾಪಾಡಿ, ಅಲ್ಲಿ materials oriented ಕೆಲಸವನ್ನು ನೀವು 80% ಮಾಡಿ. ಆಗ ಮುಂದೆ ಬರುತ್ತಾರೆ, ಕೆಲಸಗಳಾಗುತ್ತದೆ, ಗ್ರಾಮ ಸ್ವರಾಜ್ಯವಾಗುತ್ತದೆ, ಗ್ರಾಮ ಅಭಿವೃದ್ಧಿಯಾಗುತ್ತದೆ. ಕೊಡಿ ಕಾಂಕ್ರೀಟ್‌ನ್ನು ಹಿಂದೆ ಒಂದು ಸಾರಿ ಒಂದು ಕಡೆ ಕಾಂಕ್ರೀಟ್‌ನ್ನು ಹಾಕಿಸಿದೆವು. ಅಯ್ಯೋ, ಅಯ್ಯೋ ಬಂದರು, ಬರೆದರು, ಬರೆದರೂ ಬರೆದರೂ ಪುಣ್ಯಾತ್ಮರು, ಇನ್ನೇನು ಸೆಂಟ್ರಲ್ ಗೌರ್ನಮೆಂಟ್ ಇವರ ಮೇಲೆಯೇ ಇದೆಯೆನ್ನುವ ಹಾಗೆ ಬರೆದರು.

ಅಲ್ಲಿಂದ ಬರುತ್ತಾರೆ, ಇಲ್ಲಿಂದ ಬರುತ್ತಾರೆ, ಯಾರು ಎಲ್ಲಿಂದ ಬರುತ್ತಾರೆ? ಒಳ್ಳೆಯ ಕೆಲಸವಾಗಿದೆಯೆ, ಎಸ್‌ಆರ್ ಪ್ರಕಾರ ಇದೆಯಾ, ಎಸ್ಟಿಮೇಟ್ ಪ್ರಕಾರ ಇದೆಯೆ ಅಥವಾ ಇಲ್ಲವೆ, ಗುಣಮಟ್ಟದಿಂದ ಕೂಡಿದೆಯೆ ಎನ್ನತಕ್ಕಂಥದ್ದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕು. ನಿಮಗೆ ಅಷ್ಟೊಂದು ಸಾವಿರ ಕೋಟಿ ರೂ.ಗಳ ಹಣ ಬಂದರೂ ಆ ಹಣವನ್ನು ಎಲ್ಲೋ ಒಂದು ಕಡೆ ತೆಗೆದುಕೊಂಡು ಸಮುದ್ರಕ್ಕೆ ನೀರು ಎರಚಿದ ಹಾಗೆ ಎರಚಿ ನಿಜವಾಗಿಯೂ ಆ ಗ್ರಾಮ ಸ್ವರಾಜ್ಯವಾಗುತ್ತಿಲ್ಲವಲ್ಲ, ಹೊಟ್ಟೆಯುರಿವುದಿಲ್ಲವೆ, ಅಷ್ಟು ಹಣವನ್ನು ನೀವು ನಮ್ಮ ಕೈಗೆ ಕೊಡಿ, ಆ ಗ್ರಾಮಗಳನ್ನು ಹೇಗೆ ಮಾಡುತ್ತೇವೆ ನೋಡುವಿರಂತೆ. ಆ ಗ್ರಾಮಗಳನ್ನು ಹೇಗೆ ಮಾಡಿ ತೋರಿಸುತ್ತೇವೆ ನೋಡುವಿರಂತೆ, ಕೊಡಿ ಆ ಹಣವನ್ನು ನಮಗೆ. ಅಷ್ಟು ಹಣವನ್ನು ಕೈಗೆ ಕೊಟ್ಟಲ್ಲಿ ನಿಜವಾಗಿಯೂ ಅಲ್ಲಿ ನಡೆಯುತ್ತಿರತಕ್ಕಂಥದ್ದನ್ನು ನೋಡಿಬಿಟ್ಟರೆ ನಾವು ಶಾಸಕರಾಗಿ ನಾವೇ ಕೂರಿಸಿರುವ ಚೇರ್, ಅವರು ಪಾಪ, ಅವರದ್ದೂ ತಪ್ಪಲ್ಲ. ಪಾಪ ಅವರೇನು ಮಾಡುತ್ತಾರೆ, ಇವರು ಮಾಡುವ ಹಾಗಿಲ್ಲ, ಏಕೆಂದರೆ ಅಧಿಕಾರಿಗಳು ಬಿಡುವುದಿಲ್ಲ. Labour oriented ಬಿಟ್ಟು ನೀವು ಯಾವುದೇ ಕಾರಣದಿಂದ materials oriented ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಇವರು ಬಿಡುವುದಿಲ್ಲ. ಇಷ್ಟು percent ಇರಬೇಕೆಂದು ಹೇಳುತ್ತಾರೆ. ನಾನು ಕೂಡ ಬಯ್ದು ಎಲ್ಲವೂ ಅಂದು ಸಾಕಾಗಿ ಹೋಗಿ ಎಲ್ಲಾದರೂ ಏನಾದರೂ ಮಾಡಿಕೊಳ್ಳಿ ಎಂದು ಕೈಬಿಟ್ಟು ನಾವು ಮನೆ ಹತ್ತಿರ ಇದ್ದೇವೆ. ನಾವು ಹೋದರೆ ಆ ಜನಗಳು ನಮ್ಮನ್ನು ಬಯ್ಯುವುದನ್ನು ನೋಡಬೇಕು, ಏನು ಮಾಡೋದು ನಾವು, ಈ ಪರಿಸ್ಥಿತಿಯಿದೆ. ಆ ಉದ್ಯೋಗ ಖಾತರಿ ಯೋಜನೆಗೆ ಸಮಗ್ರವಾಗಿರತಕ್ಕಂಥ ಕಾನೂನಿನ ಚೌಕಟ್ಟನ್ನು, ಕೆಲವು ಹೇಳಬೇಕೆಂದರೆ, ಆಂಧ್ರದಲ್ಲಿ ನಾನು ಕೇಳಿದ್ದೇನೆ, ಆಂಧ್ರದಲ್ಲಿ ಚಾನಲ್ ಮಾಡುತ್ತಾರೆ, ಚಾನಲ್ ಮಾಡಿ ಕಾಂಕ್ರೀಟ್ ಲೈನಿಂಗ್ ಮಾಡುತ್ತಾರೆ, ಈ ಉದ್ಯೋಗ ಖಾತರಿ ಯೋಜನೆಯಲ್ಲಿ. ನಮ್ಮಲ್ಲಿ ಏಕೆ ಮಾಡಬಾರದು? ನೀವು ಕೂಡ ಮಾಡಿ, ಶಾಸಕರನ್ನು ಅದಕ್ಕೆ involvement ಮಾಡಿ, ಶಾಸಕರನ್ನು ಕೂಡ ಸ್ವಲ್ಪ involvement ಮಾಡಿ ಆ ಯೋಜನೆಯನ್ನು ತಯಾರು

ಮಾಡುವಾಗ ಶಾಸಕರ ಗಮನಕ್ಕೆ ತೆಗೆದುಕೊಂಡು ಬನ್ನಿ. ಈ ರೀತಿ ಮಾಡಿ ಅಲ್ಲಿ ಏನೇ ಒಂದು misuse ಆದರೆ ನೀವು ಬೇಕಾದರೆ ಶಾಸಕರನ್ನು ಜವಾಬ್ದಾರರನ್ನಾಗಿ ಮಾಡಿ. ಶಾಸಕರಾದ ನಾವು misuse ಏನಾದರೂ ಆದರೆ ಶಾಸಕರಾದ ನಾವು ಹೊಣೆಗಾರರಾಗುತ್ತೇವೆ. ನಮಗೆ development ಮಾಡಬೇಕು ಎನ್ನುವ ಅಭಿಮಾನವಿದೆ. ಆಸೆಯಿದೆ ಆದರೆ ಸಂಪನ್ಮೂಲದ ಕೊರತೆಯಿಂದ ಯಾವುದಾದರೂ ಒಂದು ಗ್ರಾಮಕ್ಕೆ ನಮ್ಮ ಎಂ.ಎಲ್.ಎ ಗ್ರ್ಯಾಂಟ್‌ನಲ್ಲಿ ಕಾಂಕ್ರೀಟ್ ಹಾಕುತ್ತೇವೆ, ಆಮೇಲೆ ಇನ್ನೊಂದು ಏನಾಯಿತು ಗೊತ್ತೆ ದೊಡ್ಡ ಕೂಗು, ಎಸ್‌ಸಿ/ಎಸ್‌ಟಿ ನಲ್ಲಿ ದುಡ್ಡು ಕೊಡುತ್ತಿದ್ದಿರಿ, ಎಲ್ಲಾ ಊರುಗಳಲ್ಲಿ ಎಸ್‌ಸಿ/ಎಸ್‌ಟಿ ಕೇರಿಗಳಲ್ಲಿ ಕೆಲಸ ಮಾಡಿ ಪಾವನ ಮಾಡಿಬಿಟ್ಟಿದ್ದೇವೆ, ಎಲ್ಲಾ ಕೇರಿಗಳಿಗೂ ಒಳ್ಳೆಯ ಕಾಂಕ್ರೀಟ್ ಹಾಕಿಬಿಟ್ಟಿದ್ದೇವೆ. ಇದರಿಂದಾಗಿ ಜನರಲ್ ಮತ್ತು ಬಿ.ಸಿ.ಎಂ. ಜನರಿದ್ದಾರಲ್ಲ, ನನ್ನ ಮಗನೆ ಬಾ ನೀನು ನೆಕ್ಸ್ಟ್, ನೀನು ಅಲ್ಲಿಯೇ ಹಾಕಿಸಿಕೊಳ್ಳಬೇಕು ಓಟ್ ಎಂದು ಹೇಳುತ್ತಾರೆ. ಅಲ್ಲಿಯೇ ಹಾಕಿಸಿಕೊಳ್ಳಬೇಕು ನೀ ಓಟನ್ನು, ಬಾ ನೀನು ನೆಕ್ಸ್ಟ್ ಎಂ.ಎಲ್.ಎ. ಎಲೆಕ್ಷನ್‌ಗೆ ಎಂದು ಹೇಳುತ್ತಾರೆ. ಈ ಕರ್ಮದಿಂದ ನಾವು ಹೊರಗೆ ಬರುವುದಕ್ಕಾದರೂ ದಯವಿಟ್ಟು ಈ ಉದ್ಯೋಗ ಖಾತರಿಯಲ್ಲಿ materials oriented ಕೆಲಸ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ತಿದ್ದುಪಡಿಯನ್ನು ಮಾಡಿ ದಯಮಾಡಿ ಈ ಕೆಲಸವನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರು ಈ ನಿಟ್ಟಿನಲ್ಲಿ ಸ್ವಲ್ಪ ಯೋಚನೆ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಬಹುಶಃ ಇದಕ್ಕೆ ಎಲ್ಲ ಶಾಸಕರು ಸಹಮತಿ ವ್ಯಕ್ತಪಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಎಲ್ಲರೂ ಕೂಡ ಈ ದೃಷ್ಟಿಯಲ್ಲಿ ಯೋಚನೆ ಮಾಡುವುದಕ್ಕೆ ಒಂದು ಅವಕಾಶವನ್ನು ಮಾನ್ಯ ಸಚಿವರು ಕಲ್ಪಿಸಿಕೊಡಬೇಕು ಎಂದು ನಿಮ್ಮ ಮುಖಾಂತರ ಮನವಿಯನ್ನು ಮಾಡುತ್ತಿದ್ದೇನೆ.

ಉಪಾಧ್ಯಕ್ಷರು:– ಬೇಗ ಮುಗಿಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಾನು ಮಿನಿಮಮ್ ಒಂದೂವರೆ ಗಂಟೆ ಮಾತನಾಡುತ್ತೇನೆ.

ಉಪಾಧ್ಯಕ್ಷರು:- ಅರ್ಧ ಗಂಟೆ ಎಂದು ಹೇಳಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಮ್ಮ ಪಕ್ಷದಿಂದ ನಾನೊಬ್ಬನೆ ಮಾತನಾಡುತ್ತಿರುವುದು. ಇನ್ನು ಬೇರೆ ಯಾರೂ ಇಲ್ಲ.

ಉಪಾಧ್ಯಕ್ಷರು:- ಹಾಗೇನಿಲ್ಲ, ಇನ್ನು ಇದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಇದ್ದರೆ ಇರಲಿ, ನೀವು ಸಮಯವನ್ನು ಹಂಚಿಬಿಡಿ. ನಮ್ಮಲ್ಲಿ 40 ಜನ ಎಂ.ಎಲ್.ಎ.ಗಳಿದ್ದೇವೆ. ನಮಗೆ ಎಷ್ಟು ಟೈಂ ಬರುತ್ತದೆ, ಅವರಿಗೆ ಎಷ್ಟು ಟೈಂ ಬರುತ್ತದೆ ಎಂದು ಸಮಯವನ್ನು ಎಲ್ಲರಿಗೂ ನಿಗದಿ ಮಾಡಿಬಿಡಿ.

ಉಪಾಧ್ಯಕ್ಷರು:- ಆಯಿತು. ಈಗ ನೀವು ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಆ ರೀತಿ ಮಾಡದೇ ನೀವು ಬೆಲ್ ಹೊಡೆದುಬಿಟ್ಟರೆ ನಮ್ಮ ಮೈಂಡ್ ಆಫ್ ಆಗಿಬಿಡುತ್ತದೆ. ನಮ್ಮ ಮಾತು ಮುಂದಕ್ಕೆ ಹೋಗುವುದೇ ಇಲ್ಲ. ಈಗ ನಮ್ಮ ಬದುಕು ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ. ಇದು ಜನರಿಗೆ ಗೊತ್ತಾಗಬೇಕು ಮತ್ತು ಅಲ್ಲಿ ಅಧಿಕಾರಿಗಳು ಕುಳಿತಿದ್ದಾರಲ್ಲ, ಅವರಿಗೆ ಇದೇನು ಎಂದು ಗೊತ್ತಾಗಬೇಕು. ಆದುದರಿಂದ ಅದೂ ಒಂದು ವ್ಯವಸ್ಥೆ ಆಗಬೇಕೆನ್ನುವುದು ನನ್ನ ಒಂದು ಭಾವನೆ. ಅದರ ಜೊತೆಯಲ್ಲಿ ಕುಡಿಯುವ ನೀರಿಗೆ ನೀವು ಪಾಪ, ನಿಮ್ಮದೇ ಆದಂತಹ ಹೋರಾಟ ಮಾಡಿದಿರಿ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ನೀವು ಮುಂದಿನ ವಿಷಯಕ್ಕೆ ಹೋಗುವುದಕ್ಕಿಂತ ಮೊದಲು ಮಾನ್ಯ ಉಪಾಧ್ಯಕ್ಷರ ಅಪ್ಪಣೆಯನ್ನು ಪಡೆದು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನೀವು ಎರಡು ವಿಚಾರಗಳನ್ನು ಬಹಳ ಗಂಭೀರವಾಗಿ ಪ್ರಸ್ತಾಪ ಮಾಡಿದಿರಿ. ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕೆನ್ನುವುದು ತಮ್ಮ ಸದ್ಭಾವನೆಯಾಗಿದೆ. ತಾವು ನಮ್ಮ ಹೊಲ ನಮ್ಮ ದಾರಿ ವಿಚಾರವನ್ನು ಪ್ರಸ್ತಾಪ ಮಾಡಿದಿರಿ. ನಮ್ಮ ಶಾಸಕರುಗಳೇ ಎರಡು ಮೂರು ಕಡೆಗಳಲ್ಲಿ ರಸ್ತೆಗಳನ್ನು ಮಾಡಿರುವಂತಹ ಮಾಹಿತಿಯನ್ನು

ನಾನು ನಿಮ್ಮ ಜೊತೆ ಹಂಚಿಕೆ ಮಾಡಿಕೊಳ್ಳುತ್ತೇನೆ. ಹಾವೇರಿಯಲ್ಲಿ ಅಲ್ಲಿನ ಶಾಸಕರು ಮತ್ತು ಪಂಚಾಯಿತಿಯವರು ಸೇರಿ NREG 13th financeನಲ್ಲಿರುವಂತಹ ಹಣ ಮತ್ತು MLA fund convergence ಗೆ ಪರವಾನಗಿ ತೆಗೆದುಕೊಂಡು, convergence ಮಾಡಿ, ರಸ್ತೆಯನ್ನು ಮಾಡಿದ್ದಾರೆ. ಅದರಲ್ಲೂ ವಿಶೇಷವಾಗಿ ಮಾನ್ಯ ಬೊಮ್ಮಾಯಿಯವರು ಆ ರಸ್ತೆಯಲ್ಲಿ ಹೋಗಿರಬಹುದು. ಅಂಗಡಿಯಿಂದ ಹೋಗುವಂತಹ ಅತ್ಯಂತ ಉತ್ತಮವಾಗಿರುವಂಥ 10 ರಿಂದ 12 ಕಿಲೋಮೀಟರ್ ರಸ್ತೆಯನ್ನು ಮಾಡಿದ್ದಾರೆ. ಮಾನ್ಯ ಬೊಮ್ಮಾಯಿಯವರ ಶಿಗ್ಗಾಂವ್ ಕ್ಷೇತ್ರದಲ್ಲಿ ಆ ರೀತಿ ಹತ್ತಾರು ಕಿಲೋಮೀಟರ್ ಆಗಿದೆ. ಇದನ್ನು ಮುಂದುವರೆಸಿಕೊಂಡು ಮಾನ್ಯ ದತ್ತಾ ರವರೆ ನಿಮಗೆ ಆಶ್ಚರ್ಯವಾಗಬಹುದು. I must compliment and I must make this known to this whole House. ನಮ್ಮ ಧಾರವಾಡದ ಶಾಸಕ ವಿನಯ್ ಕುಲಕರ್ಣಿಯವರು, ನವಲಗುಂದ ಶಾಸಕ ಎನ್.ಹೆಚ್. ಕೋನರೆಡ್ಡಿಯವರು, ನರಗುಂದ ಶಾಸಕ ಬಿ.ಆರ್. ಯಾವಗಲ್‌ರವರು ಮತ್ತು ಈಗ ಮಾಲೀಕಯ್ಯ ಗುತ್ತೇದಾರ್‌ರವರು ಪ್ರಾರಂಭ ಮಾಡಿದ್ದಾರೆ. ಕುಂದಗೋಳದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಪ್ರಾರಂಭವಾಗಿದೆ. ಈಗಾಗಲೇ ಒಂದು ಸಾವಿರ ಕಿಲೋಮೀಟರ್ ಅನ್ನು ನಮ್ಮ ಹೊಲ, ನಮ್ಮ ದಾರಿ ಯೋಜನೆಯನ್ನು ಪೂರ್ಣ ಮಾಡಿದ್ದಾರೆ. ಅದರಲ್ಲಿ ಅವರು convergence ಮಾಡಿಕೊಂಡು ತಮ್ಮ ಶಾಸಕರ ನಿಧಿ ಹಾಕಿಕೊಂಡಿದ್ದಾರೆ, ನಾವು 3054ರಲ್ಲಿ ಕೊಟ್ಟಿದ್ದೇವೆ, ಅದರ ಜೊತೆಗೆ ಮಾನ್ಯ ಕಾಗೇರಿಯವರು ಹೇಳಿದ ಹಾಗೆ ದುರಸ್ತಿಗೆ ಕೊಟ್ಟಂತಹ 50 ಲಕ್ಷ ರೂಪಾಯಿ ಹಣವನ್ನು ಅವರು ಬಳಕೆ ಮಾಡಿಕೊಂಡಿದ್ದಾರೆ. ಈ 3–4 ಕ್ಷೇತ್ರಗಳಲ್ಲಿ ಒಂದು ಸಾವಿರ ಕಿಲೋ ಮೀಟರ್‌ವರೆಗೆ ನಮ್ಮ ಹೊಲ, ನಮ್ಮ ದಾರಿ ಪೂರ್ಣಗೊಂಡಿದೆ. I am very proud that Hon'ble Chief Minister came and saw that road, he travelled almost 7-8 k.ms. and I also understand Mr. Kumaraswamy, he went on that road. ನೀವು ಹೋಗಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಸುಮಾರು ಹತ್ತಾರು ಕಿಲೋಮೀಟರ್ ಅವರೂ ಕೂಡ ಹೋಗಿದ್ದರು.

ಧಾರವಾಡ, ನವಲಗುಂದ ನರಗುಂದ ಈ ಭಾಗದ ಎರೆಭೂಮಿಯಲ್ಲಿ ನಮ್ಮ ಹೊಲ, ನಮ್ಮ ದಾರಿ ಮಾಡಿದ್ದಾರೆ. ಅದಕ್ಕೆ cost ಏನಾಗಿದೆ ಎಂದು ಗೊತ್ತಿದೆಯೇ? ಮಾನ್ಯ ಎಂ.ಬಿ.ಪಾಟೀಲರೆ ನಿಮಗೆ ಆಶ್ಚರ್ಯವಾಗಬಹುದು. ನಮ್ಮ ಹೊಲ, ನಮ್ಮ ದಾರಿ formation ಮಾಡುವುದಕ್ಕೆ ಒಂದು ಕಿಲೋ ಮೀಟರ್‌ಗೆ ಒಂದು ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ, average ಐದು ಸಾವಿರ ಅವರ ತಾಲ್ಲೂಕಿನಲ್ಲಿ ಹೆಚ್ಚಾಗಿರಬಹುದು ಅಥವಾ ಐದು ಸಾವಿರ ಇವರ ತಾಲ್ಲೂಕಿನಲ್ಲಿ ಕಡಿಮೆಯಾಗಿರಬಹುದು.

ಶ್ರೀ ವೈ.ಎಸ್.ವಿ. ದತ್ತಾ:- ಅದು ಸಾಧ್ಯವಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:- You can't say ಸಾಧ್ಯವಿಲ್ಲ. ಏಕೆಂದರೆ I am not quoting one kilometer. I am quoting one thousand kilometers. I am quoting one thousand kilometer and that thousand kilometer is there.

ಶ್ರೀ ವೈ.ಎಸ್.ವಿ. ದತ್ತಾ:- ಸಾವಿರ ಕಿಲೋಮೀಟರ್ ಆಗಿರುವುದನ್ನು ಒಪ್ಪಿಕೊಳ್ಳುತ್ತೇನೆ. ಇದೆಲ್ಲ convergence ಮಾಡಿ ಮಾಡಿರುವುದನ್ನು ಸಾಧ್ಯ ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ cost one kilometerಗೆ ಒಂದು ಲಕ್ಷ ರೂಪಾಯಿ ಆಗಿದೆ ಎನ್ನುವುದು ಸಾಧ್ಯವಿಲ್ಲ. ಏಕೆಂದರೆ ಇವತ್ತು ನಾವು ಬೇರೆ ಕಡೆ ನೋಡುತ್ತಿದ್ದೇವಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅದು mud road ಕಣ್ರೀ.

ಶ್ರೀ ಹೆಚ್.ಕೆ. ಪಾಟೀಲ್:- Formation of road ಎಂದರೆ ಏನು?

ಶ್ರೀ ವೈ.ಎಸ್.ವಿ. ದತ್ತಾ:- ಗ್ರಾವೆಲ್ ಕೆತ್ತಿ ಸ್ವಲ್ಪ ಮಣ್ಣು ಹಾಕುವುದು.

ಶ್ರೀ ಬಸವರಾಜ್ ಬೊಮ್ಮಾಯಿ:- ಗ್ರಾವೆಲ್ ಹಾಕಿಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಒಂದು ನಿಮಿಷ, ನಾನು ರಸ್ತೆ ಮಾಡಿರುವುದನ್ನು ಹೇಳಿಬಿಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:- ಗ್ರಾವೆಲ್ ಹಾಕಿದ್ದಾರೆ ಎಂದರೆ ಗ್ರಾವೆಲ್ ಹಾಕಿಲ್ಲ.

ಶ್ರೀ ಬಿ.ಆರ್. ಯಾವಗಲ್:- ಒಂದು ಇರಬಹುದು, 150 ಇರಬಹುದು, 175 ಇರಬಹುದು, ಸರಾಸರಿ ಅಷ್ಟೆ ಬರುವುದು.

ಶ್ರೀ ಹೆಚ್.ಕೆ. ಪಾಟೀಲ್:- ನಾನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಶಾಸಕರು ಮನಸ್ಸು ಮಾಡಿದರೆ, convergence ಮಾಡುವುದಕ್ಕೆ ಸರ್ಕಾರ ಮುಂದೆ ಬರುತ್ತದೆ. ಮಾನ್ಯ ಶಿವಲಿಂಗೇಗೌಡರು ನಮ್ಮ ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದರಲ್ಲ, convergence ಮಾಡಿ, 6040 ಎಂದು ಹೇಳಿ ಕುಳಿತುಕೊಳ್ಳಬೇಡಿ, ಇವತ್ತು ಏನು materials component ಇದೆ, ಅದನ್ನು ಜಾಸ್ತಿ ಮಾಡಿ ಎಂದು ಅವರು ಹೇಳುತ್ತಿದ್ದ ವಿಚಾರಗಳಿಗೆ ಈ ಉದಾಹರಣೆಗಳನ್ನು ನಾನು ಕೊಟ್ಟೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ನಾನು ರಸ್ತೆಗಳನ್ನು ಮಾಡಿದ್ದೇನೆ. ಅದನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಸಚಿವರು ಹೇಳಿರುವುದು ಒಂದು ಭಾಗ ಸಕಾರಾತ್ಮಕವಾಗಿದೆ. ನಮ್ಮ ಹೊಲ ನಮ್ಮ ರಸ್ತೆಗೆ ಶಾಸಕರ ನಿಧಿ ಮತ್ತು NREG convergence ಮಾಡುವಂತಹ ಸಾಧ್ಯತೆ ಇದೆ ಹಾಗೂ ಯಶಸ್ವಿ ಕೂಡ ಆಗಿದೆ. ನಮ್ಮ ಜಿಲ್ಲೆಯಲ್ಲಿ ಬಹುತೇಕವಾಗಿ ಎಲ್ಲಾ ಕಡೆ ಮಾಡಿದ್ದಾರೆ. ಆದರೆ ನೀವು ನಮ್ಮ ಹೊಲ, ನಮ್ಮ ರಸ್ತೆ ಒಂದು ಲಕ್ಷ ರೂಪಾಯಿ ಆಗುತ್ತದೆನ್ನುವ ಮಾತು ಹೇಳಿದರಲ್ಲ, ಅದೇನೆಂದರೆ JCBಯಲ್ಲಿ ಪಕ್ಕದಲ್ಲಿ ಗಟಾರ ತೆಗೆದು ಎರೆ ಮಣ್ಣನ್ನು ಹಾಕಿರುವುದಕ್ಕೆ ಒಂದು ಲಕ್ಷ ರೂಪಾಯಿ ಆಗಿದೆ. ನೀವು 3054 ಕೆಲವು ಶಾಸಕರಿಗೆ ಅತೀ ಹೆಚ್ಚು ಹಣ ಕೊಟ್ಟಿದ್ದೀರಿ, ಅಲ್ಲಿ ಅವರು ಅದನ್ನು ಬಳಕೆ ಮಾಡಿ ಮಾಡಿದ್ದು, ಅದರಲ್ಲೂ ವಿಶೇಷವಾಗಿ ಮಾನ್ಯ ಕೋನರೆಡ್ಡಿಯವರು ರಸ್ತೆಯನ್ನು ಮಾಡಿದ್ದಾರೆ. ಆದರೆ ಅದೇ ರೀತಿಯಲ್ಲಿ ಎಲ್ಲಾ ಶಾಸಕರಿಗೆ ಸಿಕ್ಕಿಲ್ಲ. ಒಂದು ಲಕ್ಷ ರೂಪಾಯಿಯಲ್ಲಿ

ಮಾಡಿರುವಂತಹ ರಸ್ತೆ ಒಂದು ಮಳೆಗಾಲದ ನಂತರ ಯಥಾಸ್ಥಿತಿಗೆ ಬರುತ್ತದೆ. ಆದ್ದರಿಂದ asset creation ಎಂದರೆ ಏನು? ಒಂದು ರೀತಿಯಲ್ಲಿ ಕನಿಷ್ಠ ಅವಧಿಗಾದರೂ ನಮ್ಮ ರೈತರಿಗೆ ಓಡಾಡುವುದಕ್ಕೆ, ಮಾಲನ್ನು ತರುವುದಕ್ಕೆ, ಒಂದು ಚಕ್ಕಡಿ ಅಥವಾ ಟ್ರಾಕ್ಟರ್ ಹೋಗಿಬರುವ ಭಾರವನ್ನು ತಡೆಯುವಂತಹ ರಸ್ತೆಯನ್ನು ನಿರ್ಮಾಣ ಮಾಡಬೇಕು. ಕೇವಲ ಹೆಸರಿಗೆ ಮಾತ್ರ ರಸ್ತೆ ನಿರ್ಮಾಣ ಎಂದು ಆಗಬಾರದು. ಆದ್ದರಿಂದ ಒಂದು ಲಕ್ಷ ರೂಪಾಯಿಯಲ್ಲಿ ರಸ್ತೆ ನಿರ್ಮಾಣ ಮಾಡಿರುವುದೇನಿದೆ, ಆಕಸ್ಮಾತ್ ಯಾರಾದರೂ ಶಾಸಕರು ಆ ರೀತಿಯ ರಸ್ತೆಯನ್ನು ಮಾಡಿಸಿದ್ದರೆ, ಅದಕ್ಕೆ ಸರ್ಕಾರ ಪೂರಕವಾಗಿ ಒಂದು ಕಿಲೋಮೀಟರ್‌ಗೆ ನೀವು 5 ಲಕ್ಷ ರೂಪಾಯಿಯನ್ನು ಕೊಟ್ಟರೆ at least one ground muram casing ಹಾಕಿದರೆ ಆ ರಸ್ತೆ ಒಂದು seasonಗಾದರೂ ಬರುತ್ತದೆ. ಪ್ರತಿಯೊಂದು seasonಗೂ ಒಂದು murram casing ಹಾಕಿಕೊಂಡು ಹೋದರೆ ಮುಂದೆ ಗಟ್ಟಿಯಾಗುತ್ತದೆ. ಅದರಿಂದ ಅದರ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಮಾಡುವುದು ಅವಶ್ಯಕತೆ ಇದೆ. ನೀವು ಕೇವಲ ಶಾಸಕರು ಮಾಡಿ ಬಿಟ್ಟಿದ್ದಾರೆಂದು ಬಿಟ್ಟರೆ, ಮಳೆಗಾಲದ ನಂತರ ಆ ರಸ್ತೆಗಳು ಏನಾಗಿದೆ ಎನ್ನುವುದು ಅವರ ಅನುಭವಕ್ಕೆ ಬರುತ್ತದೆ.

ಉಪಾಧ್ಯಕ್ಷರು:- ಕೋನರೆಡ್ಡಿ ಮಾತನಾಡುವುದಿದ್ದರೆ ಮಾತನಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಶಿವಲಿಂಗೇಗೌಡರು ಏನು 80:20 ಪರ್ಸೆಂಟ್ ಮಾಡಬೇಕೆಂದು ಹೇಳಿದರು, ಇದನ್ನು ಕೇಂದ್ರ ಸರ್ಕಾರ ಮಾಡುವಂತಹ ವಿಚಾರ ಇದೆ. ಇದು ಬಹಳ ವರ್ಷದಿಂದ ನಡೆಯುತ್ತಿದೆ. ಮೊನ್ನೆ ಮಾನ್ಯ ಸಚಿವರು ಒಂದು statement ಕೊಟ್ಟು ಇದರಲ್ಲಿ ಏನಾದರೂ ಬದಲಾವಣೆ ತರುವುದಿದ್ದರೆ, ಹೆಚ್ಚಿಗೆ ಉಪಯೋಗ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ materials oriented works ಅನ್ನು ಕೂಡ employment oriented scheme ಏನಿದೆ, ಅದರಲ್ಲಿ asset create ಮಾಡಬೇಕೆಂದು ನೀವು ಹೇಳಿದಿರಿ. ಹಾಗಾಗಿ at least 50:50 weightage ಕೊಡಿ. 50% asset creation, 50% employment generation ಎಂದು ಮಾಡಿದರೆ, ಆಗ ನಾವು ಆಯ್ಕೆ ಮಾಡಬಹುದು. Asset creation ಗೆ

ಕಾಂಪೌಂಡ್ ಮತ್ತೊಂದು ಏನು ಮಾಡಬೇಕಾಗಿದೆ, ಅದಕ್ಕೆ 80% material ಎಂದು ಆಯ್ಕೆ ಮಾಡುವಂತಹ category ಮಾಡಿ, ಈ ರೀತಿ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ ಕಳುಹಿಸಿ ಒಪ್ಪಿಗೆ ತೆಗೆದುಕೊಂಡು ಮಾಡಿದರೆ ದೊಡ್ಡ ಪ್ರಮಾಣದ ಹಣವನ್ನು asset creation ಮಾಡುವುದಕ್ಕೆ ಆಗುತ್ತದೆ. ಆ ನಿಟ್ಟಿನಲ್ಲಿ ತಾವು ಯೋಚನೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಅತೀ ವೃಷ್ಟಿಯಿಂದ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿಬಿಟ್ಟಿತ್ತು. ಅದಕ್ಕೆ ನಾನು ಒಂದು concept ವಿಚಾರ ಮಾಡಿ, ನಮ್ಮಲ್ಲಿ ಹತ್ತು ಅಡಿಯ ರಸ್ತೆಯಲ್ಲಿ ಸಿಕ್ಕಾಪಟ್ಟೆ ಕಂಟಿಗಳು ಬೆಳೆದಿದ್ದವು. ನಾವು ನೂರು ರಸ್ತೆಗಳನ್ನು ಮಾಡಿಸಿಯೇ-ತೀರಬೇಕೆಂದು ಒಂದು ಸಂಕಲ್ಪವನ್ನು ಮಾಡಿದ್ದೆವು. ಅದರಲ್ಲಿ 76 ರಸ್ತೆಗಳನ್ನು ಪೂರ್ತಿ ಮಾಡಿದೆವು. ಹತ್ತು feet ಇದ್ದಂತಹ ರಸ್ತೆಗಳನ್ನು 33 feet ಮಾಡಿದೆವು. ಕೆಲವು ಕಡೆ 40 feet ಆಯಿತು, ಕೆಲವು ಕಡೆ 50 feet ಆಯಿತು. ನಾವು ಒಟ್ಟು 472 K.M complete ಮಾಡಬೇಕೆನ್ನುವ ಒಂದು ಗುರಿಯನ್ನು ಇಟ್ಟುಕೊಂಡು, ಅದಕ್ಕೆ ಎಷ್ಟು ಆಗುತ್ತದೆಂದು total estimate ಲೆಕ್ಕ ಹಾಕಿದೆವು. ನಾವು PWD ಯಲ್ಲಿರುವಂತಹ SR rate ನಂತೆ ಮಾಡಲಿಲ್ಲ. ನಾವು ವಾಸ್ತವಿಕವಾಗಿ ಎರಡೂ ಕಡೆ ಗಟರ್ ತೆಗೆದು, formation ಮಾಡಿ ಚಕ್ಕಡಿ ರಸ್ತೆ ಇದ್ದದ್ದನ್ನು ನಮ್ಮ ಗ್ರಾಮ ನಮ್ಮ ರಸ್ತೆ concept ಏನಿದೆ, ಆ ಪದ್ಧತಿಯಲ್ಲಿ ಒಂದು highway ರಸ್ತೆ ನಮ್ಮಲ್ಲಿ ತಯಾರಾದವು. ಅದಕ್ಕೆ ಖರ್ಚು ಯಾವ ರೀತಿ ಮಾಡಿದೆವು ಎಂದರೆ 35 ಹಿಟಾಚಿಯನ್ನು ತೆಗೆದುಕೊಂಡು ಮೂರೂವರೆ ತಿಂಗಳು ಹಗಲು ರಾತ್ರಿ ಕೆಲಸ ಮಾಡಿದೆವು. ಆ ಮೆಷಿನ್ ನವರಿಗೆ ಏನು ಹೇಳಿದೆವು ಎಂದರೆ ನಾವು ಯಾವುದೇ ರೀತಿಯಲ್ಲಾದರೂ ದುಡ್ಡು ಕೊಡುತ್ತೇವೆ, ನೀವು ಸ್ವಲ್ಪ ದಿವಸ ತಡೆದುಕೊಳ್ಳಬೇಕೆಂದು ಅರ್ಥ ಮಾಡಿ ತಿಳಿಸಿದೆವು.

ಶ್ರೀ ಬಸವರಾಜ ಬೊಮ್ಮಾಯಿ:- ನೀವು ಯಾವ ರೀತಿ ಮಾಡಿದ್ದೀರಿ ಎನ್ನುವುದು ಗೊತ್ತಿದೆ, ಆದರೆ ಆ ರೀತಿ ಎಲ್ಲರಿಗೂ ಮಾಡುವುದಕ್ಕೆ ಸಾಧ್ಯವಿಲ್ಲ, ನಿಮ್ಮ ಲೆಕ್ಕಾಚಾರ ಬೇರೆ ಇದೆ. ಇದು ಮಿಸ್‌ಗೈಡ್ ಆಗಬಾರದು.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಒಂದು ನಿಮಿಷ, ನಾನು ಹೇಳುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:- ಅವರು ಅವರ ಅನುಭವವನ್ನು ಹೇಳಲಿ ಬಿಡಿ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:- ಅವರು ಮಾಡಿರುವಂಥದ್ದನ್ನು ಹೇಳಲಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಅದರ ಜೊತೆಗೆ ನನ್ನ ಸಮಸ್ಯೆಗಳು ಕೂಡ ಇವೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಉಪಾಧ್ಯಕ್ಷರೆ, ಕಾನೂನು ಒಳಗೆ 35 JCB ಯಲ್ಲಿ ಕೆಲಸ ಮಾಡಿ, ಇವರ ವ್ಯವಸ್ಥೆಯೊಳಗೆ Hitachi ಯಿಂದ ಕೆಲಸ ಮಾಡಿಸುವುದಕ್ಕೆ ಬಿಲ್ ಕೊಡಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಈಗ ನೀವು financially strong ಇರುವವರು ಇರಬಹುದು, ನಿಮ್ಮ ಕೈಯಿಂದ ಕೊಟ್ಟು ಮಾಡುವುದಕ್ಕೆ ಆಗಬಹುದು. ನಮ್ಮಲ್ಲಿ ಬಿ.ಪಿ.ಎಲ್.ನ ಎಂ.ಎಲ್.ಎ.ಗಳು ಇದ್ದೇವೆ. ನಮ್ಮಂಥ ಬಿ.ಪಿ.ಎಲ್.ನವರನ್ನು ಜೊತೆಯಲ್ಲಿ ಇಟ್ಟುಕೊಳ್ಳಿ.

ಶ್ರೀ ಸಿ.ಎನ್. ಬಾಲಕೃಷ್ಣ:- ಅವರು method ಏನೆಂಬುದನ್ನು ಹೇಳಲಿ, ಆನಂತರ ಅದನ್ನು ಅಳವಡಿಸುವುದು, ಬಿಡುವುದು secondary.

ಶ್ರೀ ಎನ್.ಹೆಚ್. ಕೋನರೆಡ್ಡಿ:- ನಾವು ಹೇಗೆ ಮಾಡಿದ್ದೇವೆಂಬುದನ್ನು ಹೇಳುತ್ತೇನೆ, ನಾನು ಮುಂದೆ ಹೇಳುವುದನ್ನು ನೀವು ಕೇಳಿಲ್ಲ, ಒಂದು ನಿಮಿಷ ನಾನು ಹೇಳುತ್ತೇನೆ. ನಮ್ಮದು ಎರೆ ಮಣ್ಣಿನ ಪ್ರದೇಶವಾಗಿದ್ದು, ಇವತ್ತು ಹಾಕಿದ್ದು ನಿಲ್ಲುವುದಿಲ್ಲವೆಂದು ಮಾನ್ಯ ಬಸವರಾಜ ಬೊಮ್ಮಾಯಿಯವರು support ಮಾಡಿದರು, ಅದನ್ನು ಒಪ್ಪುವಂಥ ಮಾತು. ಇವತ್ತು ಚಕ್ಕಡಿಯಲ್ಲಿ ಹೋಗುವುದಕ್ಕೆ ಆಗದೇ ಇರುವಂಥ ಸಂಧರ್ಭದಲ್ಲಿ, ನಾನು ಅದನ್ನು ಮಾಡಿ ಏಕೆ ತೋರಿಸಿದ್ದೇನೆಂಬ ಮಾತನ್ನು ಹೇಳುತ್ತೇನೆ. ನಾವು 35 Hitachi ಯಲ್ಲಿ ಮಾಡಬೇಕೆಂದರೆ ಅವರು ಹಾಗೆ ಏನೂ ಬರುವುದಿಲ್ಲ. ಅವರಿಗೆ ಬಾಡಿಗೆ

ಕೊಡಬೇಕು, ಅದೆಲ್ಲಾ ಇದೆ. ನಾನು ಹಣವನ್ನು ಏನು ಉಪಯೋಗ ಮಾಡಿದೆ. 3054ನಲ್ಲಿ ನಮಗೆ 50 ಲಕ್ಷ ರೂ.ಗಳನ್ನು maintenanceಗೆ ಕೊಟ್ಟರು. ಆ ಹಣವನ್ನು ಅದಕ್ಕೆ ಉಪಯೋಗ ಮಾಡಿದೆವು. ನಮಗೆ ಅತಿವೃಷ್ಟಿಯೆಂದು ಆದಾಗ ಜಿಲ್ಲಾಧಿಕಾರಿಗಳು 70 ಲಕ್ಷ ರೂ.ಗಳನ್ನು ಅದಕ್ಕೆ ಕೊಟ್ಟರು. ಸರ್ಕಾರದಿಂದ 50 ಲಕ್ಷ ರೂ.ಗಳನ್ನು ಒಂದು ಸಾರಿ ಕೊಟ್ಟರು. ಈ ಹಣವನ್ನು ಕೊಟ್ಟಾಗ ಅದಕ್ಕೆ ಏನು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡುವುದಕ್ಕಾಯಿತು. ಕೆಲವು ಕಡೆ ಎಲ್ಲಿ ಹಣ ಕಡಿಮೆ ಇದೆ, ಅಲ್ಲಿ ಎಂ.ಎಲ್.ಎ.ಫಂಡ್ ಅನ್ನು ಉಪಯೋಗ ಮಾಡಬೇಕೆಂದು ಒಂದು ಗಟ್ಟಿ ನಿರ್ಣಯವನ್ನು ತೆಗೆದುಕೊಂದು ಮಾಡಿದೆವು. ಇದು just formation, formation ನಲ್ಲಿ ಪಕ್ಕಾ ರಸ್ತೆ ಮಾಡಬೇಕೆಂದು ಇತ್ತು. ಹೊಸ ಒಂದು ಆಧುನಿಕ ಪದ್ಧತಿಯನ್ನು ನಮ್ಮಲ್ಲಿ ತಂದು ಮಾಡಬೇಕೆಂದು ಮಾಡಿ, ಸರ್ಕಾರ ಒಂದು ನಿರ್ಧಾರವನ್ನು ಮಾಡಿ ಪೈಲೆಟ್ ಪ್ರಾಜೆಕ್ಟ್ ತಂದು ಕೊಂಡಿಕೊಪ್ಪಲು–ಬೆಲ್ಲೂರು ರಸ್ತೆ ಎಂದು ಮಾಡುತ್ತಿದ್ದಾರೆ. ಈ concept ಚೆನ್ನಾಗಿದೆ, ಅದರ ಖರ್ಚು ಏನು ಬರುತ್ತದೆ, ಅದನ್ನು ನಂತರ ಮಾತನಾಡೋಣ. ಆದರೆ ಗ್ರಾಮೀಣ ರಸ್ತೆಗಳನ್ನು ಮಾಡುವಂಥ ವ್ಯವಸ್ಥೆ ಇದೆಯಲ್ಲಾ, ಅದಕ್ಕೆ ರೈತರೆಲ್ಲಾ ನಮ್ಮನ್ನು ಎಷ್ಟು appreciate ಮಾಡಿದರೆಂದರೆ, ನಾನು ಹೇಳುವುದೇನೆಂದರೆ, ನಮ್ಮ ಕ್ಷೇತ್ರದಲ್ಲಿ ರಸ್ತೆ ಮಾಡುವುದಷ್ಟೆ ಮಹತ್ವವಲ್ಲ. ಆ ರಸ್ತೆಗೆ ರೈತರು ಜಮೀನು ಬಿಟ್ಟು ಕೊಟ್ಟರಲ್ಲಾ, ಅದು ಬಹಳ ಮಹತ್ವದ್ದು, ಅದಕ್ಕೆ ನಮ್ಮ ಕ್ಷೇತ್ರಕ್ಕೆ ಟಿ.ವಿ ಮಾಧ್ಯಮದವರು ಬಂದಾಗ ಏನು ಕೇಳಿದರೆಂದರೆ, ನಾನು ಇದರ credit ಯಾರಗೆ ಹೋಗಬೇಕೆಂದರೆ ಅದು ರೈತರಿಗೆ ಹೋಗಬೇಕೆಂದು ಹೇಳಿದೆ. ನಾವು ಅಂಥ ಒಂದು ದೊಡ್ಡ ಸಾಧನೆಯನ್ನು ಮಾಡುವ ಪ್ರಯತ್ನವನ್ನು ಮಾಡಿದ್ದೇವೆ. ಇಂಥ ರಸ್ತೆಗಳನ್ನು ಮೂರ್‍ನಾಲ್ಕು ಜನ ಎಂ.ಎಲ್.ಎ.ಗಳು ಏನು ಮಾಡಿದ್ದಾರೆ, ಅಂಥವರಿಗೆ ಮತ್ತು ಇನ್ನು ಮುಂದೆ ಮಾಡುವಂಥ ಶಾಸಕರುಗಳಿಗೂ ಸಹಕಾರ ಕೊಟ್ಟು ಅಭಿವೃದ್ದಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಈ ವಿಷಯವಾಗಿ ಹೇಳುತ್ತಿಲ್ಲ. ಮಾನ್ಯ ಮಂತ್ರಿಯವರೆ, ನಮ್ಮ ಗ್ರಾಮ, ನಮ್ಮ ರಸ್ತೆ ಯೋಜನೆಯನ್ನು ಕೊಟ್ಟಿದ್ದೀರಿ.

ಉಪಾಧ್ಯಕ್ಷರು:- ಮಾನ್ಯ ಜೀವರಾಜ್‌ರವರೆ, ತಾವು ಮಾತನಾಡುವಾಗ ಈ ವಿಷಯ ಮಾತನಾಡಿ.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಉಪಾಧ್ಯಕ್ಷರೆ, ಈಗ ಇವರು ಏನು ಹೇಳಿದರು. ಅದು 1 ಲಕ್ಷ ರೂ.ಗಳೋ, 1.5 ಲಕ್ಷವೋ, 2 ಲಕ್ಷ ರೂ.ಗಳೋ, ಅದಕ್ಕಿಂತ ಹೆಚ್ಚಾಗಿ estimateಗಳನ್ನು ನೋಡುತ್ತೀರಿ. ಆ formationಗೆ ಎಷ್ಟು ಲಕ್ಷ ರೂ.ಗಳನ್ನು ಇಟ್ಟಿರಿರುತ್ತಾರೆಂಬುದನ್ನು ನೋಡುತ್ತೀರಿ, ಒಂದು ಕಡೆ cost ಕಡಿಮೆ ಇದೆ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುವಾಗ ಒಂದೂವರೆ ಲಕ್ಷ ZP ರಸ್ತೆಗಳಿವೆ, ಅಂದರೆ ಅದು ಲಕ್ಷಗಟ್ಟಲೆ ಕಿ.ಮೀ.ಗಳು ಆಗಬಹುದು. ಒಂದು ಊರಿಗೆ ಎಂದರೆ ಒಂದು ರಸ್ತೆ, ಎರಡು ರಸ್ತೆಗಳು ಚೆನ್ನಾಗಿರುವುದು, ಅದು ZP maintenance ನಲ್ಲಿರುವುದು, ಉಳಿದಂಥದ್ದನ್ನು ಚಕ್ಕಡಿ ರಸ್ತೆಗಳನ್ನು ಮಾಡುವಂಥ ಪ್ರಯತ್ನಗಳು ಆಗಿರಲ್ಲಿಲ್ಲ, ಸಾಂದರ್ಭಿಕವಾಗಿ ಮಾನ್ಯ ವಿನಯ ಕುಲಕರ್ಣಿಯವರು ಮಾಡಿದರು, ನಾವು ಎಲ್ಲರೂ ಮಾಡಿದೆವು. ಇದಕ್ಕೆ ಸರ್ಕಾರದ patronize ಇಲ್ಲ, ಪಾಪ ಅವರು ಕೊಟ್ಟಿದ್ದಾರೆಂದು ಅಲ್ಲ, ಆದರೆ ಇದು ಒಂದು ಒಳ್ಳೆಯ ಕಾರ್ಯಕ್ರಮವಾಗಿದ್ದು, formation ಆಯಿತು. ಆವರು ಹೇಳಿದ ಹಾಗೆ ಅದಕ್ಕೆ ಜಮೀನು ಬಿಟ್ಟು ಕೊಡುವುದೇ ಒಂದು ದೊಡ್ಡ ಕಷ್ಟದ ಕೆಲಸವಾಗಿತ್ತು. ಹಿಂದೆ ಯಾರೂ ಒಂದು ಅಡಿ ಜಾಗವನ್ನೂ ಬಿಟ್ಟು ಕೊಡುತ್ತಿರಲಿಲ್ಲ, road formation ಮಾಡುವುದಕ್ಕೆ ಒಂದು ದಾರಿ ಆಯಿತು. ಅದರ ಮೇಲೆ ಮುರಂ ಹಾಕಿ ಒಳ್ಳೆಯ ರಸ್ತೆಗಳನ್ನು ಮಾಡಿದ್ದಾರೆ. ಅದು ಪ್ರಶ್ನೆ ಅಲ್ಲ, road formation ಆಯಿತು, at least ಅಲ್ಲಿ ಹೋಗುವುದಕ್ಕೆ ಆಯಿತು. ಈ ಮಳೆಗಾಲ ಕಳೆದ ನಂತರ ಮುಂದೆ ಅದು ಸರ್ಕಾರದ ಮಟ್ಟದಲ್ಲಿ ಚಿಂತನೆಯಾಗುವುದು, ಮುರಂ ಕೊಡಬಹುದು, ಅದನ್ನು stabilize ಮಾಡಬಹುದು. ಅದರ ಬಗ್ಗೆಯೂ ಸ್ವಲ್ಪ ಚಿಂತನೆ ಮಾಡಬಹುದು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಗ್ರಾಮ, ನಮ್ಮ ರಸ್ತೆ ಕಾರ್ಯಕ್ರಮವನ್ನು ಏನು ತಂದಿದ್ದಾರೆ, ಇದು ಒಳ್ಳೆಯ concept ಆಗಿದೆ. ಈ ವಿಷಯವಾಗಿ ಮಾನ್ಯ ಶಿವಲಿಂಗೇಗೌಡರು ಮತ್ತು ಮಾನ್ಯ ಯಾವಗಲ್‌ರವರು ಹೇಳಿದ ಹಾಗೆ ರೈತರೇ voluntary ಆಗಿ ಕೆಲಸ ಮಾಡುವುದಕ್ಕೆ ಬರುತ್ತಿದ್ದಾರೆ, ಏಕೆಂದರೆ ಅದು ಚಕ್ಕಡಿ ರಸ್ತೆಯಾಗಿದೆ. ಚಕ್ಕಡಿ ರಸ್ತೆ ಎಂದರೆ, ನಮ್ಮ ರೆವಿನ್ಯೂ ಪ್ರಕಾರ ಅದು 33 ಅಡಿ ಇರುತ್ತದೆ. ಈ 33 ಅಡಿ ರಸ್ತೆಯನ್ನು ಮಾಡುವುದಕ್ಕೆ ಅವರೇ ಸ್ವತಃ ಸ್ವಇಚ್ಛೆಯಿಂದ ಸಹಕಾರ ಕೊಡುತ್ತಿದ್ದಾರೆ, ಅದಕ್ಕೆ government estimate ಮಾಡುವುದಕ್ಕೆ ಹೋದರೆ, ತಾವು ಹೇಳಿದ ಹಾಗೆ mud roadಗೆ 5 ಲಕ್ಷ ರೂ.ಗಳು ಬೇಕು. ನಾವು ಹಿಟಾಚಿ ಮತ್ತು ಡೋಜರ್ ಹಚ್ಚುವುದರಿಂದ 75 ಸಾವಿರ ರೂ.ಗಳಲ್ಲಿ ಆಗುತ್ತದೆ, ಇದಕ್ಕೆ ಒಂದು ಲಕ್ಷ ರೂ.ಗಳು ಆಗುವುದಿಲ್ಲ. ಇದನ್ನು ನಾವು ಮಾಡಿದ್ದೇವೆ. ನಾನು ಎಂ.ಎಲ್.ಎ. ಆಗುವುದಕ್ಕಿಂತ ಮೊದಲು ಕಂಟ್ರಾಕ್ಟರ್ ಆಗಿದ್ದೆ, ಮಾನ್ಯ ಶಿವಲಿಂಗೇಗೌಡರು ಸಹ ಕಂಟ್ರಾಕ್ಟರ್ ಆಗಿದ್ದರು. ಇದನ್ನು ಮಿಷನರಿಯಿಂದ ಮಾಡುವುದರಿಂದ ಬಹಳ ಬೇಗ ಆಗುತ್ತದೆ. ಆದರೆ ಕಾನೂನಿನಡಿಯಲ್ಲಿ ಅದಕ್ಕೆ ಒಪ್ಪುವುದಿಲ್ಲ, ಅದಕ್ಕೆ ಈಗ relax ಕೇಳುತ್ತಿದ್ದೇವೆ. ಗ್ರಾಮ ಪಂಚಾಯಿತಿಯಲ್ಲೂ ಕೂಡ ಇದೇ ರೀತಿ ಶಾಸಕರ ನೇತೃತ್ವದಲ್ಲಿ ನಿಗಾ ಇಟ್ಟರೆ ಇದಕ್ಕೆ ಲೇಬರ್‌ಗಳು ಬರುತ್ತಾರೆ. ಈಗ ರೈತರೆ voluntary ಆಗಿ ಬರುತ್ತಿದ್ದಾರೆ, ನಾವು ಏನು ಕೂಲಿ ಕೊಡುತ್ತಿಲ್ಲ. ಅವರು ನಮಗೆ ರಸ್ತೆ ಮಾಡಿ ಕೊಡಿ ಸಾಕೆಂದು ಹೇಳುತ್ತಾರೆ. ಏಕೆಂದರೆ, ಅವರು ಬೆಳೆದಂಥ ಬೆಳೆಯನ್ನು ತೆಗೆದುಕೊಂಡು ಹೋಗುವುದಕ್ಕೆ ರಸ್ತೆ ಇಲ್ಲ. ಈಗ ನಾವು ರಸ್ತೆ ಮಾಡುವುದರಿಂದ ಅವರು ಬಹಳ ಸಂತೋಷದಿಂದ ಅವರೇ ಸಹಕಾರ ಕೊಡುವುದರಿಂದ, ಇದು ಒಳ್ಳೆಯ ಯೋಜನೆಯಾಗಿದೆ. ಮತ್ತೆ ಉದ್ಯೋಗ ಖಾತ್ರಿಯಲ್ಲೂ ಸಹ ಸ್ವಲ್ಪ relax ಮಾಡಿದರೆ, ರಾಜ್ಯದಲ್ಲಿ ಬಹಳ ಒಳ್ಳೆಯ ರಸ್ತೆಗಳಾಗುತ್ತವೆ ಎಂಬುದನ್ನು ತಮಗೆ ಮನವರಿಕೆ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ಶಿವಲಿಂಗೇಗೌಡರೆ, ತಾವು ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಈಗ ಬಹಳ ಚರ್ಚೆಯಾಗಿದೆ, ಅರ್ಧ ಗಂಟೆ ಕಾಲ ಅವರೇ ಮಾತನಾಡಿದ್ದಾರೆ, ಅದನ್ನು ನಾನು ತಮಗೆ ಹೇಳಬೇಕಲ್ಲಾ. ನನಗೆ ಅರ್ಧ ಗಂಟೆ ಕಾಲ time extend ಮಾಡಬೇಕೆಂದು ಹೇಳಿದ್ದೇನೆ. ಎಲ್ಲಾ ಸದಸ್ಯರು ಪ್ರಮುಖವಾದಂಥ ವಿಚಾರವನ್ನು ಮಾತನಾಡಿದ್ದಾರೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಶಿವಲಿಂಗೇಗೌಡರೆ, ನಿಮಗೆ ಅರ್ಧ ಗಂಟೆ ಕಾಲ ಹೆಚ್ಚಿಗೆ ಕೊಡುವುದಾದರೆ, ನಾನು ಒಂದೇ ಒಂದು ನಿಮಿಷ ಹೇಳಿಬಿಡುತ್ತೇನೆ. ನಿಮಗೆ ಅವರು ಅರ್ಧ ಗಂಟೆ ಕಾಲ ಅವಕಾಶ ಕೊಡುತ್ತೇನೆಂದು ಹೇಳಿದ್ದಾರೆ.

ಉಪಾಧ್ಯಕ್ಷರು:- ಈಗಾಗಲೇ ಒಂದು ಗಂಟೆಯಾಗಿದೆ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಉಪಾಧ್ಯಕ್ಷರೆ, ತಾವು ಅವರು ಮಾತನಾಡಿದ ಮೇಲೆ ಮಾತನಾಡಲು ಹೇಳಿದ್ದೀರಿ, ಅದಕ್ಕೆ ನಾನು ಸುಮ್ಮನೆ ಕುಳಿತುಕೊಂಡೆ. ಈಗ ಮಾನ್ಯ ಶಿವಲಿಂಗೇಗೌಡರು yield ಆಗುತ್ತಾರೆ.

ಉಪಾಧ್ಯಕ್ಷರು:- ಆಯಿತು, ಹೇಳಿ.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಮಂತ್ರಿಯವರಿಗೆ ಹೇಳುವುದೇನೆಂದರೆ, ಈಗ ನಮ್ಮ ಗ್ರಾಮ, ನಮ್ಮ ರಸ್ತೆಯಲ್ಲಿ ನನ್ನ ಕ್ಷೇತ್ರದಲ್ಲಿ ತುಂಬಾ ರಸ್ತೆಗಳನ್ನು ಮಾಡಿದ್ದೀರಿ. ಎಲ್ಲಾ ರಸ್ತೆಗಳು ಸರಿ ಇದೆ, ಎರಡು ರಸ್ತೆಗಳಿಗೆ ಈ ಇಲಾಖೆಯವರು ಏನು ಮಾಡಿದ್ದಾರೋ, ಗೊತ್ತಿಲ್ಲ. ಅದಕ್ಕೆ ಜಲ್ಲಿ ಹಾಕಲಿಲ್ಲ, ಈ ರೀತಿ ಮಳೆ ಬರುವಂಥ ರಸ್ತೆಗಳಿಗೆ ಜಲ್ಲಿಯನ್ನು ಹಾಕದೇ, gravel casing ಮೇಲೆ powder ಹಾಕಿ, ಟಾರ್ ಹಾಕಿದರು. ನಾನು ಮಾತನಾಡುತ್ತಿರುವುದು ವಿಷಯಾಂತರವಾಯಿತು, ಆದರೂ ಮಾನ್ಯ ಮಂತ್ರಿಯವರು ಇದನ್ನು ಸ್ವಲ್ಪ ಗಮನಿಸಬೇಕು. ಈಗ ಊರಿನಿಂದ ಫೋನ್ ಏನು ಬರುತ್ತಿದೆಯೆಂದರೆ, ರಸ್ತೆ ಕೆಸರಾಗಿದೆ, ಮತ್ತೆ ಆಟೋ ರಸ್ತೆಯಲ್ಲಿ ಹೋಗುತ್ತಿಲ್ಲ. ಇವರ bill payment full ಆಗಿದೆ, ಈ ಎರಡು ರಸ್ತೆಗಳಲ್ಲಿ ಹೋಗುವ ಹಾಗೆ ಇಲ್ಲ. ನಾನು ಈ ವಿಷಯವನ್ನು ಆರ್.ಡಿ.ಪಿ.ಆರ್.

ಸಮಿತಿಯಲ್ಲೂ ಪ್ರಸ್ತಾಪ ಮಾಡಿದೆ. ತಾವು ಮಲೆನಾಡಿನಲ್ಲಿ ಇದನ್ನು ಏಕೆ ತೆಗೆದುಕೊಂಡಿದ್ದೀರೆಂಬುದು ನನಗೆ ಗೊತ್ತಿಲ್ಲ. ಇದನ್ನು ತೆಗೆದುಕೊಂಡ ಮೇಲೆ ಆ ರಸ್ತೆಗಳು complete ಆಗಲಿಲ್ಲ. ನಮ್ಮ ಗ್ರಾಮ, ನಮ್ಮ ರಸ್ತೆ ಕಾರ್ಯಕ್ರಮದಲ್ಲಿ ಇದನ್ನು ಮಾಡುವುದಕ್ಕಿಂತ ಮುಂಚೆ ಜನರು ಸಂತೃಪ್ತಿಯಿಂದ ಇದ್ದರು. ಈಗ ಜನರು ಬಹಳ ಸಂಕಷ್ಟದಲ್ಲಿದ್ದಾರೆ. ದಯಮಾಡಿ ಆ ಎರಡು ರಸ್ತೆಗಳನ್ನು ಹಳೆಯ styleನಲ್ಲಿ ಮಾಡಿಕೊಡದಿದ್ದರೆ ಜನರು ಸಂಕಷ್ಟಕ್ಕೆ ಸಿಲುಕುತ್ತಾರೆ. ಹಾಗಾಗಿ ದಯವಿಟ್ಟು ಆ ರಸ್ತೆಗಳನ್ನು ಮಾಡಿಕೊಡಬೇಕು. ತಮ್ಮ ಇಲಾಖೆಯ ಸೆಕ್ರೆಟರಿಯವರಿಗೂ, ಎಲ್ಲರಿಗೂ ಹೇಳಿದ್ದೇನೆ, ಆದರೆ ಅವರು ಮಾಡಲಿಲ್ಲ.

ಉಪಾಧ್ಯಕ್ಷ:- ಆಯಿತು, ಮಾನ್ಯ ಶಿವಲಿಂಗೇಗೌಡರೆ, ತಾವು yield ಆಗಬೇಡಿ. ತಾವು 15 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್:- ಈಗ ನಮ್ಮ ರಸ್ತೆ, ನಮ್ಮ ಗ್ರಾಮ ಬೇರೆ, ನಮ್ಮ ಹೊಲ ನಮ್ಮ ರಸ್ತೆ ಬೇರೆ ಕಾರ್ಯಕ್ರಮಗಳಾಗಿದೆ.

ಶ್ರೀ ಡಿ.ಎನ್. ಜೀವರಾಜ್:- ಅದಕ್ಕೆ ನಾನು ಸೇರಿಸಲಿಲ್ಲ, ಇದನ್ನು ಬೇರೆಯಾಗಿಯೇ ಹೇಳಿದೆ.

ಶ್ರೀ ಹೆಚ್.ಕೆ. ಪಾಟೀಲ್:- ನಮ್ಮ ಗ್ರಾಮ, ನಮ್ಮ ರಸ್ತೆಯೊಳಗೆ ತಾವು ಹೇಳಿದ ಹಾಗೆ ಆಗಿದ್ದರೆ, ಅದರಲ್ಲಿ ಎಲ್ಲೊ ಲೋಪವಾಗಿದೆ, ಅದನ್ನು ಯಾವ ಕಂಟ್ರಾಕ್ಟರ್ ಮಾಡಿದ್ದಾರೆ, ಆ ಕಂಟ್ರಾಕ್ಟರ್ ಪೂರ್ಣ ಮಾಡಿಲ್ಲವೆಂದು ಅರ್ಥ. ಆದ್ದರಿಂದ ಏನು specific ಆಗಿ ಆ ಎರಡು ರಸ್ತೆಗಳನ್ನು ಬರೆದು ಕಳುಹಿಸಿ.

ಶ್ರೀ ಡಿ.ಎನ್. ಜೀವರಾಜ್: ದಯವಿಟ್ಟು ತಾವು ಅರ್ಥ ಮಾಡಿ, ತಾವು ಕೊಟ್ಟಿರುವಂಥ scheme ಆ ರೀತಿ ಪೌಡರ್ ಹಾಕಿ ಮಾಡುವುದಕ್ಕೆ ಕೊಟ್ಟಿದ್ದೀರಿ. ತಾವು ಕಂಟ್ರಾಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳುವ ಆದೇಶ ಹಾಗೆ ಇದೆ. ಇದಕ್ಕೆ ಕಂಟ್ರಾಕ್ಟರ್ ಹೊಣೆಗಾರರಲ್ಲ. ನಿಮ್ಮ ಇಲಾಖೆಯೇ ಅದಕ್ಕೆ ಹೊಣೆಗಾರಿಕೆಯಾಗಿದೆ.

ಉಪಾಧ್ಯಕ್ಷರು:- ತಾವು ಏನು details ಇದೆ, ಅದನ್ನು ಮಂತ್ರಿಯವರಿಗೆ ಕೊಡಿ, ಅವರು ನೋಡುತ್ತಾರೆ. ಮಾನ್ಯ ಶಿವಲಿಂಗೇಗೌಡರೆ, ತಾವು ಚರ್ಚೆಯನ್ನು ಮುಂದುವರೆಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಇನ್ನು ಯಾರಿಗೆ yield ಆಗುವುದಿಲ್ಲ. ನಾನು ಮಾತನಾಡಿ ಮುಗಿಸುವವರೆಗೂ ಯಾರು ಮಧ್ಯೆ ಎದ್ದು ನಿಲ್ಲಬೇಡಿ.

ಉಪಾಧ್ಯಕ್ಷರು:- ಮಾನ್ಯ ಶಿವಲಿಂಗೇಗೌಡರೆ, ತಾವು ಒಂದೂವರೆ ಗಂಟೆಗೆ ಚರ್ಚೆ ಮುಗಿಸಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ನೋಡೋಣ, 10 ನಿಮಿಷ ಹೆಚ್ಚು ಕಡಿಮೆ ಮಾಡೋಣ. ಈಗ ಉದ್ಯೋಗ ಖಾತ್ರಿ ಯೋಜನೆಗೆ ನಿಮ್ಮ ಭಾಗದಲ್ಲಿ ಏನು ವಿಷಯವನ್ನು ಹೇಳಿದ್ದೀರಿ, ನಿಮ್ಮ ಭಾಗದಲ್ಲಿ ಎಲ್ಲಾ ಎರೆ ಹೊಲಗಳು, ನೀವೆಲ್ಲಾ ಜೆಸಿಬಿಯಲ್ಲಿ ತೆಗೆದರೆ, manual ನಲ್ಲಿ ಮಾಡಿದರೆ 100% ಮಿಷನರಿಯಲ್ಲಿ ಮಾಡಿದರೆ 25% ಖರ್ಚು ಆಗುತ್ತದೆ,

(ಈ ಹಂತದಲ್ಲಿ ಅಧ್ಯಕ್ಷರು ಸಭಾಧ್ಯಕ್ಷರ ಪೀಠವನ್ನಲಂಕರಿಸಿದರು)

ಮಿಷನರಿಯಲ್ಲಿ ಮಾಡಿದರೆ 75% ಉಳಿತಾಯವಾಗುತ್ತದೆ. ಆದ್ದರಿಂದ ನೀವೆಲ್ಲಾ ಲಾಭ ಬೇಡವೆಂದು ಮಾಡಿದರೆ, ಅದಕ್ಕೆ ಬರುವ ಖರ್ಚು 20% ಎಲ್ಲಿಗೆ ಹೋಗುತ್ತದೆಂಬುದು ನಿಮಗೆ ಗೊತ್ತಿದೆ, estimate cost ನಲ್ಲಿ 20% ಹೋಗುತ್ತದೆ. ಅದನ್ನು ನೀವು ಶಾಸಕರು ಮಾಡಿದರೆಂದು ಹೇಳಿ. ಮಾನ್ಯ ಅಧ್ಯಕ್ಷರೆ, ನಾನು 15-20 ನಿಮಿಷಗಳು ಮಾತನಾಡಿದ್ದೇನೆ. ಎಲ್ಲಾ ಬೇರೆ ಸದಸ್ಯರು ಮಾತನಾಡಿದ್ದಾರೆ, ನನ್ನ ಮೇಲೆ ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ.

ಅಧ್ಯಕ್ಷರು:- ಕೋಪ ಏಕೆ? ನಾವು ಏನು ಆಸ್ತಿ ಹಿಸ್ಸೆ ಮಾಡಿಕೊಂಡಿದ್ದೇವೆಯೇ? ಕೋಪ ಮಾಡಿಕೊಳ್ಳುವುದಕ್ಕೆ?

ಶ್ರೀ ಬಿ.ಬಿ. ನಿಂಗಯ್ಯ:- ತಾವು ಮಾತನಾಡುವುದಕ್ಕೆ ಅವರು ನೋಡಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ನೀವು ಎಲ್ಲಾ ಮಾಡಿರುವುದು, ಹೆಸರು ತೆಗೆದುಕೊಳ್ಳಬೇಕೆಂದರೆ ನಾವು ಮಾಡುತ್ತೇವೆ. 25,000 ರೂ.ಗಳು ಸೇರಿಸಿ, ಜೆ.ಸಿ.ಬಿ.ಯನ್ನು ಕಳುಹಿಸಿ ಹೊಡೆಸಿಕೊಳ್ಳಿ ಹೋಗಿ ಎಂದು ಬಿಡುತ್ತೇವೆ. ಅದರಲ್ಲಿ ಅವರು ಯಾರಿಗೂ ಕೊಡುವುದು ಬೇಡ. ಇಲ್ಲಿ ಒಂದು ಲಕ್ಷ ರೂ.ಗಳು estimate ಮಾಡಿದರೆ, ಕಂಟ್ರಾಕ್ಟರ್ ಕೈಗೆ 30,000 ರೂ.ಗಳು ಸಿಗುವುದು, 20,000 ರೂ.ಗಳು ಎಲ್ಲಿಗೆ ಹೋಗುತ್ತದೆಂಬುದು ಎಲ್ಲಾರಿಗೂ ಗೊತ್ತಿದೆ. ಇಲ್ಲಿ 20% ಎಲ್ಲಿಗೆ ಹೋಗುತ್ತದೆ, ಇನ್ನು ಬಾಕಿಯದು ಎಲ್ಲಾ ಎಲ್ಲಿಗೆ ಹೋಗುತ್ತದೆಂಬುದೆಲ್ಲಾ open secret ಆಗಿದೆ. ಈ ಕಂಟ್ರಾಕ್ಟರುಗಳು ಏನು ಮಾಡಿದ್ದಾರೆ ಎಂದರೆ ಯಾರಿಗೂ ದುಡ್ಡು ಕೊಡದ ಹಾಗೆ, ನಾವು ಸ್ವಂತ ಮಾಡುತ್ತಿದ್ದೇವೆ ಎಂದು ಹೇಳಿ ರಸ್ತೆ ಮಾಡಿದ್ದಾರೆ ನಮ್ಮ ಕೋನರೆಡ್ಡಿಯವರು ಮುಂತಾದವರೆಲ್ಲ ಆ ರೀತಿ ಮಾಡಿ ರಸ್ತೆ ಮಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳ ಸಹಾಯವೂ ಅವರಿಗೆ ಸಿಕ್ಕಿದೆ. ನಾಲ್ಕೈದು ಕೋಟಿಯನ್ನು ಕೋನರಡ್ಡಿಯವರಿಗೆ ಕೊಟ್ಟಿದ್ದಾರೆ, ಅವರು ಎಲ್ಲ ರಸ್ತೆಗಳನ್ನೂ ಮಾಡಿಸಿದ್ದಾರೆ. ಮಾಡಿಸಲಿ ನಮಗೂ ಹಾಗೆ ಕೊಟ್ಟರೆ ಬಹಳ ಒಳ್ಳೆಯದು. N.R.E.G.Aನಲ್ಲಿ ಬೇಕಾದಷ್ಟು ದುಡ್ಡು ಬರುವಾಗ, ನೀವು ನಿಯಮಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರ ಎಂದು ಹೇಳಿ ನೀವು ಎಲ್ಲವನ್ನೂ ಕೇಂದ್ರ ಸರ್ಕಾರದ ಮೇಲೆ ಹಾಕುತ್ತೀರಿ. ಕೇಂದ್ರ ಸರ್ಕಾರ ನಿಮಗೆ ಹಣ ಬಿಡುಗಡೆ ಮಾಡುತ್ತದೆಯೇ ಹೊರತು execution ಮಾಡುವಂಥ ಅಧಿಕಾರವನ್ನು ನಿಮಗೇ ಕೊಟ್ಟಿದೆ. ಅವರ ಕೆಲವು guidelines ಇವೆ.

ಅಧ್ಯಕ್ಷರು:- ಅಲ್ಲಿ ಕೆಲವು guidelines ಇವೆ.

ಶ್ರೀ ಕೆ.ಎಂ ಶಿವಲಿಂಗೇಗೌಡ:- ಇವೆ, ಆದರೆ ಆ guidelines ಪ್ರಕಾರ ಯಾರೂ ಮಾಡುವುದಿಲ್ಲ.

ಅಧ್ಯಕ್ಷರು:- Guidelines ಕೊಟ್ಟಿದ್ದಾರೆ. ಆ guidelines ಪ್ರಕಾರ ಇವರು ಮಾಡಬೇಕಾಗುತ್ತದೆ. ಅದು ಜನರಿಗೆ ಕೊಟ್ಟಂಥ ದುಡಿಯುವ ಹಕ್ಕು. ಆ ಹಕ್ಕನ್ನು ಒದಗಿಸಿ ಕೊಡಬೇಕಾದುದು ನಮ್ಮ ಮೊದಲ ಧ್ಯೇಯವಾಗಬೇಕು. ನೀವು ಆಗಿನಿಂದ ಹೇಳುತ್ತಿದ್ದುದನ್ನು ಕೇಳುತ್ತಿದ್ದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನಾನು ಒಂದು ಉದಾಹರಣೆ ಕೊಡುತ್ತೇನೆ. ಒಂದು ಜಲ್ಲಿ ರಸ್ತೆ ಮಾಡಬೇಕು. ಅದಕ್ಕೆ ಬೇಕಾದ ಜಲ್ಲಿಯನ್ನು ಚಚ್ಚುವರು ಯಾರು? ಅವರು ಕಾರ್ಮಿಕರಲ್ಲವೇ? ಅವರಿಗೆ ಕೂಲಿ ಕೊಡಿ. Crusher concept ಬಿಟ್ಟುಬಿಡಿ.

ಅಧ್ಯಕ್ಷರು: Skilled labourಗೆ ಬೇರೆ rate ಇದೆ. ಜಲ್ಲಿ ಹೊಡೆಯುವವನು skilled labour. ಅವನಿಗೇ ಬೇರೆ ರೇಟ್ ಇದೆ. ಗಾರೆ ಕೆಲಸ ಮಾಡುವವನಿಗೇ ಬೇರೆ ರೇಟ್ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅವನಿಗೇ ಬೇರೆ ಬೇರೆ ರೇಟ್ ಕೊಡಿ. ಹಾಗೆ ಬೇರೆ ರೀತಿಯಲ್ಲಿ ಮಾಡಿ ನಾವು ಕೆಲವು ಕೆಲಸವನ್ನು ಮಾಡಿಸಿದ್ದೇವೆ. 80% material oriented ಕೆಲಸವನ್ನು ಮಾಡಬಹುದು. 20% labour oriented ಎಂದು ಆದರೆ ಒಳ್ಳೆಯ ಕೆಲಸಗಳಾಗುತ್ತವೆ ಎನ್ನುವುದು ನನ್ನ ಅಭಿಮತ.

ಅಧ್ಯಕ್ಷರು:- ಇದು ನನಗೂ ಅನುಭವವಿದೆ, ನನಗೂ ಗೊತ್ತಿದೆ. ನೀವು ಹೇಳಿದ್ದು ಸರಿ. Material cost 40% ಎಂದು ಇರುವುದನ್ನು, ಕೆಲವು ಕೆಲಸಗಳಿಗೆ 80% ಎಂದು ಮಾಡಿದರೆ ಒಳ್ಳೆಯ ಕೆಲಸವಾಗುತ್ತದೆ, ಇಲ್ಲವೆಂದಲ್ಲ. ಅದಕ್ಕೆ ಸರ್ಕಾರದವರು ಆ ಹೆಚ್ಚುವರಿ Material cost ಅನ್ನು ಕೊಡುವಂಥ ಪ್ರಯತ್ನ ಮಾಡಬೇಕು. ನಾನು ಹೇಳುತ್ತೇನೆ ಕೇಳಿ, ಆ ಕಾರ್ಯಕ್ರಮದ ಬಗ್ಗೆ ನನಗೆ ವಿಶಿಷ್ಟವಾದ ಆಸಕ್ತಿಯಿದೆ. ಈ ದೇಶದಲ್ಲಿ ಮೊದಲ ಬಾರಿಗೆ ದುಡಿಯುವ ಹಕ್ಕು ಬಂದಿದೆ. ಆ ದುಡಿಯುವ ಹಕ್ಕನ್ನು ಬಳಸಿಕೊಳ್ಳುವಂಥ ಕೆಲಸವನ್ನು ನಾವು ಇವತ್ತು ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಈಗ ಸುಮಾರು ಐವತ್ತು ಲಕ್ಷಕ್ಕೂ ಹೆಚ್ಚು job cardಗಳಿವೆ. ಅದರ ಪ್ರಕಾರ ನಾವು

50% ಬಳಸಿಕೊಂಡರೂ ಕೂಡ ನಮ್ಮ ರಾಜ್ಯದಲ್ಲಿ ಕನಿಷ್ಠ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ನಮ್ಮ ಹಣಬರಹಕ್ಕೆ ನಾವು ಇನ್ನೂ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಬಳಸಿಕೊಳ್ಳಲು ಆಗಿಲ್ಲ. ಅದನ್ನು ಬಳಸಿಕೊಳ್ಳತಕ್ಕಂಥ ಬುದ್ಧಿವಂತಿಕೆಯನ್ನು ನಾವು ಮಾಡಿ, ಹೆಚ್ಚು ಹಣವನ್ನು ಬಳಸಿಕೊಳ್ಳುವಂಥ ಕೆಲಸ ಮಾಡಬೇಕು. ನಮ್ಮಲ್ಲಿ ಬುದ್ಧಿವಂತರು ಕೆಲವರಿದ್ದಾರೆ. ಅವರು ಇದನ್ನು ಮಾಡದೇ, ಈ ಕಡೆ ಮುಖ ತೋರಿಸಿಕೊಂಡು, ಇಲ್ಲ, ನಾವೆಲ್ಲ ಜಮೀನು ಮಾರುವುದೇ ಸೈ ಎಂದು ಹೇಳುತ್ತಾರೆ. ಆದರೆ ನಮ್ಮ ಊರಿನಲ್ಲಿ ಜನರು ಕೆಲಸಕ್ಕೆ ಬರುತ್ತೇವೆ, ಕೆಲಸ ಕೊಡಿ ಎಂದು ಕುಳಿತಿದ್ದಾರೆ. ನಮ್ಮ ಖರ್ಗೆಯವರ ಮನೆಯವರು, ಆ ತಾಯಿ ಏನು ಹೇಳುತ್ತಾರೆ ಕೇಳಿ. ನಾವೆಲ್ಲ ಜಮೀನು ಮಾರುವುದೇ ಸೈ ಎನ್ನುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕೆಲವು ಭಾಗದಲ್ಲಿ ಲೇಬರ್ ಜಾಸ್ತಿ ಇದ್ದಾಗ ಅದು ಆಗಬಹುದು. ಆದರೆ ನಮ್ಮಲ್ಲಿ ಲೇಬರ್ಸ್ ಜಾಸ್ತಿ ಸಿಗುವುದಿಲ್ಲ. ನಮ್ಮಲ್ಲಿ ಸಾವಿರ ತೆಂಗಿನಗಿಡ ಇರುವವರನ್ನೂ ಲೇಬರ್ ಎಂದು ಮಾಡಿಕೊಂಡು ಅವರಿಗೂ job card ಮಾಡಿಕೊಟ್ಟಿದ್ದಾರೆ.

ಅಧ್ಯಕ್ಷರು:- ನೀವು ಆಗಲೇ ಹೇಳಿದುದನ್ನು ಕೇಳಿದೆ, ರೈತ ಕೂಲಿಗಾರರನ್ನು ಸೈಕಲ್ ಮೇಲೆ ಕೂರಿಸಿಕೊಂಡು ಬರಬೇಕು, ಅವನಿಗೆ ಕೆಲಸ ಕೊಡಬೇಕು, ಕೆಲಸವಾದ ನಂತರ ಬಿಟ್ಟು ಬರಬೇಕು ಎಂದೆಲ್ಲ ಹೇಳಿದ್ದೀರಿ. ವರ್ಷದಲ್ಲಿರುವ 365 ದಿವಸಗಳಲ್ಲಿ ಎಷ್ಟು ದಿವಸ ಈ ರೀತಿ ಕೆಲಸ ಕೊಡುತ್ತೀರಿ? ಒಬ್ಬ ಕೂಲಿಕಾರನಿಗೆ ವರ್ಷದಲ್ಲಿ ಎಷ್ಟು ದಿವಸ ಕೆಲಸ ಕೊಡುತ್ತೀರಿ?

ಶ್ರೀ ಕೆ.ಎಂ. ಶಿವಲಿಂಗೇಗೌಡ:- ವರ್ಷ ಪೂರ್ತಿಯಲ್ಲ, ಅವರು ವಾರದಲ್ಲಿ ಎರಡೇ ದಿವಸ ಕೆಲಸ ಮಾಡುವುದು. ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಇರುವ ಕೆಲವು ನಿಯಮಗಳನ್ನು ಸಡಿಲಿಸಿ, permanent structure, asset create ಆಗುವಂಥ ಯೋಜನೆಗಳಿಗೆ ಅವಕಾಶ

ಮಾಡಿಕೊಡಬೇಕು ಎನ್ನುವುದು ಮೂಲ ನನ್ನ ಉದ್ದೇಶ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು, ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಕುಡಿಯುವ ಶುದ್ಧ ನೀರಿನ ಘಟಕವನ್ನು ನೀವು ಪ್ರಾರಂಭ ಮಾಡಿದಿರಿ. ಇದು ನಮ್ಮ ಭಾಗಗಳಂಥ ಪ್ರದೇಶಗಳಿಗೆ ಒಳ್ಳೆಯ ಯೋಜನೆ. ಈ ಯೋಜನೆ ಎಲ್ಲೋ ಒಂದು ಕಡೆ ದಿಕ್ಕು ತಪ್ಪುತ್ತಿದೆ ಎಂದು ಕಾಣುತ್ತಿದೆ, ಇದನ್ನು ಮೊದಲು ಒಂದು ಕಂಪನಿಯವರಿಗೆ ಟೆಂಡರ್ ಕೊಟ್ಟಿರಿ. ಅವರು ಅದನ್ನು ಉಪಯೋಗಿಸಿಕೊಂಡು ಕೆಲವು ಕಡೆಗಳಲ್ಲಿ 2 ರೂಪಾಯಿಗೆ 20 ಲೀಟರ್‌ಗಳ ಒಂದು ಕ್ಯಾನ್ ನೀರನ್ನು ಕೊಡುತ್ತಾರೆ. ಎರಡನೇ ರೌಂಡ್‌ನಲ್ಲಿ ನೀವು ಕೆಲವು ಕಡೆ ಇದನ್ನು ಗ್ರಾಮ ಪಂಚಾಯಿತಿಯವರಿಗೆ ಬಿಟ್ಟುಬಿಟ್ಟಿರಿ. ನಾನು ತೆಗೆದುಕೊಳ್ಳುತ್ತೇನೆ, ನಾನು ತೆಗೆದುಕೊಳ್ಳುತ್ತೇನೆ ಎಂದು ಗ್ರಾಮಪಂಚಾಯಿತಿಯವರು ತಮ್ಮತಮ್ಮಲ್ಲೇ ಹೊಡೆದಾಡಿಕೊಂಡು ಅದಕ್ಕೆ ಬಾಗಿಲು ಹಾಕಿದರು. ಎರಡನೇ ಸಲ ಕೊಟ್ಟ ಟೆಂಡರ್‌ನಲ್ಲಿ, land army ಯವರು structure ಮಾಡುವುದು, ಇನ್ನೊಬ್ಬರು machine ತಂದು ಇಡುವುದು, ಇನ್ನೊಬ್ಬರು motor ತಂದು ಇಡುವುದು ಎಂದು ಇತ್ತು. ಇವು ಸಂಪೂರ್ಣವಾಗಿ ವಿಫಲವಾಗಿವೆ. ಎರಡು ವರ್ಷವಾದರೂ ಇವತ್ತಿನವರೆಗೂ motor ಬಂದಿಲ್ಲ, ಅವನೂ ಬಂದಿಲ್ಲ, ಇವನೂ ಬಂದಿಲ್ಲ ಎಂದು ಆಗಿ ಇದು ಸಂಪೂರ್ಣವಾಗಿ ವಿಫಲವಾಗಿದೆ. ಅದರ ಬಗ್ಗೆಯೂ ಗಮನ ಹರಿಸಿ, ಏನಾಗಿದೆ ಎಂದು ನೋಡಿ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು, ಯಾವ ಪ್ರದೇಶದಲ್ಲಿ ನೀರಿನಲ್ಲಿ fluoride ಅಂಶ ಹೆಚ್ಚಿದೆಯೋ ಅಲ್ಲಿ ಸ್ಥಾಪಿಸಬೇಕು. ನದಿ ಮೂಲದ ನೀರನ್ನು ಕುಡಿಯುವವರಿಗೆ ಇದನ್ನು ಕೊಡಬೇಡಿ. ನದಿ ಮೂಲದ ನೀರಿನಲ್ಲಿ fluoride ಇರುವುದಿಲ್ಲ.

ಶ್ರೀ ಜೆ.ಟಿ. ಪಾಟೀಲ್:- ಶಿವಲಿಂಗೇಗೌಡರೇ, ಒಂದು ನಿಮಿಷ, ನದೀ ಮೂಲದವರಿಗೆ ಕೊಡಬೇಡಿ ಎಂದು ಹೇಳಿದಿರಲ್ಲ, ಅದು ಸಂಪೂರ್ಣವಾಗಿ ತಪ್ಪಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನದೀ ಮೂಲ ಎಂದರೆ ನದಿಯಿಂದ ಲಿಫ್ಟ್ ಮಾಡಿ ಕೊಡುವವರಿಗೆ ಎಂದು ಹೇಳಿದೆ.

ಶ್ರೀ ಜೆ.ಟಿ. ಪಾಟೀಲ್:- ತಪ್ಪು ಸಂದೇಶ ಹೋಗಬಾರದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನದಿಯಿಂದ ನೀರು ಕುಡಿಯುವವರಿಗೆ ಕೊಡಬೇಡಿ ಎಂದು ನಾನು ಹೇಳಿದ್ದು, ನದಿಯಿಂದ ನೀರನ್ನು ಪಂಪ್ ಮಾಡಿ ಕೊಟ್ಟರೆ ಅದನ್ನೂ ಫಿಲ್ಟರ್ ಮಾಡಿ ಕೊಡಬೇಕೇ?

ಶ್ರೀ ಜೆ.ಟಿ. ಪಾಟೀಲ್:- ನೀವು ಹೇಳುತ್ತಿರುವುದು ಸರಿಯಲ್ಲ.

ಅಧ್ಯಕ್ಷರು: ಅವರು ಚರ್ಚೆ ಪೂರೈಸಲಿ ಬಿಡಿ. ನಿಮ್ಮ ಅಭಿಪ್ರಾಯವಿದ್ದರೆ ನೀವು ನಂತರ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನದಿ ಮೂಲದ ನೀರನ್ನು ನಿಮಗೆ ಫಿಲ್ಟರ್ ಮಾಡಿಯೇ ಕೊಡುತ್ತಾರಲ್ಲವೇ? ಅದನ್ನು ಹಾಗೆಯೇ ಕೊಡುತ್ತಾರೆಯೇ? ಆಯಿತು, ನಮಗೇನಾಗಬೇಕು, ಎಲ್ಲರಿಗೂ ಕೊಡಿ, ಫ್ಲೋರೈಡ್‌ಯುಕ್ತ ನೀರನ್ನು ಕುಡಿದು ನಾವು ಮೊಣಕಾಲು, ಕೈ ಕಾಲುಗಳನ್ನೆಲ್ಲ ಕಳೆದುಕೊಂಡಿದ್ದೇವೆ, ನೀವು ನದೀ ನೀರನ್ನಾದರೂ ಕುಡಿಯುತ್ತೀರಿ ಎಂದರೆ ನೀವು ಅದಕ್ಕೂ ಮಾತನಾಡುತ್ತೀರಿ.

ಶ್ರೀ ರಮೇಶ್ ಬಂಡಿಸಿದ್ದೇಗೌಡ:- ಪೇಪರ್‌ಗಳಲ್ಲಿ, ಟಿ.ವಿ ಗಳಲ್ಲೆಲ್ಲ ತಾವು ನೋಡುತ್ತಿದ್ದೀರಿ, ಎಲ್ಲ ರೀತಿಯ ನೀರೂ ಕಾವೇರಿ ನೀರಿನಲ್ಲಿಯೇ ಇದೆ. ನಾವು ಕುಡಿಯುತ್ತಿರುವ ನೀರು ಯಾವುದೆಂದು ಕೇಳಿಬಿಟ್ಟರೆ ನೀವು ಕುಡಿಯುತ್ತಿರುವ ನೀರೇ ಚೆನ್ನಾಗಿದೆ ಎಂದು ಕಾಣಿಸುತ್ತದೆ. ಅಷ್ಟೊಂದು ಕೆಟ್ಟ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಅಧ್ಯಕ್ಷರು:- ಎಲ್ಲರಿಗೂ ಗೊತ್ತಿರುವುದೇ ಬಿಡಿ.

ಶ್ರೀ . ಕೆ.ಎಂ. ಶಿವಲಿಂಗೇಗೌಡ:- ಆಯಿತು, ನೀವೂ ಫಿಲ್ಟರ್ ಮಾಡಿಸಿಕೊಳ್ಳಿ, ಶುದ್ಧ ನೀರಿನ ಘಟಕದ ಒಂದು ಯೂನಿಟ್‌ಗೆ ಐದು ಲಕ್ಷ ರೂಪಾಯಿ ಎಂದು ನೀವು ಫಿಕ್ಸ್ ಮಾಡಿದ್ದೀರಿ, ಐದು ಲಕ್ಷ ರೂಪಾಯಿಗಳಲ್ಲಿ ಘಟಕವನ್ನು ಸ್ಥಾಪಿಸಲು ಧರ್ಮಸ್ಥಳದ ಸಂಸ್ಥೆಯವರು ಮುಂದೆ ಬಂದಿದ್ದಾರೆ. ಇವರು ನನ್ನ ಕ್ಷೇತ್ರದಲ್ಲಿ ಇಪ್ಪತ್ತು ಕಡೆ ನೀರನ್ನು ವಿತರಣೆ ಮಾಡುತ್ತಿದ್ದಾರೆ. ನೀವು 5 ಲಕ್ಷ ರೂಪಾಯಿಗಳನ್ನು ಅವರಿಗೆ ಕೊಟ್ಟು ಕೆಲಸವನ್ನು ವಹಿಸಿದರೆ ಅವರು ಪೂರ್ಣ ಪ್ರಮಾಣದಲ್ಲಿ ಘಟಕವನ್ನು ಪ್ರಾರಂಭಿಸುತ್ತಾರೆ. ಅದಕ್ಕೆ ಬೋರ್‌ವೆಲ್ ನೀರಿನ ಅಥವಾ ಬೇರೆ ನೀರಿನ ಸಪ್ಲೈಯನ್ನು ನಾವು ಕೊಡಬೇಕು. ಕಟ್ಟಡ ಇಲ್ಲದಿದ್ದರೆ, ಕಟ್ಟಡ ಕೊಡಬೇಕು. 5 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಈಗ ಸಾಮಾನ್ಯವಾದ ಒಂದು ಷೆಡ್ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. 5 ಲಕ್ಷ ರೂಪಾಯಿಗಳು ಸಾಲದಿದ್ದರೆ ಇನ್ನೂ ಒಂದೆರಡು ಲಕ್ಷ ರೂಪಾಯಿಗಳನ್ನು ಕೊಟ್ಟು ಅವರನ್ನು ಕರೆದು ಮಾತನಾಡಿ, ಈಗ ಕೆಲವು ಜಿಲ್ಲೆಗಳಲ್ಲಿ ಘಟಕಗಳನ್ನು ಮಾಡಿರುವ ಧರ್ಮಸ್ಥಳ ಸಂಸ್ಥೆ ಅವರಿಗೆ ವಹಿಸಿದರೆ ಅವರು ಸಮಯಕ್ಕೆ ಸರಿಯಾಗಿ ನೀರು ಕೊಡುತ್ತಾರೆ. ಅಲ್ಲಿ ಯಾವ ರಾಜಕೀಯವೂ ನಡೆಯುವುದಿಲ್ಲ. ಆದ್ದರಿಂದ ಇದನ್ನು ಧರ್ಮಸ್ಥಳದ ಸಂಸ್ಥೆಯವರಿಗೆ ಕೊಡುವುದು ಸೂಕ್ತ ಈಗ ನಮಗೆ ಕೊಟ್ಟಿರುವಂಥ ಘಟಕಗಳನ್ನು ಈ ಸಾರಿಯೇ ಧರ್ಮಸ್ಥಳ ಸಂಸ್ಥೆಯವರಿಗೆ ವಹಿಸುವಂಥ ಕೆಲಸವನ್ನು ಮಾಡಬೇಕು. ಅವರನ್ನು ಕರೆದು ನೀವು ರಾಜ್ಯ ಮಟ್ಟದಲ್ಲಾದರೂ ಮಾತನಾಡಿ ಅಥವಾ C.E.O. ಮಟ್ಟದಲ್ಲಾದರೂ ಮಾತನಾಡಿ. ಈ ಶುದ್ಧ ನೀರಿನ ಘಟಕಗಳನ್ನು ಅವರಿಗೆ ಕೊಡತಕ್ಕಂಥ ಕೆಲಸ ಆಗಬೇಕು ಎಂದು ಹೇಳುತ್ತೇನೆ.

ಇನ್ನು, ನದಿ ಮೂಲದ ನೀರಿನ ಲಭ್ಯತೆ ಇಲ್ಲದಿರುವ ಗ್ರಾಮಗಳಿಗೆ ನೀರನ್ನು ಕೊಡಬೇಕೆಂದು ನೀವು ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಮಾಡಿದ್ದೀರಿ. ಅದು ಬಹಳ ನಿಧಾನಗತಿಯಲ್ಲಿ ಸಾಗುತ್ತಿದೆ. ಅದಕ್ಕೆ ನಾನು ಇದೇ ಸದನದಲ್ಲಿ ಕಣ್ಣೀರು ಹಾಕಬೇಕಾದಂಥ ಪರಿಸ್ಥಿತಿ ಬಂತು. ಅದಕ್ಕೆ ನಾವು ಸುಮಾರು ಮೂರು ವರ್ಷಗಳ ಕಾಲ ಕಾದು

ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಬಂತು. ನಿಮ್ಮಂಥ ಹಿರಿಯ ಸಚಿವರು, ದಕ್ಷರು ಈ ಇಲಾಖೆಯ ಸಚಿವರಾಗಿರುವುದರಿಂದ ನೀವು ಇಂಥ ಯೋಜನೆಗಳಲ್ಲಿರುವ ಕೆಲವು ತೊಂದರೆಗಳನ್ನು ನಿವಾರಣೆ ಮಾಡಿ, ಆದಷ್ಟು ಬೇಗ ನದೀ ಮೂಲದ ನೀರನ್ನು ನಮ್ಮ ಕೆಲವು ತಾಲ್ಲೂಕುಗಳಿಗೆ ನೀವು ಕೊಡದೇ ಹೋದರೆ ನಾವು ಫ್ಲೋರೈಡ್‌ನಿಂದ ಮುಕ್ತರಾಗುವುದಕ್ಕೆ ಆಗುವುದಿಲ್ಲ. ದಯಮಾಡಿ ನೀವು ಇದನ್ನು assess ಮಾಡಿಸಿ, ಒಂದು ಸರ್ವೆ ಮಾಡಿಸಿ. ನಮ್ಮ ಭಾಗದ ಈ ಯೋಜನೆಗೆ 45 ದಿವಸ ಸಮಯ ಕೊಟ್ಟು ಈಗ ಟೆಂಡರ್ ಕರೆದಿದ್ದಾರೆ. ಆದರೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ concept ಏನಿದೆ, ಇದು ಎಲ್ಲೋ ಒಂದು ಕಡೆ ಎಡವುತ್ತಾ, ಕುಂಟುತ್ತಾ ಸಾಗುತ್ತಿದೆ. ಇದಕ್ಕೇನಾದರೂ ಹಣಕಾಸಿನ ತೊಂದರೆಯಿದೆಯೇ? ಹಿಂದೆ ಕೇಂದ್ರ ಸರ್ಕಾರದವರು ಇದಕ್ಕೆ ದೊಡ್ಡ ಪ್ರಮಾಣದಲ್ಲಿ ಹಣ ಕೊಡುತ್ತಿದ್ದರು. ಈಗ ಈ ಯೋಜನೆಗೆ ಕೇಂದ್ರ ಸರ್ಕಾರದ ಅನುದಾನ ಕಡಿಮೆಯಾಗಿದೆ ಎನ್ನುವುದನ್ನು ನಾವು ಕೇಳಿದ್ದೇವೆ. ಅದನ್ನು ಹೊರತುಪಡಿಸಿ ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ಅತಿ ಜರೂರಾಗಿ ತರಬೇಕು. ಯಗಚಿಯಿಂದ ನಮ್ಮ ಹೋಬಳಿಯ ಒಂದು ಭಾಗದಲ್ಲಿ ನೀರು ಕೊಟ್ಟಿದ್ದೀರಿ. ಅವುಗಳ maintenance ಇಲ್ಲ. ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ನೀವು ಮಾಡಿ ಅವುಗಳನ್ನು ಹಾಗೆಯೇ ಬಿಟ್ಟುಬಿಟ್ಟರೆ ಹೇಗೆ? ಯಾರ್‍ಯಾರಿಗೆ ಬೇಕೋ ಅವರು ಎಳೆದುಕೊಂಡು ಹೋಗಿದ್ದಾರೆ. ನಮ್ಮ ಸಿ.ಟಿ. ರವಿಯವರು ಒಂದನ್ನು ಎಳೆದುಕೊಂಡು ಹೋಗಿದ್ದಾರೆ, ಅವರದ್ದು approval ಆಗಿಲ್ಲ. ನಮ್ಮ ಕ್ಷೇತ್ರಕ್ಕೆ ನೀರೇ ಇಲ್ಲ ಅವರು ಪಾಪ ಒಂದು ಊರಿಗೆ ಎಳೆದುಕೊಂಡು ಹೋಗಿದ್ದಾರೆ. ಕುಡಿಯುವ ನೀರಿಗೆ ಎಳೆದುಕೊಂಡು ಹೋಗಲಿ, ನಾನೇನೂ ತಕರಾರು ಮಾಡುವುದಿಲ್ಲ. ಆದರೆ, ಈ ರೀತಿ ನಮ್ಮಲ್ಲಿ dead end ಗೆ ಇನ್ನೂ ನೀರು ಕೊಟ್ಟಿಲ್ಲ. ಸಿಗುವುದೇ 8 ಊರಿಗೆ, ಅಲ್ಲಿಗೂ ಇಲ್ಲಿಯವರಿಗೆ ಯಗಚಿ ನೀರನ್ನು ಕೊಟ್ಟಿಲ್ಲ. ನಮ್ಮ ಕ್ಷೇತ್ರದಲ್ಲಿ 16 ಗ್ರಾಮಕ್ಕೆ ಆ ನೀರು ಸಿಗುವಂಥದ್ದು ಇವತ್ತಿನವರೆಗೂ ಆ dead end ಗೆ ನೀರು ಹರಿಸುವುದಕ್ಕೆ ಆಗಿಲ್ಲ. ಕೇಳಿದರೆ ಆ ಇಂಜಿನಿಯರುಗಳು

maintenance ಇಲ್ಲ ಎಂದು ಹೇಳುತ್ತಾರೆ, ಆ contractor ನದು ಇನ್ನೂ final ಮಾಡಿಲ್ಲವೆನ್ನುತ್ತಾರೆ. ಈ ರೀತಿ ಈ ಯೋಜನೆಗೆ ನೀವು ಏನು division ಮಾಡಿ sub-division open ಮಾಡಿದಿರಿ, ಅವರಿಗೆ ನಿರ್ವಹಣೆ ಕೊಟ್ಟು ಅವರು ಅದನ್ನು ಕಾರ್ಯಗತ ಮಾಡತಕ್ಕಂಥದ್ದನ್ನು ಎಲ್ಲಾ ಗ್ರಾಮಗಳಿಗೆ ನೀರು ಹೋಗತಕ್ಕಂಥದ್ದನ್ನು ನೋಡಿಕೊಳ್ಳುವಂಥದ್ದಕ್ಕೆ ಅವರಿಗೆ demand ಮಾಡಬೇಕು, ಅವರು ಮಾಡುತ್ತಿಲ್ಲ, ಕೇಳಿದರೆ ನಮ್ಮ ಹತ್ತಿರ stock ಇಲ್ಲವೆಂದು ಹೇಳುತ್ತಾರೆ. ದಯವಿಟ್ಟು ಈ ಬಹುಗ್ರಾಮ ಯೋಜನೆಯಡಿಯಲ್ಲಿರತಕ್ಕಂಥ ವ್ಯತ್ಯಾಸವನ್ನು ಸರಿಪಡಿಸಬೇಕು. ನಮಗಂತೂ ನೀರಿಲ್ಲ. ನೀವು ಏನೇ ಆದರೂ ನದಿ ಮೂಲದಿಂದಲೇ ನೀರು ಕೊಟ್ಟರೆ ನಾವು ಬದುಕುವುದು. ಈಗ ಮಾಡಿದ್ದೀರಿ, ಆಗಿದೆ, tender ಕರೆದಿದ್ದಾರೆ. ನಿಮ್ಮ statement ನೋಡಿದೆ. ಯಾವುದೂ ಕಾರ್ಯಗತವಾಗಿಲ್ಲ. ಎಲ್ಲವೂ ಅರ್ಧಕ್ಕೆ ನಿಂತಿವೆ. ಆಗಿರುವುದಕ್ಕೆ ನೀರು ಕೊಡುವುದಕ್ಕೆ ಸಾಧ್ಯತೆ ಆಗುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಇವತ್ತು ಇದೆ ಎಂದಾಗ ನಾವು ನಿಜವಾಗಿಯೂ ಜನರಿಗೆ, ರೈತರಿಗೆ ನಿಜವಾದ ಶುದ್ಧ ನೀರನ್ನು ಕೊಡುವಂಥ ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆಗೆ ವಂಚಿತರಾಗಿದ್ದೇವೆನ್ನುವಂಥ ಭಾವನೆ ಎಲ್ಲರ ಮನಸ್ಸಿನಲ್ಲಿ ಮೂಡುತ್ತಿದೆ. ಅದು ಮೂಡುವುದಕ್ಕೆ ಮೊದಲು ನಿಜವಾಗಿಯೂ ದಕ್ಷ ಅಧಿಕಾರಿಗಳನ್ನಿಟ್ಟುಕೊಂಡು ಆ ಕೆಲಸವನ್ನು ಅತೀ ಜರೂರಾಗಿ ಮಾಡತಕ್ಕಂಥದ್ದು ಸೂಕ್ತ ಎನ್ನತಕ್ಕಂಥ ಒಂದು ಸಲಹೆಯನ್ನು ನಾನು ಕೊಡಲಿಕ್ಕೆಬಯಸುತ್ತೇವೆ. ಆಮೇಲೆ, PMGSY ರಸ್ತೆಗಳು. PMGSY ರಸ್ತೆಗಳ ಬಗ್ಗೆ ಅದೊಂದು separate wing ಇತ್ತು. Separate wing ಈಗಲೂ ಇದೆ. PMGSY ಕೇಂದ್ರ ಸರ್ಕಾರದ ಯೋಜನೆ. ಅದಕ್ಕೆ ನೀವು ನಮ್ಮ ಗ್ರಾಮ ನಮ್ಮ ರಸ್ತೆ attachment ಮಾಡಿದ್ದೀರಿ. ಆ ನಮ್ಮ ಗ್ರಾಮ ನಮ್ಮ ರಸ್ತೆ attachment ನಲ್ಲಿ ಇಲ್ಲಿ PMGSY ರಸ್ತೆಗಳು ಎಂದರೆ standard, ಅವುಗಳಿಗೆ ಬಹಳ ಗುಣಮಟ್ಟವಿದೆ, ಅದಕ್ಕೆ Delhi ಯಿಂದ ಬರುತ್ತಾರೆ, ಹೀಗೆ ತಕ್ಕಡಿ ಹಿಡಿದು ತೂಕ ಮಾಡುತ್ತಾರೆ, ಎಲ್ಲ ಬಹಳ ಚೆನ್ನಾಗಿ ನಡೆಯುತ್ತವೆ ಅಂಥದ್ದು ಸತ್ಯ. 10, 15 ವರ್ಷಗಳಾದರೂ, 10 ವರ್ಷ ನಾನು ಜಿಲ್ಲಾಪಂಚಾಯಿತಿ ಸದಸ್ಯನಾಗಿದ್ದಾಗ ಮೊದಲನೇ PMGSY ರಸ್ತೆಯನ್ನು

ನಾವು 2001ರಲ್ಲಿ ಮಾಡಿಸಿದೆವು. ಇವತ್ತಿನವರೆಗೂ ಒಂದು ಗುಂಡಿ ಬಿದ್ದಿಲ್ಲ. ಅಷ್ಟರಮಟ್ಟಿಗೆ PMGSY ನಲ್ಲಿ ರಸ್ತೆ ಮಾಡಿದ್ದರು. ಆದರೆ, ಇವತ್ತಿನ ನಮ್ಮ ಗ್ರಾಮ ನಮ್ಮ ರಸ್ತೆ standard ಇಲ್ಲ. ಇಲ್ಲಿರುವ engineer ಗಳೆಲ್ಲ ಅಲ್ಲಿ ಪಳಗಿದವರೇ ಅಲ್ಲೂ ಇದೇ ವ್ಯವಹಾರ ಮಾಡುತ್ತಿದ್ದಾರೆ. ಎಲ್ಲ standard ಕಳೆದುಕೊಂಡಿದೆ. ಒಂದೊಂದು layer ಜಲ್ಲಿಯನ್ನೇ ಕದಿಯುತ್ತಾರೆ. ಗೊತ್ತಾಯಿತೆ. ಟಾರ್ ಅನ್ನು ಚೆನ್ನಾಗಿ ಹಾಕುವುದಿಲ್ಲ. ನಮ್ಮ ಬೇಲೂರಿನಲ್ಲಿ ಇಬ್ಬರನ್ನು suspend ಮಾಡಿದಿರಿ. ಆದರೂ ಅಲ್ಲಿ ಡಾಂಬರನ್ನು ಇವತ್ತು ಹಾಕುತ್ತಾರೆ, ನಾಳೆಗೆ ಕಿತ್ತುಹೋಗುತ್ತದೆ ಇದು PMGSY ಇಲಾಖೆಗಿದ್ದಂಥ, ಸಂಸ್ಥೆಗಿದ್ದಂಥದ್ದು. ಒಂದು ಕೆಟ್ಟ ಹೆಸರು ಬರುವುದಕ್ಕೆ ಪ್ರಾರಂಭವಾಗಿದೆ. ಆದ್ದರಿಂದ ದಯವಿಟ್ಟು, ನಮ್ಮ ಗ್ರಾಮ ರಸ್ತೆಯನ್ನು PMGSY ನವರೇ ಮಾಡಿದರೂ ಸಹ ಅದಕ್ಕೆ ಬಹಳ ನಿಗಾವಹಿಸಿ ಅದನ್ನು ಯಾವ ರೀತಿ ನೀವು ಸರಿ ಮಾಡುತ್ತೀರೋ ಮಾಡತಕ್ಕಂಥದ್ದು ಸೂಕ್ತ ಇದೆ. ಈಗಂತೂ ಕೆಟ್ಟ ಹೆಸರು ಬರುತ್ತಿರುವುದಂತೂ ಸತ್ಯ ಈಗೇನೋ adopt ಮಾಡಿದ್ದಾರೆ. ಈ ಸಾರಿಯ tender ನಲ್ಲಿ ಮಾಡಿದ್ದಾರೆ. Contractor loose ಕೆಲಸ ಏನಾದರೂ ಮಾಡಿದರೂ ಕೂಡ ಪುನಃ 5 ವರ್ಷ ಕಾಲ maintenance ಮಾಡಿ ಕೊನೆಗೆ ಹೋಗಬೇಕಾದರೆ ಇನ್ನೊಂದು layer ಹಾಕಿಕೊಡಬೇಕು ಎಂದು ಈ ಸಾರಿ tender schedule ನಲ್ಲಿ ಏನೋ ಹಾಕಿದ್ದಾರಂತೆ. ಅದರಿಂದ ಇನ್ನೇನಾದರೂ ಬಹುಶಃ ಚೆನ್ನಾಗಿ ಆಗಬಹುದು. ಆಮೇಲೆ, ನಮ್ಮ ಗ್ರಾಮ ನಮ್ಮ ರಸ್ತೆಯನ್ನು ನೀವೆಲ್ಲ one year ಪಲ್ಟಿ ಹೊಡಿಸಿದ್ದೀರಿ. ನೀವು ಬಂದು ಎರಡು ವರ್ಷಗಳಾಯಿತು. ಇದಕ್ಕೆ ನಾವು ಮೂರನೇ ಕಾರ್ಯಕ್ರಮ, ಎರಡನೇ ಕಾರ್ಯಕ್ರಮ ಕೊಡಬೇಕಾಯಿತು. ಒಂದು ಕಾರ್ಯಕ್ರಮ ತೆಗೆದುಕೊಂಡು ಅವುಗಳೇ ಇನ್ನೂ ಕುಂಟುತ್ತಾ ಇವೆ. ಬಿಜೆಪಿ ಸರ್ಕಾರದಲ್ಲಿ ಮಾಡಿದ್ದನ್ನು ನೀವು ಮುಗಿಸಿದಿರಿ. ಇನ್ನೂ ಮುಗಿದಿಲ್ಲ. ಈಗ ನೀವು ಕಾರ್ಯ ತೆಗೆದುಕೊಂಡು 20–20 ಕಿ.ಮೀ., ತೆಗೆದುಕೊಂಡು ಈಗಿನ್ನೂ ನೀವು tender ಕರೆದು entrustment ಮಾಡುವ stage ನಲ್ಲಿದ್ದೀರಿ. ನಮಗೆ ಇದೊಂದೇ ಅಶಾದಾಯಕ. ಯಾವ ಊರಿಗೆ ರಸ್ತೆ ಇಲ್ಲ, ಯಾವ ಊರಿಗೆ ಗ್ರಾಮೀಣ

ಪ್ರದೇಶದಲ್ಲಿ ರಸ್ತೆಯೇ ಇಲ್ಲ, ಆ ರಸ್ತೆ ಕೊಡಲಿಕ್ಕೆ ಜಿಲ್ಲಾ ಪಂಚಾಯಿತಿಗೂ ನೀವು ಕೊಡುವ ಹಣ ರಂಗೋಲಿ ಬಿಡುವುದಕ್ಕೂ ಆಗುತ್ತಿಲ್ಲ. ಕೇವಲ ಹೀಗೆ ನೊಡಿಕೊಂಡು ಬಂದು ರಂಗೋಲಿ ಬಿಟ್ಟುಕೊಂಡು ಬರುತ್ತಾರಲ್ಲ, ಅದಕ್ಕೂ ಆಗುವುದಿಲ್ಲ. ಆ ಮಟ್ಟದಲ್ಲಿದೆ ಜಿಲ್ಲಾಪಂಚಾಯಿತಿ ವ್ಯವಸ್ಥೆ. ಆದರೆ, ನೀವೇನು ನಮ್ಮ ಗ್ರಾಮ ನಮ್ಮ ರಸ್ತೆಯನ್ನು ಕೊಟ್ಟು ಶಾಸಕರ ಗೌರವವನ್ನು ಕಾಪಾಡಿದ್ದೀರಿ, ಇದನ್ನು ನೀವು ಸ್ವಲ್ಪಮಟ್ಟಿಗೆ ವರ್ಷ ವರ್ಷ gap ಹೊಡೆಸುತ್ತಿದ್ದೀರಿ. ದಯವಿಟ್ಟು ಪ್ರತಿವರ್ಷ 20–20 ಕಿ.ಮೀ ಕೊಟ್ಟರೆ 5 ವರ್ಷಗಳಲ್ಲಿ ಶಾಸಕರು 100 ಕಿ.ಮೀ ರಸ್ತೆ ಮಾಡಿದರೆ ನಿಜವಾಗಿಯೂ ಅವರ ಗೌರವ ಹೆಚ್ಚಾಗುತ್ತದೆ. ನಿಮ್ಮ ಸರ್ಕಾರದ ಗೌರವವೂ ಹೆಚ್ಚಾಗುತ್ತದೆ. ನಿಜವಾಗಿಯೂ ಬಿಜೆಪಿಯವರು 30 ಕೊಟ್ಟು ಹೋದರು. ಅವರೇನೂ ಹಣ ಕೊಟ್ಟು ಹೋಗಲಿಲ್ಲ. ಅದನ್ನೂ ನಾನು ಹೇಳುತ್ತೇನೆ. ಇದ್ದದ್ದನ್ನು ಹೇಳಬೇಕು. Approval ಮಾಡಿ ಅವರು seal ಹೊಡೆದು tender ಕರೆದು ಹೋದರು. ನೀವು ಬಂದು ಕಳೆದ ಸಾರಿ ಹಣ ಕೊಡುತಿದ್ದೀರಿ. ಅದಲ್ಲ ಪ್ರಶ್ನೆ. ಆದರೂ ನೀವು ಇದಕ್ಕೆ ಸ್ವಲ್ಪ ಒತ್ತು ಕೊಟ್ಟು ಪ್ರತಿ ವರ್ಷದ ಬಜೆಟ್‌ನಲ್ಲಿ 20 ಕಿ.ಮೀ ರಸ್ತೆ ಕೊಡುವಂಥ ಕಾರ್ಯಕ್ರಮವನ್ನು ನಿಜವಾಗಿಯೂ ಇಟ್ಟುಕೊಳ್ಳಬೇಕು. ಇಟ್ಟುಕೊಳ್ಳದೇ ಹೋದರೆ, ನಿಜವಾಗಿಯೂ ಶಾಸಕರ ಗೌರವ, ಮರ್ಯಾದೆ ಹಳ್ಳಿ ಕಡೆ ಉಳಿಯುವುದಿಲ್ಲ ಆಗುವುದಿಲ್ಲ. ನಮಗೆ ಆ ರಸ್ತೆಗಳನ್ನು ಮಾಡಿಕೊಡುವುದಕ್ಕೆ ಎಲ್ಲಿ ಆಗುತ್ತದೆ? ಇವತ್ತು ಒಂದು ಉತ್ತಮವಾದ, standard ಆದ ಒಂದು ಕಿ.ಮೀ ರಸ್ತೆಗೆ 35 ರಿಂದ 40, 50 ಲಕ್ಷ ರೂಪಾಯಿಗಳಿಗೆ ಹೋಗಿದೆ. ಸ್ವಾತಂತ್ರ್ಯ ಬಂದು 67 ವರ್ಷಗಳಾಗಿವೆ, ನಾವಿನ್ನೂ ಒಂದು ಗ್ರಾಮಕ್ಕೆ ಒಂದು ರಸ್ತೆ ಮಾಡಿಕೊಡುವುದಕ್ಕೆ ನಮಗೆ ಆಗಿಲ್ಲವೆಂದರೆ, ನಾವೆಲ್ಲ ಇಲ್ಲಿ ಕುಳಿತುಕೊಂಡು ಚರ್ಚೆ ಮಾಡಬೇಕೇ? ನಾವೆಲ್ಲ ಈ ಸದನದಲ್ಲಿ ಏನು ಮಾಡಬೇಕು? ಯೋಚನೆ ಮಾಡಿ. ದಯಮಾಡಿ, ಇದಕ್ಕೆ ಗ್ರಾಮ ಸ್ವರಾಜ್ಯ ಎನ್ನುವ ಪದ ಬರಬೇಕಾದರೆ ಯಾವ ಗ್ರಾಮಕ್ಕೆ ಇದುವರೆಗೆ ಮುಖ್ಯರಸ್ತೆಯಿಂದ ಆ ರಸ್ತೆಗೆ ಕಚ್ಚಾ ರಸ್ತೆ ಇದ್ದು, ಡಾಂಬರೀಕರಣದ ರಸ್ತೆಯಾಗಿಲ್ಲ, ಅದನ್ನು ಮಾಡತಕ್ಕಂಥ ಒಂದು ಪ್ರಾಮಾಣಿಕವಾದಂಥ ಪ್ರಯತ್ನ

ನಿಮ್ಮ ಕಾಲದಲ್ಲಿ ಆಗಬೇಕು. ಪ್ರತಿ ವರ್ಷ 20–20 ಕಿ.ಮೀ ಕೊಡಬೇಕು. Gap ಕೊಡಬೇಡಿ. ಹಣಕಾಸಿನ ತೊಂದರೆ ಇದೆ. ನನಗೆ ಗೊತ್ತು. ಆದರೂ ಸಹ ಹೇಗಾದರೂ ಮಾಡಿ ಶಾಸಕರ ಗೌರವ ಉಳಿಸತಕ್ಕಂಥ ಈ ಒಂದು ಯೋಜನೆ ಕಾರ್ಯಗತವಾಗಬೇಕು ಎನ್ನತಕ್ಕಂಥದ್ದು ನನ್ನ ಭಾವನೆ. ಅದಕ್ಕೆ ನೀವು ಯಾವ ರೀತಿ ಮುಂದಿನ ದಿನಗಳಲ್ಲಿ ಸ್ಪಂದಿಸುತ್ತೀರೋ ಸಚಿವರೆ ನನಗೆ ಗೊತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಮುಖಾಂತರ ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆಮೇಲೆ, ಸುವರ್ಣ ಗ್ರಾಮವನ್ನು ವಿಕಾಸ ಗ್ರಾಮ ಎಂದು ಮಾಡಿದ್ದೀರಿ. ಸಂತೋಷ. ಗ್ರಾಮ ವಿಕಾಸ ಯೋಜನೆ ಎಂದು ತಂದಿದ್ದೀರಿ. ಅದು ಎರಡು ವರ್ಷಗಳಿಂದ gap ಹೊಡೆಯಿತು. Gap ಹೊಡೆದು ಈಗಿನ್ನೂ ನಮ್ಮ ಹತ್ತಿರ ಪಟ್ಟಿ ತೆಗೆದುಕೊಂಡು, ಹೆಸರು ಕೊಟ್ಟಿದ್ದೇವೆ. ಅದು ಇನ್ನೋ ಎಲ್ಲೆಲ್ಲಿಗೋ ಹೋಗಿ ಬಂದು ಅನುಮೋದನೆಯಾಗಿಲ್ಲ. ಅದಕ್ಕೆ ಹಣ ಬಿಡುಗಡೆಯಾಗಿಲ್ಲ. ಅಲ್ಲಿಗೆ ಎರಡು ವರ್ಷ gap ಹೊಡೆಯಿತು. ಇನ್ನು ಇರುವುದು ಮೂರು ವರ್ಷ ಈ ಮೂರು ವರ್ಷಗಳೊಳಗೆ ಕೊನೆಪಕ್ಷ ಎರಡು ಸಾರಿ ಐದೈದು ಗ್ರಾಮ, ನೀವು ಕೊಟ್ಟಿರುವುದು ಹೇಗೆ ಕೊಟ್ಟಿದ್ದೀರಿ ಎಂದರೆ ಐದೈದು ಗ್ರಾಮಕ್ಕೆ ಮೂರು ವರ್ಷಗಳ ಅವಧಿಗೆ ಎಂದು approve ಮಾಡಿದ್ದೀರಿ. ಇದು ಯಾವ ನೀತಿಯೋ? ಇದು ಯಾವ ಆರ್ಥಿಕ ನೀತಿಯೋ? ಇದು ಹೇಗೆ ಎನ್ನತಕ್ಕಂತಥದ್ದು ನನಗೆ ಗೊತ್ತಿಲ್ಲ. ಏತಕ್ಕೋಸ್ಕರ ಈ ರೀತಿ ತೀರ್ಮಾನ ತೆಗೆದುಕೊಂಡಿದ್ದೀರೋ? ಮೂರು ವರ್ಷ ಹೇಗೆ ಮಾಡುವುದು? ಅವನು tender ಕರೆದು ಮೂರು ವರ್ಷ ಕಾಯ್ದುಕೊಂಡು ಕುಳಿತುಕೊಳ್ಳುತ್ತಾನೆಯೇ? ಈಗ ಒಬ್ಬನಿಗೆ 75 ಲಕ್ಷ ರೂ.ಗಳ tender ಕೊಟ್ಟುಬಿಡುತ್ತೀರಿ. ಮೂರು ವರ್ಷ ಅವನು tender ಮಾಡು ಎಂದರೆ ಅವನು tender ಅನ್ನು ಹೇಗೆ ಮಾಡುತ್ತಾನೆ? ಇದನ್ನು ಯಾರು ಹೇಳಿಕೊಟ್ಟವರು? ಇದು ಹೇಗೆ ಸಾಧ್ಯ? ಮೂರು ವರ್ಷಗಳಲ್ಲಿ ಅವನು ಈ ವರ್ಷ drain ಮಾಡು, ಮುಂದಿನ ವರ್ಷಕ್ಕೆ ಈ ಕೆಲಸ ಮಾಡು ಎಂದರೆ, ಇನ್ನೊಂದು ವರ್ಷಕ್ಕೆ ಏನು ಮಾಡುವುದು? ಆಮೇಲೆ, contractor ಮೂರು ವರ್ಷಗಳವರೆಗೆ ಹಣ ಕಾಯ್ದುಕೊಂಡು ಕುಳಿತುಕೊಳ್ಳುತ್ತಾನೆಯೇ? ಹಾಗಾದರೆ,

ಅವನಿಗೆ ಯಾವ ರೇಟ್ ಕೊಡಬೇಕಾಗುತ್ತದೆ? ಮೂರು ವರ್ಷಗಳಲ್ಲಿ ದರಗಳ ವ್ಯತ್ಯಾಸವಾಗುವುದಿಲ್ಲವೇ? ಇದು ತಪ್ಪಿದೆ. ಎರಡೇ ಗ್ರಾಮ ಕೊಡಿ. ಆದರೆ, ಮೂರು ವರ್ಷ continuation ಮಾಡುವುದು ತಪ್ಪು. ಇದನ್ನು ದಯವಿಟ್ಟು ಈ ಕೂಡಲೇ ತಿದ್ದುಪಡಿ ಮಾಡಿಕೊಂಡು ಏನಾದರೂ ಮಾಡಿ ಅದಕ್ಕೊಂದು ಮಾರ್ಗವನ್ನು ಕಂಡುಹಿಡಿಯಬೇಕಾಗಿರತಕ್ಕಂಥದ್ದು ಸರ್ಕಾರದ ಕರ್ತವ್ಯವಿದೆ. ಅದನ್ನು ಮಾಡಿಕೊಡಬೇಕು. ಅದರ ಜೊತೆಯಲ್ಲಿ, ವಿಕಾಸ ಗ್ರಾಮ ಯೋಜನೆಯಲ್ಲಿ ಯಾವ ವ್ಯವಸ್ಥೆಯನ್ನು ನೀವು ಈ ರಸ್ತೆ ವ್ಯವಸ್ಥೆಯಲ್ಲಿ ಮಾಡುತ್ತಿದ್ದೀರೋ, ನನ್ನ ಕ್ಷೇತ್ರದಲ್ಲಿ ಕೇವಲ 535 ಹಳ್ಳಿಗಳಿವೆ. ನೀವು 5 ಹಳ್ಳಿಗಳಿಗೆ ಕೊಟ್ಟರೆ ಯಾವ ಹಳ್ಳಿಗೆ ಕೊಡೋಣ? ಎಷ್ಟು ಜನರಿಗೆ ನಾವು ಕೆಟ್ಟವರಾಗೋಣ? ಒಬ್ಬ MLA ಮುಂದಿನ ಸಾರಿ ಸೋಲುವುದಕ್ಕೆ ಈ ಯೋಜನೆ ಸಾಕಲ್ಲವೇ? ನೋಡೋ, ಅಲ್ಲಿ ಅವರ ಜನರ ಕಡೆಯವರು ಇದ್ದಾರೆಂದು ಕೊಟ್ಟರು, ಇಲ್ಲಿ ಕೊಟ್ಟರು, ಅಲ್ಲಿ ಕೊಟ್ಟರು ಎನ್ನುತ್ತಾರೆ. ಆಮೇಲೆ, ನೀವು SC/ST ಗೆ ಇಷ್ಟೇ ಕೊಡಬೇಕೆಂದು ಹೇಳಿದ್ದೀರಿ. ನಮ್ಮ ಹತ್ತಿರಕ್ಕೆ ಅದಕ್ಕೆ ಎಷ್ಟು competition ಬಂದಿದೆ ಗೊತ್ತೇ? ಬಹಳ competition ಬಂದಿದೆ. ನಾವು ಹೇಗೆ ಆಯ್ಕೆ ಮಾಡೋಣ? ಆಯ್ಕೆ ಮಾಡಿ ಕೊಟ್ಟು ಅದಕ್ಕೇನಾದರೂ ಮಾಡಿ ಸ್ವಲ್ಪ ಇದರ ಬಾಬ್ತಿಗೆ ಸ್ವಲ್ಪ ಹೆಚ್ಚು ಹಣ ಕೊಟ್ಟರೆ ಒಳ್ಳೆಯದು. ನಿಮಗೆ concept ಬಂದಿದೆ. ಗ್ರಾಮಗಳನ್ನು ಉದ್ಧಾರ ಮಾಡಬೇಕು, ಅವುಗಳನ್ನು ಸ್ವಚ್ಛವಾಗಿಡಬೇಕು, ಅವುಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವುದು ಬಂದಮೇಲೆ ಎಂತೆಂಥದ್ದನ್ನೋ ಕೈಬಿಟ್ಟು ಈ ಕಡೆ ಸ್ವಲ್ಪ ಗಮನಹರಿಸುವುದು ಸೂಕ್ತ. ಇಲ್ಲವೆಂದರೆ ಈ ಉದ್ಯೋಗ ಖಾತರಿಗೆ ಕಾನೂನು ಬದಲಾವಣೆ ಮಾಡಿ ಎಲ್ಲದಕ್ಕೂ concrete ಹಾಕಿ ಎಂದು ಒಂದು ಕಾನೂನಿನ ಚೌಕಟ್ಟನ್ನು ತಂದರೆ ಬಹುಶಃ ಈ concept ಸ್ವಲ್ಪ ಕಡಿಮೆಯಾಗುತ್ತದೆ. ಈ ದೃಷ್ಟಿಯಲ್ಲಾದರೂ ತಾವು ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಶಿವಲಿಂಗೇಗೌಡರೆ, ಒಂದು ನಿಮಿಷ.

ಅಧ್ಯಕ್ಷರು:- ಬೇಡ, ಅವರು ಮಾತನಾಡಿ ಮುಗಿಸಲಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಒಂದೇ ಒಂದು ಸಣ್ಣ clarification ಹೇಳಿಬಿಡುತ್ತೇನೆ.

ಅಧ್ಯಕ್ಷರು:- No, no, ಬೇಡ, ಸುಮ್ಮನಿರಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಅಧ್ಯಕ್ಷರೆ, ಒಂದನ್ನು ಮಾತ್ರ ಹೇಳಿಬಿಡುತ್ತೇನೆ. Last ಅಧಿವೇಶನದೊಳಗೆ ನಾವು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಂಡಿದ್ದೇವು. 5 ಸಾವಿರ ಜನಸಂಖ್ಯೆ ಮೀರಬಾರದೆನ್ನುವ ಎಂದು condition ಹಾಕಿದ್ದರು, ಅದನ್ನು ಸ್ವಲ್ಪ withdraw ಮಾಡಿಕೊಂಡು ನೀವು ಕ್ಷೇತ್ರಾವಾರು ಕೊಟ್ಟುಬಿಡಿ.

ಅಧ್ಯಕ್ಷರು:- ಬೇಕಾದರೆ ನೀವು ಮಾತನಾಡುವ ಸಂದರ್ಭದಲ್ಲಿ ಇವನ್ನೆಲ್ಲ ಮಾತನಾಡಿ. ಈಗ ಶಿವಲಿಂಗೇಗೌಡರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಿ ಮುಗಿಸಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಆಮೇಲೆ, ಕುಡಿಯುವ ನೀರಿನ ಯೋಜನೆಯಲ್ಲಿ ಏನಾಗುತ್ತಿದೆ ಎಂದರೆ, ತಾಂಡಾಗಳು, ವಡ್ಡರ ಹಟ್ಟಿಗಳು, ಗೊಲ್ಲರ ಹಟ್ಟಿಗಳು ಇವುಗಳಿಗೆ main villages ನಿಂದ ಅಲ್ಲಿಗೆ connection ಹೋಗುತ್ತಿಲ್ಲ, ಕೆಲವು ಊರುಗಳಿಗೆ ಇಲ್ಲ. ದಯವಿಟ್ಟು ಅಂಥವುಗಳಿಗೆ ವಿಶೇಷವಾದ ಅನುದಾನ ಕೊಟ್ಟು ಆ hamlets villages ಗಳಿಗೆಲ್ಲ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅವರು ಯಾವ ಕರ್ಮ ಮಾಡಿದ್ದಾರೆಂದು ಅವರೆಲ್ಲ ಆ main village ಗೆ ಬಂದು ನೀರು ಹೊತ್ತುಕೊಂಡು ಹೋಗಬೇಕು? ಅಥವಾ borewell ನೀರನ್ನೇ ಕುಡಿಯಬೇಕು? Mini water supply ಅನ್ನು ಆ ತಾಂಡಾಗಳು ಎಲ್ಲಿ ಉಳಿದಿವೆ ಅಲ್ಲಿಗೆ ವ್ಯವಸ್ಥೆ ಮಾಡಬೇಕು. ನಾವು ಕೆಲವು ಕಡೆ ದಬಾಯಿಸಿ ಮಾಡಿಸಿಬಿಟ್ಟಿದೇವೆ. ನಮ್ಮ ಶಿವಮೂರ್ತಿಯವರು ಸಂಜೆಗೆ ನಮ್ಮ ಜೊತೆ ಹೇಳಿಕೊಳ್ಳುತ್ತಾರೆ. ಇದರ ಬಗ್ಗೆ ಮಾತನಾಡಿ ಎಂದು ಈಗ ಚೀಟಿ ಬೇರೆ ನನಗೆ ಕಳುಹಿಸಿದ್ದಾರೆ. ನಾನಂತೂ ಬಿಟ್ಟಿಲ್ಲ. Main villages ಗಿಂತ ಮೊದಲು ಗೊಲ್ಲರ ಹಟ್ಟಿಗೆ ಹಾಕಿ, ಬೋರ್ ಕೊರೆಸುವುದನ್ನೇ ಗೊಲ್ಲರ ಹಟ್ಟಿ ಕಡೆಯಲ್ಲಿ ನಾವು ಕೊರೆಸುತ್ತೇವೆ. ಆಮೇಲೆ ಊರೊಳಗೆ ಬರುವ ಹಾಗೆ

ಮಾಡಿದ್ದೇವೆ. ಅಲ್ಲಿ ಎಲ್ಲೂ ನಾವು ಬಿಟ್ಟಿಲ್ಲ. ತಾಂಡಾಗಳು ಇವು ಯಾವುದನ್ನೂ ನಾವು ಬಿಟ್ಟಿಲ್ಲ. ಎಲ್ಲಾ ಕಡೆ ಮಾಡಿದ್ದೇವೆ.

ಶ್ರೀ ಕೆ. ಶಿವಮೂರ್ತಿ:- ಒಂದು standing instructions ಇಲ್ಲ. ಒಂದು ಸುತ್ತೋಲೆ ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಇನ್ನೂ ಏನಾದರೂ ಉಳಿದಿದ್ದರೆ ಅದನ್ನು ಮಾಡಿಸುವಂಥ concept MLA ಗಳಿಗೆ ಇರಬೇಕು. ಆ MLA ಗಳು ಮನಸ್ಸು ಮಾಡಿದರೆ ಎಲ್ಲವನ್ನೂ ಮಾಡಬಹುದು. ಆ ದೃಷ್ಟಿಯಲ್ಲಿ ತಾವು ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು, ಸಂಸದರ ಆದರ್ಶ ಗ್ರಾಮಗಳು ಎಂದು ಕೊಟ್ಟರೆಂದು ಸಿ.ಟಿ. ರವಿಯವರು ಹೇಳಿದರು. ಹಾಸನ ಜಿಲ್ಲೆಯಲ್ಲಿ ಎಷ್ಟು ಸಾವಿರ ಹಳ್ಳಿಗಳಿವೆ? 5 ವರ್ಷಗಳಲ್ಲಿ ಒಂದು ಗ್ರಾಮ ಅಭಿವೃದ್ಧಿಯಾದರೆ ಗ್ರಾಮ ಸ್ವರಾಜ್ಯ ಆಗಿಹೋಯಿತೇ? 5 ವರ್ಷಗಳಲ್ಲಿ ಒಂದು ಗ್ರಾಮ ತೆಗೆದುಕೊಳ್ಳಬೇಕೆಂದರೆ ಎಷ್ಟು ವರ್ಷಗಳಿಗೆ ಬಾಕಿ ಗ್ರಾಮಗಳನ್ನು ಅಭಿವೃದ್ಧಿಗೊಳಿಸಿ ಪೂರ್ಣಗೊಳಿಸುವುದು?

ಅಧ್ಯಕ್ಷರು:- ಅದು ರಾಜ್ಯ ಸರ್ಕಾರದ ಕಾರ್ಯಕ್ರಮವಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಅಲ್ಲ. ಮಧ್ಯೆ ಈ ಚರ್ಚೆ ನಡೆಯಿತಲ್ಲ. ಅದಕ್ಕೆ ಹೇಳುತ್ತಿದ್ದೇನೆ. ಇವರೂ ಹಾಗೆಯೇ ಮಾಡುತ್ತಿದ್ದಾರೆ, ಅವರೂ ಹಾಗೇ ಮಾಡುತ್ತಿದ್ದಾರೆಂದು ಹೇಳಿದೆ. ಕ್ರಾಂತಿಕಾರಕವಾಗಿ ಕೆಲಸ ನಡೆಯಬೇಕು. ಗ್ರಾಮ ಸ್ವರಾಜ್ಯ ಎಂದರೆ ಎಲ್ಲಾ ಗ್ರಾಮಗಳ ಅಭಿವೃದ್ಧಿ ಮಾಡಬೇಕು. 75% ಗ್ರಾಮಗಳನ್ನಾದರೂ ಅಭಿವೃದ್ಧಿ ಮಾಡುವುದಕ್ಕೆ ಹಣ ನಿಗದಿಪಡಿಸಿ ಉಪಯೋಗ ಮಾಡಬೇಕು. ಈ ರೀತಿ ಬೇಕಾದಷ್ಟು ಕಾರ್ಯಕ್ರಮಗಳು ಆಗುತ್ತಿದೆ. ಆದ್ದರಿಂದ ದಯವಿಟ್ಟು ಈ ಎಲ್ಲ ಕಾರ್ಯಕ್ರಮಗಳ ಜೊತೆಯಲ್ಲಿ ನೀವೇನು 3054ನಲ್ಲಿ task force ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಹಣವನ್ನೇನು ಕೊಡುತ್ತಿದ್ದೀರಿ, ನಿಜವಾಗಿಯೂ ಆ ಹಣ ಸಾಕಾಗುವುದಿಲ್ಲ. ಜಿಲ್ಲಾ ಪಂಚಾಯತ್ ಮೆಂಬರ್ ಕಥೆ ಕೇಳಿದ್ದೀರಾ? ಎಲ್ಲ MLA ಯವರಿಗೆ ಹಣ ಕೊಟ್ಟಿದ್ದಾರೆ, ನೀವು ಅಲ್ಲಿಗೆ ಹೋಗಿ ಎಂದು ನಮ್ಮಲ್ಲಿಗೆ ಜನರನ್ನು

ಕಳುಹಿಸುತ್ತಾರೆ. ಇದನ್ನು ನೀವು ಕೊಟ್ಟುಬಿಟ್ಟು ನಮಗೆಂಥದ್ದು ಮಾಡಿದ್ದೀರೆಂದರೆ, ತಾಲ್ಲೂಕು ಪಂಚಾಯಿತಿಯವರನ್ನು ಕೇಳಿ, ಜಿಲ್ಲಾ ಪಂಚಾಯತ್‌ನವರನ್ನು ಕೇಳಿ MLA ಅದರ ಅಧ್ಯಕ್ಷರು, ನಮ್ಮ ಹಣವನ್ನೆಲ್ಲ ಕಿತ್ತು ಅಲ್ಲಿ ಕೊಟ್ಟಿದ್ದಾರೆ, ನೀವು ಎಲ್ಲ ಅಲ್ಲಿಗೆ ಹೋಗಿ ಎಂದು ನಮ್ಮ ಮನೆಯ ಹತ್ತಿರ ಕಳುಹಿಸುತ್ತಾರೆ. ಈಗ ನಾವು ಯಾವ ಜನರಿಗೆ ಹೇಳೋಣ? ಈಗ ನೀವು ಮಾಡುವುದೇನೋ ಮಾಡಿದ್ದೀರಿ. Atleast ಒಳ್ಳೆಯ ಕೆಲಸ ಮಾಡಿದ್ದೀರಿ. ಈಗ ನಾವು ಹೇಗೆ ಯಾವ ಉದ್ದೇಶದಿಂದ solve ಮಾಡುವುದಕ್ಕಾಗುತ್ತದೆ? ನೀವು ಕೊಡುವ 72 ಲಕ್ಷ ರೂಪಾಯಿ, 80 ಲಕ್ಷ ರೂಪಾಯಿಗಳನ್ನು 800 ಕಿ.ಮೀ.ಗೆ ನಾವು ಹೇಗೆ maintain ಮಾಡೋಣ? ಆದ್ದರಿಂದ ದಯವಿಟ್ಟು ಇನ್ನೂ ಸ್ವಲ್ಪ ವಿಶೇಷ ಅನುದಾನ ತೆಗೆದುಕೊಂಡು, NABARD ನಲ್ಲಿ ಸಾಲವನ್ನಾದರೂ ಮಾಡಿ, ನಮಗೆ ಅಲ್ಲಿ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಏನಾದರೂ ಮಾಡಿ ನಮಗೆ ಇನ್ನೂ ಸ್ವಲ್ಪ grant ಅನ್ನು ಹೆಚ್ಚಿಗೆ ಮಾಡತಕ್ಕಂಥದ್ದನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳಲಿಕ್ಕೆ ಬಯಸುತ್ತೇನೆ. ಗ್ರಾಮೀಣಾಭಿವೃದ್ಧಿ ಯೋಜನೆ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಅದಕ್ಕೆ ಕೊಟ್ಟಿರತಕ್ಕಂಥ ಅನುದಾನ ಸಾಲದು. 8 ಸಾವಿರ, 9 ಸಾವಿರ, 10 ಸಾವಿರ ಕೋಟಿ ರೂಪಾಯಿ ಸಾಲದು. ಅದರಲ್ಲಿ ಸಂಬಳಕ್ಕೆ ಎಷ್ಟು ಹೋಗುತ್ತದೆ? ಇನ್ನು ಎಷ್ಟು ಉಳಿಯುತ್ತದೆ? ಸಮಗ್ರ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಆ ದೃಷ್ಟಿಯಲ್ಲಿ supplementary budget ನಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ಆ ಇಲಾಖೆಗೆ ಕೊಟ್ಟು ಗ್ರಾಮೀಣಾಭಿವೃದ್ಧಿಯ ಬದುಕನ್ನು ನನಸು ಮಾಡಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಲಿ ಎಂದು ಹೇಳಿ, ಮಾನ್ಯ ಅಧ್ಯಕ್ಷರೆ, ನಿಮ್ಮ ಮುಖಾಂತರ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಂಡು ಈ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಟ್ಟಂಥ ತಮ್ಮೆಲ್ಲರಿಗೂ ವಂದಿಸಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):- ಮಾನ್ಯ ಅಧ್ಯಕ್ಷರೆ, ವಿಶ್ವೇಶ್ವರ ಹೆಗಡೆಯವರು, ಶಿವಲಿಂಗೇಗೌಡರವರು ಮಾತನಾಡಿದ್ದನ್ನು ನಾನು

ಕೇಳುತ್ತಿದ್ದೆ. ದುರಂತ. ಗ್ರಾಮೀಣಾಭಿವೃದ್ಧಿ ಮತ್ತು ಗ್ರಾಮ ಸ್ವರಾಜ್ಯ ಇವೆರಡರ ಬಗ್ಗೆ ಮೂಲಭೂತ ವ್ಯತ್ಯಾಸ ಕಂಡುಹಿಡಿದುಕೊಳ್ಳುವುದು ನಮ್ಮ ಕೈಯಲ್ಲಿ ಸಾಧ್ಯವಾಗುತ್ತಿಲ್ಲ. ಯಾವ ಪಂಚಾಯತ್‌ರಾಜ್ ಸಂಸ್ಥೆಗಳಿವೆ, ಈ ಪಂಚಾಯತ್‌ರಾಜ್ ಸಂಸ್ಥೆಗಳು ಸ್ವಯಂ ಆಡಳಿತವನ್ನು ನಡೆಸಿಕೊಳ್ಳುವಂಥ ಶಕ್ತಿಯನ್ನು ಹೊಂದಿರಬೇಕು. ಅವುಗಳಿಗೆ ಅನಿರ್ಬಂಧಿತವಾಗಿ ನಾವು ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕು. ವಿಧಿವಿಧಾನಗಳನ್ನು ರೂಪಿಸಬೇಕು. ತಾವು ಲೋಹಿಯಾವಾದಿಗಳು. ನೆಹರೂರವರಿಗೆ, ಲೋಹಿಯಾರವರಿಗೆ ಬಹಳ ದೊಡ್ಡ ತಾತ್ವಿಕ ಅಭಿಪ್ರಾಯಭೇದಗಳಿದ್ದರೂ ಕೂಡ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಬಹಳ ಗಾಢವಾದ ನಂಬಿಕೆ ನೆಹರೂರವರಿಗೆ ಇತ್ತು. ನಿನಗೆ ಹೇಗೆ ಗೊತ್ತಪ್ಪ ಎಂದು ಕೇಳಿದರೆ, ಅವರ ಅಧಿಕಾರ ಸ್ವೀಕಾರ ಮಾಡಿದ ದಿವಸದಿಂದ ಪ್ರತಿ ತಿಂಗಳು ಒಂದು ಪತ್ರವನ್ನು ಈ ದೇಶದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ. ಅದೊಂದು ಪುಸ್ತಕವನ್ನು ಬರೆದಿದ್ದಾರೆ. ಲೋಹಿಯಾರವರಂತೂ ಪಂಚಾಯತಿ, ಜಿಲ್ಲಾ ಪಂಚಾಯತಿ, ರಾಜ್ಯ, ದೇಶ, 4 ಸ್ಥಂಭದ ವ್ಯವಸ್ಥೆ ತಮಗೂ ಗೊತ್ತಿದೆ. ರಾಜ್ಯ ಸರ್ಕಾರ ಈ ಪಂಚಾಯತ್‌ರಾಜ್ ಸಂಸ್ಥೆಯನ್ನು ಸ್ವಯಂಪರಿಪೂರ್ಣವಾಗಿ ತಮ್ಮ ಆಡಳಿತವನ್ನು ತಾವೇ ನಿರ್ವಹಿಸಿಕೊಳ್ಳುವಂಥ ವ್ಯವಸ್ಥೆಯನ್ನು ಮಾಡುತ್ತಾ? ಅಂದರೆ ತನ್ನಲ್ಲಿ ಕೇಂದ್ರೀಕೃತವಾಗಿರುವಂಥ ಅಧಿಕಾರವನ್ನು ಅವರ ಜೊತೆ ಹಂಚಿಕೊಳ್ಳಲಿಕ್ಕೆ ಸಿದ್ಧವಾಗಿದೆಯೇ? ಇದು ಬಹಳ ದೊಡ್ಡ ವಿವಾದ ಮೊದಲಿಗೆ ಸ್ವಾತಂತ್ರ್ಯ ಬಂದಮೇಲೆ ಬಲವಂತರಾವ್ ಮೆಹ್ತಾ ಕಮಿಟಿ, ಆದಾದ ಮೇಲೆ ಅಶೋಕ್ ಮೆಹ್ತಾರವರ ಕಮಿಟಿ, 1983–84ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ ಮಾನ್ಯ ನಜೀರ್‌ಸಾಬ್‌ರವರ ಪ್ರಯತ್ನದಿಂದ ರಾಜ್ಯದಲ್ಲಿ ಆದ ಕೆಲವು ಬದಲಾವಣೆಗಳು, ನಂತರ ಮಾನ್ಯ ಎಂ.ವೈ. ಘೋರ್ಪಡೆಯವರು ಕೆಲವು ಬದಲಾವಣೆಗಳನ್ನು ಮಾಡಿದರು. ವಿಶೇಷವಾಗಿ ತ್ರಿಪುರ, ಕೇರಳ ಮತ್ತು ಪಶ್ಚಿಮ ಬಂಗಾಳ ಅಲ್ಲಿ ಯಾವ ರೀತಿ ಪಂಚಾಯತ್‌ರಾಜ್ ಸಂಸ್ಥೆಗಳು ಕೆಲಸ ಮಾಡುತ್ತಿವೆ ಎನ್ನುವುದನ್ನೂ ನಾವು ನೋಡುತ್ತಿದ್ದೇವೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ನಾನು ನನ್ನ

ಧನ್ಯವಾದಗಳನ್ನರ್ಪಿಸಬೇಕು. ಅದು ಒಂದು Joint Select Committee ಯಲ್ಲಿ ಅವರೇ ಅಧ್ಯಕ್ಷರಾಗಿದ್ದರು. ನಾನು ಅದರ ಸದಸ್ಯನಾಗಿದ್ದೆ. ಶೌಚಾಲಯಗಳ ವಿಚಾರ ಬಂದಾಗ ಇದು ತೇಪೆ ಕೆಲಸ ಆಗುತ್ತದೆ. ಮಾನ್ಯ ಮಂತ್ರಿಗಳೆ, ಬಹಳ ಪರಿಪೂರ್ಣವಾದಂಥ ತಿದ್ದುಪಡಿಗಳನ್ನು ತರಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಂಡೆ. ಕಳೆದ ಸಲ ಬೆಳಗಾಂನಲ್ಲಿ ಅಧಿವೇಶನ ನಡೆದಾಗ ಇದ್ದಕ್ಕಿದ್ದಂತೆ ಆ ಜವಾಬ್ದಾರಿಯನ್ನು ನನಗೆ ಕೊಟ್ಟರು. ನಾನು ಕ್ರಮೇಣ ಇಲ್ಲಿಂದ ಆ ಸಮಿತಿಯ ಶಿಫಾರಸ್ಸುಗಳಲ್ಲಿ ಯೋಗ್ಯವಾದುದೆಲ್ಲವನ್ನೂ ಕೂಡ ಅನುಷ್ಠಾನ ಮಾಡುತ್ತೇನೆಂದು ಅವರು ಆಗಲೇ ಒಂದು ಆಶ್ವಾಸನೆ ಕೊಟ್ಟಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ವಿಶೇಷವಾಗಿ ರಾಜಕಾರಣದಲ್ಲಿ ನಾವು ಕೇಳಿದಾಗ ಅವಕಾಶಗಳು ಬರುವುದಿಲ್ಲ. ಬಂದಾಗ ನಾವು ಏನು ಪ್ರತಿಪಾದನೆಯನ್ನು ಮಾಡಿರುತ್ತೇವೆ, ಯಾವ ಆದರ್ಶಗಳನ್ನು ನಾವು ಸಮರ್ಥಿಸುತ್ತೇವೆ ಅಥವಾ ಯಾವ ಸಿದ್ಧಾಂತ ನಾವು ಪ್ರತಿಪಾದನೆ ಮಾಡಿರುತ್ತೇವೆ, ಅದಕ್ಕೆ ಹೊಂದಿಕೊಳ್ಳತಕ್ಕಂಥ ರೀತಿಯಲ್ಲಿ ನಮ್ಮ ಕಾರ್ಯಾಚರಣೆ ವಹಿಸಿಕೊಳ್ಳತಕ್ಕಂಥ ಅಧಿಕಾರದ ಮೂಲಕ ಆಗಬೇಕು. ದಿವಂಗತ ದೇವರಾಜ ಅರಸುರವರು ಎಂದೂ ನಾನು socialist ಎಂದು ಹೇಳಿರಲಿಲ್ಲ. ಅವರು Marxists ಅಲ್ಲ. ಆದರೆ ಇಲ್ಲಿ ಲೋಹಿಯಾ ಹೇಳುವುದು, Marxists ಹೇಳುವುದು ಗಾಂಧಿವಾದಿಗಳು ಹೇಳುವುದು ಎಲ್ಲಾ ಕೆಲಸವನ್ನೂ ಅವರು ಮಾಡಿಯೇಬಿಟ್ಟರು. ಅವರಿಗೆ ಒಂದು ಅವಕಾಶ. ಬಹಳ ಜನರಿಗೆ ಗೊತ್ತಿಲ್ಲ. ಬಿ.ಡಿ.ಜತ್ತಿಯವರು ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ Inam Abolition Act ಬಂದಾಗ ಇದೇ ವಿಧಾನ ಸಭೆಯಲ್ಲಿ ಅವರು land reforms ಬಗ್ಗೆ ಮಾತನಾಡಿದರು. ಅವರಿಗೆ ಅವಕಾಶ ಸಿಕ್ಕಿದ್ದು ಬಹಳ late ಆಗಿ, ನಾನು ಏಕೆ ಈ ವಿಚಾರ ಪ್ರಸ್ತಾಪಿಸಿದೆ ಎಂದರೆ, ಚುನಾವಣೆಗಳು ಆಗಿ ಹೋಯಿತು. ನಾವು ಚುನಾವಣೆಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಒಂದು ಸಲಹೆ ಕೊಟ್ಟೆವು. ತಾವು report ಓದಿ. 2 ದಿವಸಕ್ಕಿಂತ ಹೆಚ್ಚು application ಹಾಕುವುದಕ್ಕೆ time ಕೊಡುವುದು ಬೇಡ. Ward ಮಾಡಿ 400 ಅಥವಾ 500 ಜನಸಂಖ್ಯೆಗೆ ಒಂದು ಸ್ಥಾನ ಮಾಡಿ. ಇಡೀ ಚುನಾವಣೆಯನ್ನು ನಾಲ್ಕೇ ದಿವಸ

ಮಾಡಿ. ನಾಮ ಪತ್ರ ಹಾಕುವುದು, ಹಿಂತೆಗೆದುಕೊಳ್ಳುವುದು, ಎಲ್ಲಾ ಆದ ಮೇಲೆ ನಾಲ್ಕು ದಿವಸ ಸಾಕು. ಆ ward ಏನಿರುತ್ತದೆ, ಆ ward ನಲ್ಲಿ State Election Commission ನವರು ಒಂದು ಶಾಮಿಯಾನ ಹಾಕಲಿ, ಅದಕ್ಕೆ mike ಕೂಡ ಬೇಕಾಗಿಲ್ಲ. ಯಾರೂ ಅಭ್ಯರ್ಥಿ ಇರುತ್ತಾರೆ, ಅವರು ಹೋಗಿ ನಿಂತುಕೊಂಡು ಜನರಿಗೆ ಹೇಳುವುದು. ನಾನು ಈ wardನ ಸದಸ್ಯ ಸ್ಥಾನಕ್ಕೆ ಅಭ್ಯರ್ಥಿಯಾಗಿದ್ದೇನೆ. Pamphlet ಎತ್ತಿಕೊಂಡು ಅವನು ತಿರುಗುವ ಹಾಗೆ ಇಲ್ಲ. 15 ದಿವಸಕ್ಕೆ ಮದ್ಯ ತಯಾರಿಕೆ ಮಾಡುವುದಾಗಲಿ, ಹಂಚಿಕೆ ಮಾಡುವುದಾಗಲಿ, ಬಳಕೆ ಮಾಡುವುದಾಗಲಿ ನಿಷೇಧಿಸಿ ಎಂದು ನಾವು ಇವರಿಗೆ suggestion ಕೊಟ್ಟೆವು. ಇದರಿಂದಾಗಿ ರಾಜ್ಯ ಸರ್ಕಾರವೇನು ಮುಳುಗಿ ಹೋಗುತ್ತಿರಲಿಲ್ಲ. ಕೋಟ್ಯಾಂತರ ರೂಪಾಯಿಗಳೇನು ನಷ್ಟವಾಗುತ್ತಿರಲಿಲ್ಲ. ಅಲ್ಲಿಗೂ ಯಾರಾದರೂ ಕದ್ದು ಮಾರಾಟ ಮಾಡಿದರೆ, ಕುಡಿದರೆ, jail ಗೆ ಹಾಕಿ, ಚುನಾವಣೆ ಮುಗಿಯುವವರೆಗೆ ನಿನಗೆ bail ಕೊಡುವುದಿಲ್ಲ ಎಂದು ಹೇಳಿದ್ದರೆ ಸ್ವಲ್ಪ ಭಯವಾದರೂ ಬರುತ್ತಿತ್ತು. ಆದರೆ, ನೀವು ಒಂದು ವಾರ time ಕೊಟ್ಟಿರಿ. ಇದೇನು Parliamentary Election? Ward ಮಾಡಲಿಲ್ಲ. ಬಹು ಸದಸ್ಯರ ಕ್ಷೇತ್ರಗಳನ್ನು ಮಾಡಿದಿರಿ, ನೀವು ಬಹು ಸದಸ್ಯರ ಕ್ಷೇತ್ರಗಳನ್ನು ಮಾಡಿದಾಗ ಯಾವ್ಯಾವ ರೀತಿಯ ಅನಾನುಕೂಲಗಳು ಇವೆಯೆಂದು ಅದು ಅಲ್ಲಿದ್ದವರಿಗೆ ಮಾತ್ರ ಗೊತ್ತಾಗುತ್ತದೆ. ಈಗ ನೀವೊಂದು ತೀರ್ಮಾನಕ್ಕೆ ಬಂದಿರಿ. ಒಂದು ಬಹು ಸದಸ್ಯರ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯೊ, ಪಂಗಡವೊ, BCM ಒಬ್ಬರಿಗೆ ಇಡುತ್ತೀರಿ, ಮತ್ತೊಬ್ಬರಿಗೆ ಬೇರೆಯದು ಇಡುತ್ತೀರಿ. ಆ general candidate ನವನು ಜಾಸ್ತಿ vote ತೆಗೆದುಕೊಂಡು ಗೆದ್ದಿದ್ದರೂ ಕೂಡ, ಮೀಸಲು ಕ್ಷೇತ್ರದಿಂದ ಸೋತು ಹೋಗಿರತಕ್ಕಂಥವನಿಗೆ ಈಗ ಗೆದ್ದ ಅಭ್ಯರ್ಥಿಗಿಂತ ಜಾಸ್ತಿ vote ಬಂದಿದ್ದರೆ ಅವನು ಗೆಲ್ಲುತ್ತಾನೆ. ಏನು ನಿಮ್ಮ ಪ್ರಜಾಸತ್ವದ ಕಲ್ಪನೆ ನನಗೆ ಅರ್ಥವಾಗಲಿಲ್ಲ. ಈ philosophy ಯನ್ನು ನಿಮಗೆ ಯಾರು ಕೊಟ್ಟರು ನನಗೆ ಗೊತ್ತಿಲ್ಲ. ಈಗ ನಾವೆಲ್ಲ assembly ಗೆ ಬಂದಿದ್ದೇವೆ. ಯಾವ ಆಧಾರದ ಮೇಲೆ ಬಂದಿರುವುದು? ಯಾವ ಮತ ಕ್ಷೇತ್ರಕ್ಕೆ ನಾವು ನಮ್ಮ applicationನ್ನು ಹಾಕಿದ್ದೆವು, ಚುನಾವಣೆ ನಡೆಯಿತು,

ಸ್ಪರ್ಧೆಯಲ್ಲಿದ್ದಂಥ ಅಭ್ಯರ್ಥಿಗಳಲ್ಲಿ ಚಲಾಯಿತ ಮತಗಳಲ್ಲಿ ಯಾರಿಗೆ ಹೆಚ್ಚು ಮತ ಬಂತೂ ಅವರು ತಾನೆ ವಿಜೇತರು. ನಿಮಗೊಂದು philosophy ಗ್ರಾಮ ಪಂಚಾಯಿತಿಗೊಂದು philosophy ಯೇ? General candidate ಇವನನ್ನು ಜೊತೆಗೆ ಹಾಕಿಕೊಳ್ಳಬೇಕು, ಅವನು ಊರಲ್ಲಿ ಕೇಳುತ್ತಾನೆ, ಅವನಿಗೇನು ಗತಿ ಇಲ್ಲ ಅವನನ್ನು ಹಾಕಿಕೊಂಡು ಊರಿನಲ್ಲಿ ನಾನು election ಮಾಡುವುದಿಲ್ಲವೆನ್ನುತ್ತಾನೆ. ನೀವು ಅವಕಾಶವನ್ನೇ ಕಳೆದುಬಿಟ್ಟಿರಿ. ಒಂದು ವೇಳೆ ಎರಡು ತಿಂಗಳು ಚುನಾವಣೆ ಮುಂದಕ್ಕೆ ಹಾಕಿದ್ದರೆ ಏನಾಗಿಬಿಡುತ್ತಿತ್ತು? ಸಹಾಯ ಮಾಡುವುದಕ್ಕೆ ಇಡೀ ಸದನ ತಯಾರಾಗಿತ್ತು. ಮೀಸಲಾತಿಯ ವಿಚಾರ ಬಹಳ ಖಚಿತವಾದ ಮಾತುಗಳಲ್ಲಿ ನಾವು ನಿಮಗೆ ಹೇಳಿದೆವು. ಸರ್ಕಾರ ಇದಕ್ಕೆ ಕೈ ಹಾಕಕೂಡದು, ಯಾವ ward ನಲ್ಲಿ ಯಾವ ವರ್ಗದ ಜನ ಹೆಚ್ಚಿರುತ್ತಾರೊ ಮತದಾರರು ಇರುತ್ತಾರೆ, ಅದನ್ನು ಮೊದಲೇ notify ಮಾಡಬೇಕು. ನೀವು reservation policy ಯನ್ನು change ಮಾಡಿ ಎಂದು ನಾವು ಹೇಳಲಿಲ್ಲ. ಆ percentage ಕಡಿಮೆ ಮಾಡಿ ಎಂದು ಹೇಳಲಿಲ್ಲ. ಆ ಜನ ಎಲ್ಲಿ ಹೆಚ್ಚಿರುತ್ತಾರೆ, ಅದನ್ನು election commission ನವರು notify ಮಾಡಿ objection ಅನ್ನು invite ಮಾಡಿ, 2011 ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಮೀಸಲಾತಿಯನ್ನು ನೀವು ಮಾಡಿದಿದ್ದರೆ ಹೇಗೆ ಆಗುತ್ತಿತ್ತು? ಏನು ಕಷ್ಟ ಇತ್ತು? ಇದಕ್ಕೇನು ದುಡ್ಡು ಬೇಕಾಗಿತ್ತೆ? ಅದೂ ಮಾಡಲಿಲ್ಲ. ಸದಸ್ಯರ ಚುನಾವಣೆ ಆಗುವವರೆವಿಗೆ ಫಲಿತಾಂಶ ಪ್ರಕಟವಾಗುವವರೆವಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮೀಸಲಾತಿಯನ್ನು ನೀವು ಪ್ರಕಟ ಮಾಡಲಿಲ್ಲ. ಏಕೆ? ಏನು ಕಾರಣಕ್ಕೆ ಮಾಡಲಿಲ್ಲ? ಇದೇನಾಯಿತು ಎಂದರೆ, ವಿಶೇಷವಾಗಿ ಆಡಳಿತ ಪಕ್ಷದಲ್ಲಿರುವ ವಿಧಾನ ಸಭಾ ಸದಸ್ಯರಿಗೆ ನಮ್ಮ ಕಾರ್ಯಕರ್ತರು ಗೆದ್ದಿರುವಂಥವರು, ಅವರು ಇವರು ಇರುತ್ತಾರಲ್ಲ, ಅವರಿಗೆ ಅವರು ಬಯಸಿದ category ಯನ್ನು ನಾವು ಮಾಡಿಸಿ ಕೊಡುತ್ತೇವೆ. ಏಕೆಂದರೆ, ಸರ್ಕಾರ ನಮ್ಮ ಕೈಯಲ್ಲಿದೆ ನಾವು ಮಾಡುವುದೆಂದು ಅವರಿಗೊಂದು ವಿಶ್ವಾಸ. ಪ್ರತಿ ಪಕ್ಷದಲ್ಲಿರತಕ್ಕಂಥವರಿಗೆ ನಾವು ಹಸ್ತಕ್ಷೇಪ ಮಾಡುತ್ತೇವೆ ಹೀಗೆ ಆಗುತ್ತದೆ ಎಂದು ನಮ್ಮ ಮೇಲೆ ಸಂಶಯ. ಅವರ

ಸಂಶಯ ನಿಜವಾಗಲಿಲ್ಲ, ನಾವು ಆಸೆಪಟ್ಟಿದ್ದು ನಿಜವಾಗಲಿಲ್ಲ. Deputy Commissioner ಗಳು ಅವರೊಂದು formulae ಇಟ್ಟುಕೊಂಡು ಮಾಡಿದರು, ಅವರೇನು ಮನಸ್ಸೋ ಇಚ್ಛೆ ಮಾಡಿದರು ಎಂದು ಹೇಳಲಿಲ್ಲ. ಆದರೆ, ಇದೇ ಮೀಸಲಾತಿಯನ್ನು ಈ ಪಂಚಾಯಿತಿಗೆ ಈ categoryಗೆ ಅಧ್ಯಕ್ಷರು, ಉಪಾಧ್ಯಕ್ಷರು ಬರುತ್ತಾರೆಂದು, membership election ಗೆ ನೀವು notification ಮಾಡಿದ್ದ ದಿವಸವೇ ಮಾಡಿ ಬಿಟ್ಟಿದ್ದರೆ ಅವರ ಪೈಕಿ best ಯಾರಿದ್ದರೋ ಅವರು ಬರುತ್ತಿದ್ದರು. ನಮ್ಮ ಇಡೀ ಆಸೆ ಏನಿತ್ತು, ಮಾನ್ಯ ಅಧ್ಯಕ್ಷರೆ, ಈ ದೇಶದ ರಾಜಕಾರಣ ಕೆಟ್ಟಿರುವುದೇ ಚುನಾವಣೆಯ ಒಂದು ಪ್ರಕ್ರಿಯೆಯಿಂದ. ಭ್ರಷ್ಟಾಚಾರ ಪ್ರಾರಂಭವಾಗುತ್ತಿರುವುದೇ ಅಲ್ಲಿ. ಕೇಂದ್ರದಲ್ಲಿ ಯಾರ್ಯಾರು ಸರ್ಕಾರ ನಡೆಸಿದ್ದರು ಎನ್ನುವುದು ಮಾತು ಬೇರೆ. ಭಾರತ ಚುನಾವಣಾ ಆಯೋಗ ಇಂದು scare crow ಎಂದೇನು ಹೇಳುತ್ತೇವೆಯಲ್ಲ, ಬೆದರು ಗೊಂಬೆಯಾಗಿ ಕುಳಿತಿದೆ. ಅದಕ್ಕೇನೂ ಶಕ್ತಿಯೇ ಇಲ್ಲ, ಅವರೇನು ಕೆಲಸ ಮಾಡುವುದಿಲ್ಲ. ದೇಶದಲ್ಲಿ ಇಂದು ಬಹಳ ಜನ ದೊಡ್ಡ ದೊಡ್ಡ ಆದರ್ಶಗಳನ್ನು ಮಾತನಾಡುತ್ತಿದ್ದಾರೆ. Gandhi statue unveil ಮಾಡಿದ್ದ ದಿವಸ ನಾನು ಆ ಸಭೆಯಲ್ಲಿದ್ದೆ. ನೀವು ಮೂರೇ ನಿಮಿಷ ಮಾತನಾಡಿದ್ದು. ನಿಮ್ಮ ವಯಸ್ಸಿಗೆ ಆ spirit ನಿಮ್ಮಲ್ಲಿ ಇನ್ನೂ ಜೀವಂತವಿದೆ ಎಂದು ನಾನು ಆ ದಿವಸವೇ ನೋಡಿದ್ದು. ಆ ದಿವಸ ನೀವು "ನಮಗೆ ಇವೆಲ್ಲಾ ಗೊತ್ತಿಲ್ಲ, ಇಂಕ್ವಿಲಾಬ್ ಜಿಂದಾಬಾದ್ ಅಷ್ಟೆ" ಎಂದು ನೀವು ಹೇಳಿದಿರಿ. ತಮಗೆ ನೆನಪು ಇದೆಯೆ? 23 ವರ್ಷ ವಯಸ್ಸಿನ ಭಗತ್ ಸಿಂಗ್‌ನ ಕಾಲಿಗೆ ಮರಳಿನ ಮೂಟೆ ಕಟ್ಟಿಬಿಟ್ಟು ಕೊರಳಿಗೆ ಹಗ್ಗ ಹಾಕಿ ಸಾಯುವವರೆಗೆ ಎಳೆಯಬೇಕು ಎಂದು ತೀರ್ಮಾನ ಮಾಡಿದಾಗ ಆ ಕ್ಷಣದಲ್ಲಿಯೂ ಕೂಡ ಅವನು ಅಮ್ಮ ಎನ್ನಲಿಲ್ಲ, ಅಪ್ಪ ಎನ್ನಲಿಲ್ಲ, ಬೇರೆ ಏನನ್ನೂ ಹೇಳದೆ "ಇಂಕ್ವಿಲಾಬ್ ಜಿಂದಾಬಾದ್" ಎಂದು ಅಷ್ಟೇ ಹೇಳಿದ್ದು. ಅಲ್ಲಿಂದ ನಾವು ಪ್ರಾರಂಭವಾಗುತ್ತೇವೆ. ಚುನಾವಣಾ ಪ್ರಕ್ರಿಯೆಯ ಹೆಸರಿನಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಇಂದು ಮಾರಾಟಕ್ಕಿಟ್ಟು ಬಿಟ್ಟಿದ್ದೇವೆ. ನಾವು ಅತ್ಯಂತ ಕಳಕಳಿಯಿಂದ ಇವರಲ್ಲಿ ಮನವಿ ಮಾಡಿಕೊಂಡೆವು. ಭಾರತ ಚುನಾವಣಾ ಆಯೋಗಕ್ಕೆ ನಾವು ಮಾರ್ಗ

ದರ್ಶಕರಾಗೋಣ, ಆದರ್ಶರಾಗೋಣ, State to meet the election expenses, candidate ಹಣ ಖರ್ಚು ಮಾಡಬಾರದು, ಮದ್ಯ ಸಿಗಬಾರದು, ಚುನಾವಣಾ ಅವಧಿ ಹೆಚ್ಚು ದಿವಸ ಆಗಬಾರದು. ನಮ್ಮ ದೌರ್ಭಾಗ್ಯ ಇಂದು ಒಂದು ವೇಳೆ ಇವರು ತೀರ್ಮಾನ ತೆಗೆದುಕೊಂಡು ಮಾಡಿದ್ದಿದ್ದರೆ ಶ್ರೀಮಾನ್ ಸಿದ್ದರಾಮಯ್ಯನವರು, ಶ್ರೀಮಾನ್ ಹೆಚ್.ಕೆ. ಪಾಟೀಲ್‌ರವರು ಮತ್ತು ಇಡೀ ಮಂತ್ರಿಮಂಡಲ ಎದೆ ತಟ್ಟಿಕೊಂಡು ಮಾನ್ಯ ನರೇಂದ್ರ ಮೋದಿಯವರಿಗೆ ಹೇಳಬಹುದಾಗಿತ್ತು. ನಾವು ಇರುವ ರಾಜ್ಯದಲ್ಲಿ ನಾವು ಚುನಾವಣಾ ಸುಧಾರಣೆಯನ್ನು ತಂದಿದ್ದೇವೆ, ಭಾರತ ಮಟ್ಟದಲ್ಲಿ ತರುವುದಕ್ಕೆ ನಮಗೆ ಅವಕಾಶವಿಲ್ಲ, ನಿಮಗೆ ಸಾಧ್ಯವಾದರೆ ಮಾಡ್ರಿ ಎಂದು ಹೇಳಬಹುದಾಗಿತ್ತು. ನೀವು ಮಾಡಲಿಲ್ಲ. ಇದನ್ನೇ ನಾನು ಹೇಳಿದ್ದು opportunity came to your door, but you did not use it ಈಗ ಮಾನ್ಯ ಶಿವಲಿಂಗೇಗೌಡರವರು ಮಾತನಾಡುವುದನ್ನು ನಾನು ಕೇಳಿದೆ. ತಾವು ಮಾತನಾಡುವುದನ್ನು ನಾನು observe ಮಾಡಿದೆ. NREGA. ನಮ್ಮವರು ಏನು ತಿಳಿದುಕೊಂಡಿದ್ದಾರೆ? ಯಾರಿಗೆ ವಿದ್ಯಾಭ್ಯಾಸ ಇಲ್ಲದೆ, ಆಸ್ತಿಪಾಸ್ತಿ ಇಲ್ಲದೆ, ಯಾವ ಕುಶಲತೆ ಇಲ್ಲದೆ, ಶರೀರದಲ್ಲಿರುವ ಶ್ರಮವನ್ನಷ್ಟೇ ಬಂಡವಾಳವನ್ನಾಗಿಸಿಕೊಂಡು ಕೂಲಿಯಿಂದ ಜೀವನ ಮಾಡುತ್ತಿದ್ದ, ಅವನು ಈ ಭಾರತ ದೇಶದಾದ್ಯಂತ ಇದ್ದಾನೆ ತಾನೆ. ಹಿಮಾಚಲ ಪ್ರದೇಶದಲ್ಲಿರುವವನು ಸ್ಥಿತಿ ಒಂದು ರೀತಿ ಇರಬಹುದು, ಮೇಘಾಲಯದಲ್ಲಿರುವವನ ಪರಿಸ್ಥಿತಿ ಮತ್ತೊಂದು ಇರಬಹುದು, ಕೋಲ್ಕತ್ತಾದಲ್ಲಿ ಮತ್ತೊಂದು ಇರಬಹುದು, ಕರ್ನಾಟಕದಲ್ಲಿ ಇನ್ನೊಂದು ಇರಬಹುದು. ಭಾರತ ದೇಶದ ವ್ಯಾಪ್ತಿಯಾಗಿ ಅವರಿಗೆ ಒಂದು ವರ್ಷಕ್ಕೆ to start with ಕನಿಷ್ಠ ನೂರು ದಿವಸವಾದರೂ ಕೂಲಿ ಕೊಡಬೇಕು. ಮೊದಲಿಗೆ NREP ಎಂಬ programme ಇತ್ತು. ಆಮೇಲೆ RLEGS programme ಬಂತು. ಇವೆಲ್ಲ ಸುತ್ತೋಲೆ ಮೇಲೆ ಇದ್ದಂಥ ಕಾರ್ಯಕ್ರಮಗಳು. ದುಡಿಯುವ ವರ್ಗ ಯಾರು ಇದ್ದಾರೆಯೋ, ಅಂದರೆ, ಹೊಟ್ಟೆ ಪಾಡಿಗಾಗಿ ಬೇರೆಯವರ ವರಾಂಡದಲ್ಲಿ ಕಾಯಬೇಕಾಗಿತ್ತೋ, ಅವರು ಸ್ವಾಭಿಮಾನದಿಂದ ದುಡಿದುಕೊಂಡು ಜೀವನ ಮಾಡುವುದಕ್ಕೆ minimum wages ಅನ್ನು ನಿಗದಿ

ಮಾಡಿ 100 ದಿವಸ ಅವರಿಗೆ ಕೆಲಸ ಕೊಡಲೇಬೇಕೆಂದು ಪಾರ್ಲಿಮೆಂಟ್‌ನಲ್ಲಿ ಶಾಸನ ಮಾಡಿದ್ದೇವೆ. It is not a circular, it is a law. ದುಡಿಮೆಯೆ ಹಕ್ಕು ಎಂದು ತಾವು ಹೇಳಿದ್ದೀರಿ. ಆ ಪದಕ್ಕೆ ಎಷ್ಟು ಮಹತ್ವ ಇದೆ ಎನ್ನತಕ್ಕಂಥದ್ದು ಆ ಸಿದ್ದಾಂತದ ಪರಿಚಯ ಇದ್ದವರಿಗೆ ಮಾತ್ರ ಅರ್ಥವಾಗುತ್ತದೆ. ಕಾಂಪೌಂಡ್ ಗೋಡೆ ಕಟ್ಟುವುದಕ್ಕೋಸ್ಕರ ಅಥವಾ ಇನ್ಯಾವುದು ಕೆಲಸ ಮಾಡಿಸುವುದಕ್ಕೆ NREGA ಮಾಡಿಲ್ಲ. ಅವರಿಗೆ ಹಣ ಹೇಗೆ ಹೋಗಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಕ್ಕಾಗಿ job card ಇರಲೇಬೇಕೆಂದು ಮಾಡಿದ್ದೇವೆ. ಮಧ್ಯವರ್ತಿ ಬರುತ್ತಾರೆಂದು ಆತನ accountಗೆ ಹಣ ಹೋಗಬೇಕೆಂದು ಮಾಡಿದ್ದೇವೆ. ನಮ್ಮ ಊರಿನಲ್ಲಿ ಒಂದು ದಿವಸಕ್ಕೆ 400 ರೂಪಾಯಿ ಕೂಲಿ ಕೊಡುತ್ತಾರೆ. ಆದರೆ, ಸರ್ಕಾರ ಕೊಡತಕ್ಕಂಥದ್ದು ಕಡಿಮೆ ಇದೆ. ಕೂಲಿ ಮಾಡುವವನಿಗೆ ಲಾಭವೇ ಆಗುತ್ತಿದೆ. ಆತ card ಅನ್ನು ನನ್ನ ಕೈಗೆ ಕೊಟ್ಟು, ಆತ 400 ರೂಪಾಯಿ ಕೂಲಿಗಾಗಿ ದುಡಿಯುತ್ತಾನೆ. ನೀವು card ಇಟ್ಟುಕೊಂಡು contractor ಹತ್ತಿರ ಕೆಲಸ ಮಾಡುತ್ತೀರಿ. ಇಲ್ಲಿ ಏನು ಅನ್ಯಾಯವಾಯಿತು? ಯಾರ ಒಡವೆ ಯಾರು ತಿಂದರು? ಆತನ ದುಡಿಮೆಗೆ ಒಂದು ಗೌರವ, ಮಹತ್ವ ಏನಾದರೂ ಈ ಕಾಲಕ್ಕೆ ಬಂದಿದೆಯೇ? ಇಷ್ಟು ದಿವಸ ಆತನ ದುಡಿಮೆಯ ಮೇಲೆ ನಾವು ಕುಳಿತುಕೊಂಡು ಕಾಲು ಮೇಲೆ ಕಾಲು ಹಾಕಿಕೊಂಡು ಊಟ ಮಾಡಿದ್ದೇವೆ. ಆತನ ದುಡಿಮೆಗೆ ಮಹತ್ವ ಬಂದ ತಕ್ಷಣ ನಮಗೆ ಸ್ಪೈರಣೆಯೇ ಇಲ್ಲದೆ ಹೋಗುತ್ತದೆಯೇ? ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿತ್ತು. ಆದರೆ, ಮಾಡುವುದಕ್ಕೆ ಆಗಲಿಲ್ಲವೆಂದು ತಾವು ಹೇಳಿದ್ದೀರಿ. NREGA programme ಮಾಡಬೇಕಾದರೆ ಸರ್ಕಾರ ಹಾಕಿರತಕ್ಕಂಥ ನಿಬಂಧನೆಗಳನ್ನು ಅಡ್ಡ ಇಟ್ಟುಕೊಳ್ಳುವುದು, technicalities ಅನ್ನು ಅಡ್ಡ ಇಟ್ಟುಕೊಳ್ಳುವುದು, ಆಸ್ತಿ ನಿರ್ಮಾಣ ಮಾಡುವುದಕ್ಕೆ ಅಡ್ಡ ಬರುವುದು. That is not right. ನಿಮ್ಮ circular instructions ಏನು ಇವೆಯೋ ಅವುಗಳನ್ನು ಸ್ವಲ್ಪ ಸಡಿಲಗೊಳಿಸಿ, ತೊಂದರೆ ಏನಿಲ್ಲ. ಮೊದಲಿಗೆ ಕೂಲಿ ಮಾಡುವವರಿಗೆ ಅಗಾಧವಾದ ಶಕ್ತಿ ಇತ್ತು. ಆದರೆ, ಇವತ್ತಿನ ದಿವಸ ಆತನೂ ಕೂಡ ದೈಹಿಕವಾಗಿ ಬಲಾಢ್ಯನಾಗಿಲ್ಲ. ನಮ್ಮ ಕಡೆ

ಮಣ್ಣು ಅಗೆಯುವುದಕ್ಕೆ ಬಂದರೆ, ಆತನಿಗೆ ಅಗೆಯುವುದಕ್ಕೆ ಸಾಧ್ಯವೇ ಇಲ್ಲ. ಈಗ machinery ಅನ್ನ ಉಪಯೋಗ ಮಾಡುತ್ತೇವೆ. ಕೆಲಸ ಮಾಡದೆ ಎಲ್ಲಾ cards entry ತೋರಿಸಿ, ಯಾವುದೇ ಆಸ್ತಿ ನಿರ್ಮಾಣ ಮಾಡದೆ ಎಲ್ಲಾ ದುಡ್ಡನ್ನು ಸ್ವಾಹಾ ಮಾಡಿದ್ದರೆ, that is wrong. ಗ್ರಾಮಸ್ಥರೆಲ್ಲರೂ ಕುಳಿತುಕೊಂಡು ಮಾತನಾಡಿ cards ಗಳನ್ನು ಕೊಟ್ಟು ಅವರ ಕೈಯಲ್ಲಿ ಆದ labour contribution ಅನ್ನು ಮಾಡಿ ಅಷ್ಟೋ ಇಷ್ಟೋ machinery ಅನ್ನು ಬಳಸಿಕೊಂಡು ಒಂದು ಆಸ್ತಿಯನ್ನು ನಿರ್ಮಾಣ ಮಾಡಿದರೆ, ಅಂದರೆ ಒಂದು compound ಕಟ್ಟಿದರೆ ಅಥವಾ ಒಂದು ಶಾಲೆಯ ಹತ್ತಿರ ಒಂದು ಚರಂಡಿ ಅಥವಾ ಊರಲ್ಲಿ ಚರಂಡಿ ವ್ಯವಸ್ಥೆ ಮಾಡಿದರೆ ಅದಕ್ಕೆ ಯಾರದೇನು complaint? ಇವತ್ತಿನ ದಿವಸ ಊರುಗಳಲ್ಲಿ ಪಾರ್ಟಿಗಳಿವೆ. ಒಬ್ಬ ಕಾಂಗ್ರೆಸ್, ಒಬ್ಬ ಜೆಡಿಎಸ್, ಮತ್ತೊಬ್ಬ ಬಿಜೆಪಿ ಪಾರ್ಟಿಯವರು ಇರುತ್ತಾರೆ. ಆತ ಕೆಲಸ ಮಾಡಿದರೆ ಈಗ complaint ಕೊಡುತ್ತಾನೆ. ಈತ ಮಾಡಿದರೆ ಆತ complaint ಕೊಡುತ್ತಾನೆ. ಇವರಿಬ್ಬರೂ complaint ಕೊಟ್ಟ ಮೇಲೆ ಅಲ್ಲಿಗೆ ಕೆಲಸ ಮುಗಿದು ಹೋಯಿತು. ನನ್ನದೇ ಸ್ವಂತ ಗ್ರಾಮದಲ್ಲಿ ಏನಾಗಿದೆ ಎಂದರೆ, ನಮ್ಮೂರಲ್ಲಿ ಪಾರ್ಟಿ ಇದೆ. ನಿಮ್ಮ ಪಾರ್ಟಿ ಇಟ್ಟುಕೊಂಡು ನಿಮ್ಮ ಪಾರ್ಟಿಯವರಿಗೆ ನೀವು ವೋಟು ಹಾಕಿ ಪರವಾಗಿಲ್ಲ. ಆದರೆ, ನಿಮ್ಮ ಮನೆಯ ಮುಂದೆ ಇರುವ ಚರಂಡಿ clean ಆಗುವುದು ಬೇಡವೇ ಎಂದು ನಾನು ಅವರ ಮನೆಗಳಿಗೆ ಹೋಗಿ ಹೇಳಿದೆ. ಈ ಕೆಲಸವನ್ನು ನೀವೇ ಮಾಡಿ ಎಂದು ನಾನು ಹೇಳಿದೆ. ಇದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ, ಊರಿನಲ್ಲಿ ಚರಂಡಿಯನ್ನು ಯಾವ ಕಾಲಕ್ಕೆ ಮಾಡಲಿ, ದುಡ್ಡು ಎಲ್ಲಿಂದ ತರಲಿ ಈಗ ಈ ಯೋಜನೆಯಲ್ಲಿ ದುಡ್ಡು ಬಂದಿವೆ ಎಂದು ಹೇಳಿದ್ದಕ್ಕೆ ಅವರೇ ಸೇರಿಕೊಂಡು ಕೆಲಸ ಮಾಡಿದರು. ಇವತ್ತು ಮುಕ್ಕಾಲು ಭಾಗ ಊರೆಲ್ಲ clean ಆಗಿದೆ. cement road ಎಂದು ಮಾನ್ಯ ಶಿವಲಿಂಗೇಗೌಡರು ಮಾತನಾಡುತ್ತಿದ್ದರು. ನಾನು ಸ್ವತ: ನಮ್ಮ ಜಿಲ್ಲಾ ಸಭೆಯಲ್ಲಿ approval ತೆಗೆದುಕೊಂಡಿರುವುದು ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ. ಉಪಯೋಗ ಮಾಡುವ ಜಲ್ಲಿಯನ್ನು ತಾವು material ಎಂದು ನೀವು consider ಮಾಡಕೂಡದು. ಅದು manual

labour ಆಗಿದೆ. Cement ಒಂದನ್ನು ಬಿಟ್ಟು ಉಳಿದೆಲ್ಲವುಗಳು ಸಹ material component ಅಲ್ಲ, ಅವೆಲ್ಲ labour component ಆಗಿದೆ. ಸಿಮೆಂಟ್ ರಸ್ತೆಗಳನ್ನು ನಾವು ಮಾಡಬಹುದು. ಆದರೆ, ಆ ಜನರಿಗೆ ಬಿಡಬೇಕು. ನಮ್ಮಲ್ಲಿ ಲೋಪದೋಷಗಳನ್ನು ಇಟ್ಟುಕೊಂಡು.

ಅಧ್ಯಕ್ಷರು:– ಅವರಿಗೆ ವಾರಕ್ಕೆ ಒಂದು ದಿವಸ ಸಂಬಳವನ್ನು ಕೊಟ್ಟರೆ ಸಾಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ನಮ್ಮ ಬುದ್ಧಿಗೆ ಅದು ಸಣ್ಣತನ.

ಅಧ್ಯಕ್ಷರು:– ಕಾನೂನು ಹೇಗಿದೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್:– ನಮಗೆ ಹೃದಯ ವೈಶಾಲ್ಯತೆ ಇಲ್ಲ. ನಾವು ಎಲ್ಲೋ ಒಂದು ಕಡೆಗೆ ಅಡ್ಡ ಬರುತ್ತೇವೆ. ಗ್ರಾಮ ಪಂಚಾಯಿತಿಯವರಿಗೆ ನಾವು ಅಧಿಕಾರ ಕೊಡಬಾರದೆಂದು ಇಲ್ಲಿ ಬಹಳ ಮಾತನಾಡುತ್ತೇವೆ. ಆದರೆ, ನಮಗೆ ಯಾರು ಅಧಿಕಾರ ಕೊಟ್ಟವರು? ಆಕಾಶದಿಂದ ಕೊಟ್ಟಿದ್ದಾರೆಯೇ? ಅಥವಾ ನೇಪಾಳ, ಸಿಲೋನ್‌ನಿಂದ ಯಾರಾದರೂ ಬಂದು ನಮಗೆ ಅಧಿಕಾರ ಕೊಟ್ಟಿದ್ದಾರೆಯೇ? ನಮಗೆ ಅಧಿಕಾರವನ್ನು ಅವರೇ ಅಲ್ಲವೇ ಕೊಟ್ಟಿದ್ದು? ನಮ್ಮನ್ನು ಆಯ್ಕೆ ಮಾಡುವುದಕ್ಕೆ ಅವರಿಗೆ ಬುದ್ಧಿ ಇದೆ, ಅವರ ಕೆಲಸ ಅವರು ಮಾಡಿಕೊಳ್ಳುವುದಕ್ಕೆ ಅವರಿಗೆ ಬುದ್ಧಿ ಇಲ್ಲವೇ? ಕೆಲವು ಇಲಾಖೆಗಳನ್ನು ಅವರಿಗೆ ವರ್ಗಾವಣೆ ಮಾಡೋಣ, ಅಂದರೆ, 29 ಇಲಾಖೆಗಳನ್ನು ಅವರಿಗೆ ವರ್ಗಾವಣೆ ಮಾಡಬೇಕೆಂದು ನಾವು ಶಿಫಾರಸ್ಸು ಮಾಡಿದ್ದೆವು. ಈಗ ಒಂದು ಹೈಸ್ಕೂಲ್ ಇರುತ್ತದೆ. ಅಲ್ಲಿಗೆ Headmaster ಬಂದಿರುತ್ತಾರೆಯೇ ಅಥವಾ ಇಲ್ಲವೇ ಎಂದು ಮತ್ತು ಎಸ್‌ಎಸ್‌ಎಲ್‌ಸಿ results ಎಷ್ಟು ಬಂದಿದೆ, ಹಾಸ್ಟೆಲ್ ಇದೆಯೇ ಅಥವಾ ಇಲ್ಲವೇ ಎಂದು ಎಲ್ಲಾ ಮಕ್ಕಳು ಓದುತ್ತಿದ್ದಾರೆಯೇ ಅಥವಾ ಇಲ್ಲವೇ ಎಂದು ನೋಡಬೇಕಲ್ಲವೇ? ಇವತ್ತಿನ ದಿವಸ ಅನುಕೂಲಸ್ಥರ ಮಕ್ಕಳು private school ಗೆ ಹೋಗುತ್ತಾರೆ. ಆದರೆ, ಅವರನ್ನು ವಿಚಾರಣೆ ಮಾಡುವುದಕ್ಕೆ

ಯಾರು ಹೋಗಬೇಕು? BEO ಹೋಗಬೇಕೆ? DDPI ಹೋಗಬೇಕೆ? ಅಲ್ಲಿನ ಪಂಚಾಯಿತಿಯಲ್ಲಿರುವ ಮಕ್ಕಳು ಅಲ್ಲಿ ಓದುತ್ತಾರೆ. ಆದ್ದರಿಂದ, ಅವರ ಬಗ್ಗೆ ವಿಚಾರಣೆ ಮಾಡುವುದು. ಅವರು ಸರಿ ಇಲ್ಲದಿದ್ದರೆ ಏನಪ್ಪ ಮೇಷ್ಟ್ರು ರಜಾ ಹಾಕಿ ಹೋಗಿಬಿಟ್ಟ 6 ತಿಂಗಳಾದರೂ ಬರಲಿಲ್ಲ, ಈಗ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರುತ್ತಿದೆ, ನಮ್ಮ ಹುಡುಗರು pass ಆಗಬೇಕೆಂಬ ಕಾಳಜಿ ಅವರ ತಂದೆ-ತಾಯಿಗಳಿಗೆ ಇರುತ್ತದೆಯೇ ಅಥವಾ ಅವರಿಂದ ಆಯ್ಕೆ ಆದ ಸದಸ್ಯರಿಗೆ ಇರುತ್ತದೆಯೇ ಅಥವಾ BEO, DDPIಗೆ ಇರುತ್ತದೆಯೇ? ಅದು ನಮ್ಮ ಹತ್ತಿರ ಅಂದರೆ ಎಂಎಲ್‌ಎ ಹತ್ತಿರ ಇರಬೇಕೇ? ಈತ ಅಲ್ಲಿ ಇರಬೇಕು ಅಥವಾ ಇರಬಾರದೆಂದು ನಾವು ಬರೆಯಬೇಕು. ನೀವು ನಮಗೆ ಕೊಡುವ letter pads ನಲ್ಲಿ ವರ್ಗಾವರ್ಗಿ ಬರೆಯುವುದಕ್ಕಾಗಿಯೇ? ಇದು ಬೇಡವೆಂದು ನಾವು ಹೇಳಿದ್ದೇವೆ. Foot and Mouth ಕಾಯಿಲೆ ಬಂದು ನಮ್ಮ ಜಾನುವಾರುಗಳೆಲ್ಲವು ಸತ್ತು ಹೋದವು. Medicine, vaccine ಇತ್ತೋ, ಇರಲಿಲ್ಲವೋ ಅಥವಾ ಡಾಕ್ಟರ್ ಇದ್ದಾನೆಯೋ ಅಥವಾ ಇಲ್ಲವೋ ಅಥವಾ ಬರಲಿಲ್ಲವೋ, ಇದನ್ನು ಕೇಳುವುದಕ್ಕೆ ಯಾರಿಗೆ ಅಧಿಕಾರ ಇದೆ? ತಾಲ್ಲೂಕು ಪಂಚಾಯಿತಿಗೆ, ಜಿಲ್ಲಾ ಪಂಚಾಯಿತಿಗೆ ಅಧಿಕಾರ ಇದೆಯೇ? ಅಥವಾ CEO ಹೋಗಿ ವಿಚಾರಿಸುತ್ತಾರೆಯೇ? ಇವತ್ತಿನ ದಿವಸ ಒಂದು cross bread cow ಮೇಲೆ ಸುಮಾರು 30 ರಿಂದ 40 ಸಾವಿರ ಬಂಡವಾಳ ಹಾಕಿರುತ್ತೇನೆ. ನನ್ನ ಇಡೀ ಬದುಕು ಅದರ ಮೇಲೆ ಅವಲಂಬಿಸಿರುತ್ತದೆ. ಅದಕ್ಕೆ ಕಾಯಿಲೆ ಬಂದು ಅದು ಸತ್ತು ಹೋಗುತ್ತದೆ. ಆಗ ಅದನ್ನು ನೋಡುವುದಕ್ಕೆ ಬೆಂಗಳೂರಿನಿಂದ Animal Husbandry Minister ಬರಬೇಕೆ? IAS ಅಧಿಕಾರಿ ಬರಬೇಕೆ? ಅಲ್ಲಿ ಡಾಕ್ಟರ್ ಯಾರು ಇರಬೇಕೆಂದು ಮತ್ತು ಆಸ್ಪತ್ರೆ ಎಲ್ಲಿ ಇರಬೇಕೆಂದು ಮತ್ತು ಡಾಕ್ಟರ್ ಬಂದಿದ್ದಾರೆಯೇ ಅಥವಾ ಇಲ್ಲವೇ ಎಂದು ಮತ್ತು vaccine ಇದೆಯೇ ಅಥವಾ ಇಲ್ಲವೇ ಎಂದು ನೋಡಿ ಔಷಧಿಗಳನ್ನು ಕೊಡಿ ಎಂದು ಹೇಳಿ ಆತ ವಿಚಾರಣೆ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟರೆ ನಮಗೇನು ಲುಕ್ಸಾನು ಆಗುತ್ತದೆಯೇ? ನಮ್ಮ ಹೊರೆ ಕಡಿಮೆ ಆಗುವುದಿಲ್ಲವೇ? ಇದರಲ್ಲಿ ಏನಾದರೂ ಪಾಳೆಗಾರಿಕೆ ಇದೆಯೇ? Reservation ಇದೆ ಮತ್ತೆ Membersಗೆ

ವಿವೇಚನೆ ಇರುತ್ತದೆ. ಮತ್ತೆ ಈ ಅಧಿಕಾರಿಗಳ ಮೇಲೆ ನಿಯಂತ್ರಣ ಇರಬೇಕು. ನಾನು ನಮ್ಮ Forester ಅನ್ನು ಕರೆದು silver oak, eucalyptus ತಂದು ಇಲ್ಲಿ ನೆಡುವುದಕ್ಕೆ ನಿಮಗೆ ಯಾರು ಹೇಳಿದರು ಎಂದು ಕೇಳಿ, ಇಲ್ಲಿ ಬೇವು, ಹೊಂಗೆ ಅಥವಾ oversee ಏನಾದರೂ ತೆಗದುಕೊಂಡು ಬಂದು ನೆಡಬಾರದೆ ಎಂದು ಕೇಳಿದರೆ ಈ ಬಗ್ಗೆ ನಮ್ಮ ಸಾಹೇಬರಿಗೆ ಹೇಳಿ ಎಂದು ಹೊರಟು ಹೋಗುತ್ತಾನೆ. ನನಗೆ ಆತ answerable ಅಲ್ಲ. ಆತನ confidential report ಬರೆಯುವ ಅಧಿಕಾರವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಕೊಟ್ಟು ಆತ ಅಲ್ಲಿಗೆ ಬಂದು ನಿಂತುಕೊಳ್ಳಬೇಕೆಂದು ಹೇಳಬಹುದು. ಬೆಂಗಳೂರಿನಲ್ಲಿ treasurey ಇಟ್ಟುಕೊಂಡಿರುವ ನಿಮಗೆ ಕೆಳಗಿರುವವರೆಲ್ಲ ಕಳ್ಳರು ಎಂದು ನಿಮಗೆ ಅನುಮಾನವೇ? ಯಾವ್ಯಾವ ಕಾರ್ಯಕ್ರಮಗಳನ್ನು ಅಲ್ಲಿ ಮಾಡಬೇಕೆಂದು ಅದಕ್ಕಾಗಿ ಮೀಸಲಾಗಿಟ್ಟಿರುವ ಹಣವನ್ನು ವ್ಯವಸ್ಥಿತವಾಗಿ ಇಲಾಖಾವಾರು, ಪಂಚಾಯತ್‌ವಾರು ಬಜೆಟ್ ಆದತಕ್ಷಣ ಅವರಿಗೆ ನೀವು transfer ಮಾಡಿ ಅವರ ಕರ್ತವ್ಯ ಏನೆಂದು ನಿಗದಿ ಮಾಡಿ ಅವರ ಜವಾಬ್ದಾರಿಯನ್ನು ನಿಗದಿ ಮಾಡಿ, audit system ಅನ್ನು sterengthen ಮಾಡಿ. ಇವತ್ತಿನ ದಿವಸ ಎಲ್ಲಿಂದ ಯೋಜನೆಗಳು ರೂಪಿತವಾಗಬೇಕು? ಮೇಲಿಂದ ಕೆಳಕ್ಕೆ ಮಾಡಬೇಕೆ ಅಥವಾ ಕೆಳಗಿನಿಂದ ಮೇಲಕ್ಕೆ ಮಾಡಬೇಕೆ? ಅಥವಾ ನೀತಿ ಆಯೋಗದವರು ಯೋಜನೆಯನ್ನು ಮಾಡಬೇಕೆ? ನಿಮ್ಮ ಬಜೆಟ್ ಮಾರ್ಚ್ end ನಲ್ಲಿ prepare ಆಗುವ ಮೊದಲು ಪ್ರತಿಯೊಂದು ಗ್ರಾಮ ಪಂಚಾಯತಿಯವರು ಅವರ ಯೋಜನೆಯನ್ನು ಅವರೇ ರೂಪಿಸಬೇಕು. ಅದು ಪರಿಷ್ಕರಣೆ ಆಗಿ ತಾಲ್ಲೂಕು ಪಂಚಾಯಿತಿಗೆ ಬಂದು ಅನಂತರ ಜಿಲ್ಲಾಪಂಚಾಯಿತಿಗೆ ಬರಬೇಕು. Cumulative ಆಗಿ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಂದ ಬರತಕ್ಕಂಥದ್ದನ್ನು ನೋಡಿಕೊಂಡು ರಾಜ್ಯದ ಯೋಜನೆ ready ಆಗಬೇಕು. ಈ ರೀತಿ ಇರಬೇಕೆಂದು ನಾವು suggest ಮಾಡಿದ್ದೇವೆ. ಈಗ Town Planning Authority ಇದೆ. Country Planning Authority ಕೆಲಸ ಮಾಡುತ್ತಿದೆಯೇ? ಹಳ್ಳಿಯಲ್ಲಿ ಸ್ಮಶಾನ ಇದೆಯೇ ಎಂದು check ಮಾಡಿದ್ದೀರಾ? ಹಳ್ಳಿಯಲ್ಲಿ ಮನೆ ಯಾರು ಕಟ್ಟಬೇಕು, ಯಾರು ಕಟ್ಟಬಾರದು, ಎಲ್ಲಿ ಕಟ್ಟಬೇಕು, ಎಲ್ಲಿ

ಕಟ್ಟಬಾರದು ಎಂದು ಆಲೋಚನೆ ಮಾಡಿದ್ದೀರಾ? ನಮ್ಮ ಸಮಿತಿಯ ಸದಸ್ಯರುಗಳು ಕೆಲವು ರಾಜ್ಯಗಳಿಗೆ ಹೋಗಿ ಬಂದರು. ಆ ರಾಜ್ಯಗಳಿಗೆಲ್ಲಾ ಹೋಗಿ ಬಂದ ಮೇಲೆ ಎಲ್ಲೆಲ್ಲಿ ಎಷ್ಟೆಷ್ಟು ಸ್ವಾತಂತ್ರ್ಯ ಕೊಟ್ಟಿದ್ದಾರೆ. ಅದನ್ನು ಅಭ್ಯಾಸ ಮಾಡಿಕೊಂಡು ಬಂದ ಮೇಲೆ ಇಲ್ಲಿ 4 Revenue Divisions ನಲ್ಲಿ ಪಕ್ಷದ ಹೆಸರೇ ಇಲ್ಲದೆ ಈ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಎಲ್ಲ ಕ್ರಿಯಾಶೀಲ ವ್ಯಕ್ತಿಗಳನ್ನು Revenue Division-wise ಒಂದೊಂದು head quarters ನಲ್ಲಿ meeting ಮಾಡಿ, ಸ್ಥಳೀಯ ಸಂಸ್ಥೆಗಳಿಂದ ಆಯ್ಕೆ ಆಗಿ ಬಂದಿರತಕ್ಕಂಥ ವಿಧಾನ ಪರಿಷತ್ತಿನ ಸದಸ್ಯರುಗಳ ಜೊತೆಯಲ್ಲಿ ಚರ್ಚೆ ಮಾಡಿದೆವು. ಎಲ್ಲ ರಾಜಕೀಯ ಪಕ್ಷಗಳಿಗೆ ಮುಕ್ತ ಆಹ್ವಾನವನ್ನು ಕೊಟ್ಟು ನಿಮ್ಮ ಪ್ರತಿನಿಧಿಗಳನ್ನು ಕರೆಸಿಕೊಂಡು ಚರ್ಚೆ ಮಾಡಿದೆವು. ಪ್ರತಿ ಪಕ್ಷಗಳ ಮುಖಂಡರುಗಳಿಗೆ ಪತ್ರ ಬರೆದು ಅವರ ಅಭಿಪ್ರಾಯವನ್ನು ತೆಗೆದುಕೊಂಡೆವು. ಪ್ರಜಾಸತ್ತಾತ್ಮಕವಾಗಿ ಇರಬೇಕು ಎನ್ನುವ ಕಾರಣಕ್ಕೆ ದಲಿತ ಸಂಘರ್ಷ ಸಮಿತಿಯವರನ್ನು ಕರೆದೆವು. Employees' Association ರವರನ್ನು ಕರೆದೆವು. ಇವರ ಅಭಿಪ್ರಾಯ ಕೇಳಿದ್ದೇವೆ, ಇವರ ಅಭಿಪ್ರಾಯ ಕೇಳಿಲ್ಲಾ ಎನ್ನುವ ಪ್ರಶ್ನೆಯೇ ಇಲ್ಲ. ಏನು ಕಷ್ಟ ಇದೆ ಇವರಿಗೆ ಅದನ್ನು implement ಮಾಡುವುದಕ್ಕೆ at a stretch ನನಗೆ ಗೊತ್ತಾಗಲೇ ಇಲ್ಲ. ನವೆಂಬರ್ ತಿಂಗಳಿನಲ್ಲಿ ಇದನ್ನು ಕೊಟ್ಟೆವು. ರಾಜೀವ್ ಗಾಂಧೀಜಿಯವರ ಮಂತ್ರಿ ಮಂಡಲದಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿದ್ದಂಥ ಮಣಿಶಂಕರ್ ಅಯ್ಯರವರೇ ಇಲ್ಲಿಗೆ ಬಂದು ನಮ್ಮ ವರದಿಯನ್ನು ನೋಡಿ ಕೆಲವು suggestions ಗಳನ್ನು ಕೊಟ್ಟು ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ಮಾನ್ಯ ಮಂತ್ರಿಗಳು ಎಲ್ಲರೂ ಸಂತೋಷದಿಂದ ಒಪ್ಪಿಕೊಂಡರು. Time ಬೇಕಾದಷ್ಟು ಇತ್ತು. ನೀವು ಈಗಲೂ ಮಾಡಬೇಕು, ಮಾಡುತ್ತೀರಿ ಎನ್ನುವ ವಿಶ್ವಾಸ ಇಟ್ಟುಕೊಂಡಿದ್ದೇನೆ. ನಿಮ್ಮ ಮೇಲೆ ನಾನು charge ಮಾಡುತ್ತಿಲ್ಲ. ನನ್ನ ದುಗುಡವನ್ನು ನಿಮ್ಮ ಮುಂದೆ ವ್ಯಕ್ತಪಡಿಸುತ್ತಿದ್ದೇನೆ. ನಾವು fail ಆಗಿದ್ದೇವೆ. ಇವೆಲ್ಲವನ್ನು ಮಾಡಿ ನೀವು ಜನರ ಮುಂದೆ ಹೋಗಿದ್ದಿದ್ದರೆ, ಇನ್ನೊಂದು ವಿಚಾರ. ತಾಂಡಾಗಳ ವಿಷಯ ಅದು ಇದು ಎಲ್ಲಾ ಮಾತನಾಡುತ್ತೇವೆ. ತಾಂಡಾಗಳು, ಗೊಲ್ಲರಹಟ್ಟಿಗಳು ಇವೆಲ್ಲಾ

ನಮ್ಮ ಕೃಪೆಯಲ್ಲಿ ಧರ್ಮದಲ್ಲಿ ಬದುಕುವುದಾ? ಅವರು ಜನರಲ್ಲವೆ? ಅವರಿಗೇನು ಸ್ವಾಭಿಮಾನ ಇಲ್ಲವೇ? ಅವರು ಈ ದೇಶದ ಪ್ರಜೆಗಳು ಈಗ ಒಂದು constituency ಮಾಡುತ್ತೇವೆ. ಎರಡು–ಮೂರು ಹಳ್ಳಿಗಳು ಸೇರುತ್ತವೆ. ಅದರಲ್ಲಿ hamlet village, ಮಜಿರಾಗ್ರಾಮ ಇರುತ್ತವೆ. ಈಗ ಗ್ರಾಮ ಸಭೆಗಳನ್ನು ಎಲ್ಲಿ ಮಾಡುವುದು ಗೊತ್ತೆ? ಮುಖ್ಯ ಗ್ರಾಮದಲ್ಲಿ ಮಾಡುತ್ತೇವೆ. ಗ್ರಾಮ ಸಭೆಯಲ್ಲಿ ಹೇಳಬೇಕಾಗಿದ್ದರೆ ಆ ಮಜಿರಾಗ್ರಾಮದವರು ಇಲ್ಲಿಗೆ ಬರಬೇಕು. ಗ್ರಾಮ ಸಭೆ ಅಂದರೆ ಅದರ ಅರ್ಥವೇನು? ಅದು ಜನವಸತಿ ಸಭೆ, ಜನ ಎಲ್ಲಿ ಇದ್ದು ವಸತಿಯನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ, ಬದುಕುತ್ತಿರುತ್ತಾರೆ, ಬಾಳು ನಡೆಸುತ್ತಿರುತ್ತಾರೆ. ಅಲ್ಲಿ ಅವರ ಆ ಪರಿಸರದಲ್ಲಿ ಏನಾಗಬೇಕು, ಏನು ಬೇಡವೆಂದು ಹೇಳತಕ್ಕಂಥದ್ದಕ್ಕೆ ನಾವು ಗ್ರಾಮಸಭೆ ಎಂದು ಕರೆಯುವುದು. ಅವರು ಎಲ್ಲವನ್ನು ಹೊತ್ತುಕೊಂಡು ಇನ್ನೊಂದು ಊರಿಗೆ ಬಂದು ಹೇಳುವುದಾದರೆ, ಅದು ಗ್ರಾಮ ಸಭೆ ಆಗುತ್ತದಾ, ಜಾತ್ರೆ ಆಗುತ್ತದೆ, ಕನಿಷ್ಠ ವಾರ್ಡ್ ಸಭೆ ವಿಚಾರದಲ್ಲಿ hamlet ಸಭೆ, ನಾವು ಜನವಸತಿ ಸಭೆ ಎಂದು clarify ಮಾಡಿದೆವು. What held you back I am not able to understand? It hurts us. ನಾನೇನು ರಾಜೀವ್ ಗಾಂಧೀಜಿಯವರ ಜೊತೆ ಇರಲಿಲ್ಲ. ನಾನು 2004 ರಲ್ಲಿ ಈ ಪಕ್ಷ ಸೇರಿದೆ. 1980 ರಲ್ಲಿ ದೇವರಾಜ್ ಅರಸ್ ಹೊರಗೆ ಬಿದ್ದವನು. ಸರಿ ಸುಮಾರು 20–22 ವರ್ಷ ಹೊರಗೆ ಇದ್ದೆ. ಆದರೆ ನೀವು ರಾಜೀವ್ ಗಾಂಧೀಜಿಯವರಿಗೆ ಅತ್ಯಂತ ಆತ್ಮೀಯರಾಗಿದ್ದಂಥವರು. ಏಕೆ, ಹೆಚ್ಚು ಕಡಿಮೆ ಏನಾಯಿತು? ಬಹಳ ಜನ ಕುಡಿಯುವ ನೀರಿನ ಬಗ್ಗೆ ಮಾತನಾಡುತ್ತಿದ್ದರು. ಯಾವ ಊರಿನಲ್ಲಿ ಕುಡಿಯುವ ನೀರು ಇಲ್ಲ, ಎಲ್ಲಿ fluoride ಇದೆ. ಎಲ್ಲಿ tanker supply ಕೊಡಬೇಕು, ಎಲ್ಲಿ ಶುದ್ಧ ನೀರು ಘಟಕ ಹಾಕಬೇಕು, MLA ತೀರ್ಮಾನ ಮಾಡಬೇಕಾ? MP ತೀರ್ಮಾನ ಮಾಡಬೇಕಾ? DC ತೀರ್ಮಾನ ಮಾಡಬೇಕಾ? ಅಥವಾ ಆ ಊರಿನ ಗ್ರಾಮಸ್ಥರು ತೀರ್ಮಾನ ಮಾಡಬೇಕಾ? ನಾನು ಹೇಳಿದ್ದು ಆ ಊರಿನವರು ತೀರ್ಮಾನ ಮಾಡಲಿ. ನೀವು circular ಅನ್ನೇ ಕಳುಹಿಸುತ್ತೇವೆಂದು ಹೇಳುತ್ತೀರಿ. ಯೋಜನೆಗಳು ಎಷ್ಟು? National

Highway, SHDP, K-Ship, CMGSY, PMGSY, NABARD, ನಮ್ಮ ಗ್ರಾಮ ನಮ್ಮ ರಸ್ತೆ, ನಮ್ಮ ಹೊಲ ನಮ್ಮ ರಸ್ತೆ, ನಾವು ಎಲ್ಲಿ suggestions ಕೊಟ್ಟು ಸಾಯುವುದು ಹೇಳಿ. ಯಾವ schemeನಲ್ಲಿ ಯಾವುದಕ್ಕೆ ಹಾಕಿದ್ದರೋ, ಯಾವ department, ಯಾರು ನೋಡುತ್ತಾರೋ ನಮಗೆ ಅರ್ಥವಾಗುವಂತಹ ಪ್ರಶ್ನೆಯೇ ಇಲ್ಲ. The net result, motorable roads ಇದೆಯಾ? ಆ ಊರಿಗೆ ಬಸ್ಸುಗಳು ಹೋಗಬೇಕೆಂದು ಹೇಳುವುದಿಲ್ಲ. ರೈತ ತಾನು ಬೆಳೆದು ಉತ್ಪನ್ನವನ್ನು ಮಾರುಕಟ್ಟೆಗೆ ಸಾಗಿಸುವುದಕ್ಕೆ ಸರಾಗವಾಗಿ ಒಂದು ರಸ್ತೆ ಬೇಕಲ್ಲವೇ? All these schemes, ಈ ಎಲ್ಲಾ ವಿಭಾಗಗಳಿದ್ದು ಕೂಡ ಒಟ್ಟಿಗೆ ಆ ಉದ್ದೇಶವೇನಾದರೂ ಸಾರ್ಥಕಗೊಳಿಸಿದೆಯಾ, ನಮಗೆ ಮನಸ್ಸಿಗೆ ಬಹಳ ಬೇಸರವಾಗುತ್ತದೆ. ನೀರು... ಮಾನ್ಯ ಶಿವಲಿಂಗೇಗೌಡರು ಹೇಳಿದರು. ಬೋರ್‌ವೆಲ್ ವಿಚಾರದ ಬಗ್ಗೆ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸಹ ಹೇಳಿದರು. ಬಿಜಾಪುರದ ಪರಿಸ್ಥಿತಿ ಬೇರೆ, ಶಿರಸಿಯ ಪರಿಸ್ಥಿತಿ ಬೇರೆ, ಶ್ರೀನಿವಾಸಪುರದ ಪರಿಸ್ಥಿತಿಯೇ ಬೇರೆ, ಚಿಕ್ಕಬಳ್ಳಾಪುರದ ಪರಿಸ್ಥಿತಿಯೇ ಬೇರೆಯಾಗಿದೆ. ನಮ್ಮಲ್ಲಿ ಇವತ್ತು ಬೋರ್ ಹಾಕಿದರೆ, drill ಮಾಡಿದರೆ ನೀರು ಸಿಗುತ್ತದೆ, ಅದಕ್ಕೆ ನಾವು energize ಮಾಡಿದರೆ ಪಂಪು ಮೋಟಾರು ಬಿಟ್ಟು ಒಂದು ವಾರದಲ್ಲಿ ಅದು ಬತ್ತಿ ಹೋಗುತ್ತದೆ. ಏನ್ರಿ, ಒಂದೇ ಊರಿಗೆ ಎಷ್ಟು ಬೋರ್ ಹಾಕುತ್ತೀರಿ ಎಂದು, ಇಲ್ಲಿ ಅಧಿಕಾರಿಗಳು ಏನು ಕೇಳುತ್ತಾರೆ, ಅವರಿಗೆ ನಮ್ಮ ಮೇಲೆ ಸಂಶಯ ಇದೆ. ಇವನ್ಯಾರೋ rig ನವರನ್ನು ಹಿಡಿದುಕೊಂಡವನೆ ಎಂಎಲ್‌ಎ ಬೋರ್‌ಗಳನ್ನ ತೋರಿಸಿ ದುಡ್ಡು ಹೊಡೆದುಕೊಳ್ಳುತ್ತಿದ್ದಾರೆಂದು ತಿಳಿದುಕೊಳ್ಳುತ್ತಾರೆ. ನಮ್ಮ ಯೋಗ್ಯತೆಯೂ ಹಾಗೆಯೇ ಇದೆಯಲ್ಲಾ. ನಮಗೆ ದೊಡ್ಡ ಪ್ರಮಾಣದ್ದು ಏನೂ ಸಿಗುವುದಿಲ್ಲವಲ್ಲಾ. ದೊಡ್ಡ ಪ್ರಮಾಣದ್ದು ಅವರಿಗೆ ಸಿಗುತ್ತದೆಯಲ್ಲಾ. ಯಾವಾಗಲೂ ಕೂಡ ದೊಡ್ಡವರಿಗೆ ದೊಡ್ಡ ಪ್ರಮಾಣದ ದುಡ್ಡು ಹೊಡೆಯುವವರಿಗೆ ಸಣ್ಣವರ ಮೇಲೆ ಸಂಶಯ ಇರುವುದು ಸಹಜವೆ. ವಿಭಾಗವಾರು ಕುಡಿಯುವ ನೀರಿನ ಸಮಸ್ಯೆಯ ತೀವ್ರತೆ ರಾಜ್ಯದಲ್ಲಿ ಎಲ್ಲೆಲ್ಲಿ ಯಾವ ಯಾವ ರೂಪದಲ್ಲಿ ಇದೆ ಎಂದು ಹೇಳಿ ಗಮನಿಸಿದ್ದೀರಾ? ಇವತ್ತಿಗೆ

ನಿಮ್ಮ ಹತ್ತಿರ ಏನಾದರೂ ಒಂದು ಖಚಿತವಾದಂತಹ ಮಾಹಿತಿ ಇದೆಯಾ? ಮಾನ್ಯ ಅಧ್ಯಕ್ಷರೆ, ತಾವು ಈ ಬಗ್ಗೆ ಯೋಚನೆ ಮಾಡಿ. 1200-1300 ಅಡಿ ಆಳಕ್ಕೆ ಹೋದಾಗ ಪ್ರಕೃತಿಯಲ್ಲಿ ಆ ಭೂಮಿಯ ರಚನೆ, ಅಷ್ಟು deep ಆಗಿ ಹೋದಾಗ ಆ ಅಂತರದಲ್ಲಿ ಅಷ್ಟು ಆಳದಲ್ಲಿ ಇರತಕ್ಕಂತಹ ನೀರು ಕುಡಿಯುವುದಕ್ಕೆ ಯೋಗ್ಯವಾಗಿರುತ್ತದೆಯೆ ಅಥವಾ ಇಲ್ಲವಾ ಎನ್ನುವಂತಹ ಸಂಶಯ ನಮಗೆ ಬೇಡವೆ. ಅದು ಒಂದು ವೇಳೆ ಆ ಭೂಗರ್ಭದಲ್ಲಿ ಏನೇನು ಇದೆಯೋ ನಮಗೆ ಗೊತ್ತಿಲ್ಲ. ನೇರ ಬಳಕೆಗೆ ಅಪಾಯ ಆದರೆ ಅದಕ್ಕೊಂದು ಶೀಘ್ರವಾದಂತಹ ಒಂದು ಪರೀಕ್ಷೆಯನ್ನು ಮಾಡಿ ಅಲ್ಲಿಗೆ ಯಾವುದೇ ನಿಬಂಧನೆ ಇಲ್ಲ, rules ಇಲ್ಲ, ಅಲ್ಲಿ ಶುದ್ಧ ನೀರಿನ ಘಟಕ ಹಾಕಬೇಕೆಂಬ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿಮಗೆ rules ಬೇಕಾ, ಹೃದಯ ಬೇಕಾ? ನಾನು ತಮ್ಮಲ್ಲಿ ಕೇಳತಕ್ಕಂಥದ್ದು ಇಷ್ಟೆ. ನೀವು ದೆಹಲಿಯಿಂದ ಹೀಗೆ circular ಬಂದಿದೆ, Auditನವರ objection ಹೀಗೆ ಬಂದಿದೆ. ನಾವು 50%, 70% ಕೊಡುತ್ತೇವೆ. ನಮಗೆ ಮಳೆಯೂ ಇಲ್ಲ, ಈ Assembly ಹೇಗೆ ಇರುತ್ತದೆ ಮಳೆ ಜಾಸ್ತಿ ಹುಯ್ದುಬಿಟ್ಟಿತ್ತು, ನಾವು ನಷ್ಟಕ್ಕೆ ಒಳಗಾಗಿದ್ದೇವೆಂದು ಮಾನ್ಯ ಸದಸ್ಯರಾದ ನಿಂಗಯ್ಯನವರು ಎದ್ದು ಹೇಳುತ್ತಾರೆ. ನಮ್ಮಲ್ಲಿ ಕರೆಂಟ್ ಹೋಗಿ 15 ದಿವಸಗಳು ಆಗಿದೆ ನಾನು ನಿಲುವಳಿ ಸೂಚನೆ ಕೊಟ್ಟಿದ್ದೇನೆಂದು ಬೇಲೂರಿನ ಕುಮಾರಸ್ವಾಮಿಯವರು ಹೇಳುತ್ತಾರೆ. ನಮಗೆ ಕುಡಿಯುವುದಕ್ಕೆ ನೀರಿಲ್ಲವೆಂದು ನಾನು ತಮಗೆ ಹೇಳುತ್ತೇನೆ. ನಾವೆಲ್ಲರೂ ಸೇರಿ ಕರ್ನಾಟಕದವರೆ ಅಲ್ಲವೇ? ನೇಪಾಳದಲ್ಲಿ ಯಾರೋ ಭೂಕಂಪದಲ್ಲಿ ಸಿಕ್ಕಿ ಸತ್ತುಹೋದರೆ ನಾವು ಇಲ್ಲಿ ಎದ್ದು ನಿಂತುಕೊಂಡು ಮೌನ ಆಚರಣೆ ಮಾಡುತ್ತೇವೆ, ಸಂತಾಪ ವ್ಯಕ್ತ ಮಾಡುತ್ತೇವೆ. ನಮ್ಮ ಸುತ್ತಮುತ್ತ ಇರುವಂತಹ ಜನರಿಗೆ ಒಂದು ಆತಂಕ ಬಂದಾಗ 1972ರಲ್ಲಿ ತಾವು Assembly ಯಲ್ಲಿದ್ದೀರಿ, ಗುಲ್ಬರ್ಗಾ ಆ ಭಾಗದಲ್ಲಿ ಎಂದೂ ನೋಡದ ಇರತಕ್ಕಂತಹ ಭೀಕರ ಬರಗಾಲವು ಬಂತು. ಆರ್ಮುಗಂ ನೇತೃತ್ವದಲ್ಲಿ committee ಯಲ್ಲಿ ತಾವು ಇದ್ದಿರಿ ಎಂದು ಕಾಣುತ್ತದೆ. ತಾವು ಯಾವ ರೀತಿಯಾಗಿ handle ಮಾಡಿದ್ದೀರಿ? You are not in the ruling party. ಮಾನವೀಯತೆ ಎನ್ನುವುದು

ಆ ದೇವರಾಜ ಅರಸು ಎನ್ನುವಂತಹ ವ್ಯಕ್ತಿಗೆ ಹಿಮಾಲಯ ಬೆಟ್ಟಕ್ಕಿಂತ ದೊಡ್ಡದಾಗಿ ಇದ್ದುದರಿಂದ ಅವತ್ತು ಆ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಆಯಿತಲ್ಲವೇ? ನಾನು ನಿಮ್ಮನ್ನು ಕೇಳುವುದು ಇಷ್ಟೆ, ನಾವೇನು ಬಂಗಾರವನ್ನು ಕೇಳಿದ್ದೇವಾ, ಬೆಳ್ಳಿಯನ್ನು ಕೇಳಿದ್ದೇವಾ, ಕಿರೀಟ ಕೇಳಿದ್ದೇವಾ, ನಾವು ಕುಡಿಯುವ ನೀರಿಗೆ ಕೆಲವು rules ಗಳನ್ನು relax ಮಾಡಬೇಕಾಗುತ್ತದೆ. ಅದು ಕುಡಿಯುವ ನೀರು ಆಗಬಹುದು, ರಸ್ತೆಯ ವಿಚಾರ ಆಗಬಹುದು, ಶೌಚಾಲಯ. ಮೊದಲು ಸ್ವಚ್ಛ ಭಾರತ ಮಿಷನ್ ಬಂತು. ಆಗ ಒಂದು scheme ಮಾಡಿದರು. ಅದರ ಪ್ರಕಾರ ಕೆಲಸವನ್ನು ಹಚ್ಚುವುದಕ್ಕೆ ಶುರು ಮಾಡಿದರು. ಮಧ್ಯದಲ್ಲಿ ಅದನ್ನು ನಿಲ್ಲಿಸಿದರು, ಕೇಂದ್ರ ಸರ್ಕಾರವು ಬದಲಾವಣೆಯಾಯಿತು. ಇವರು NBA ಗೆ ಬಂದರು. ಇವರು NBA ಗೆ ಬಂದ ಮೇಲೆ ಏನು ಮಾಡಿದರೆಂದರೆ ಯಾರ್‍ಯಾರಿಗೆ ಶೌಚಾಲಯ ಇದೆ ಇಲ್ಲವಾ ಎಂದು ತಿಳಿದುಕೊಂಡು ಬಾ ಎಂದು ಹೇಳಿದರು. ಈ ಕೆಲಸವನ್ನು ಅಂಗನವಾಡಿಯಲ್ಲಿರುವಂತಹ ಕಾರ್ಯಕರ್ತೆಯರಿಗೆ ಒಪ್ಪಿಸಿದರು. ಅಂಗನವಾಡಿ ಕಾರ್ಯಕರ್ತರು ಮನೆ ಮುಂದೆ ಹೋಗಿ ನಿಮಗೆ ಶೌಚಾಲಯ ಇದೆಯೇ ಎಂದು ಕೇಳುವುದು. ಆಗ ಆ ಮನೆಯವನು ಪಾಪ ಮೊದಲೇ ಕೆಲಸ ಶುರು ಮಾಡಿದ್ದನ್ನಲ್ಲಾ ಮಾಡುತ್ತಿದ್ದೇವೆ ಇನ್ನೂ ದುಡ್ಡು ಬಂದಿಲ್ಲ ಎಂದು ಹೇಳುತ್ತಾನೆ. ಆಗ ಅಂಗನವಾಡಿಯವರು ಶೌಚಾಲಯ ಇದೆ ಎಂದು ಬರೆದುಕೊಂಡ ಮೇಲೆ NBM ನವರು ಕೇಳುವ ಹಾಗೆ ಇಲ್ಲ. SBM ತೆಗೆದು ಹಾಕಿದರು. ಅವನು ಶೌಚವನ್ನು ನಿಕ್ಕರ್‌ನಲ್ಲಿಯೇ ಮಾಡಿಕೊಂಡು ಹಾಗೆಯೇ ಇದ್ದಾನೆ. ಇದನ್ನು ಯಾರಿಗೆ ಹೇಳಿಕೊಳ್ಳುವುದು? ಎಷ್ಟು ಲಕ್ಷ ಬಾರಿ ಹೇಳಿದರೂ ಅರ್ಥವಾಗುವುದಿಲ್ಲ. ಶೌಚಾಲಯ ನಿರ್ಮಾಣ ಮಾಡಲು ಹಣವನ್ನು ಅವರು ಕೊಡುತ್ತಾರೋ, ಇವರು ಕೊಡುತ್ತಾರೋ ಯಾರು ಕೊಟ್ಟರೂ ತಮ್ಮ ಮನೆಯಿಂದ ಕೊಡುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಎಲ್ಲರೂ ಕೂಡ ಈ ದೇಶದ ಜನರ ಋಣದಲ್ಲಿದ್ದೇವೆ. ಪಕ್ಷ, ಪಂಗಡವನ್ನೆಲ್ಲಾ ತೆಗೆದು ಬಿಸಾಕಿ. ಎಲ್ಲರ ಮನೆಗಳಲ್ಲಿಯೂ ಇವತ್ತು ಹೆಣ್ಣುಮಕ್ಕಳು ಹೈಸ್ಕೂಲ್‌ಗೆ ಹೋಗುತ್ತಿದ್ದಾರೆ. ಹಳೆ ಮುದುಕಿಯರು ಇದ್ದಾಗ

ಅವರು ಪಾಪ ಹೇಗೋ ಸೆರಗು ಮರೆ ಮಾಡಿಕೊಂಡು ಹೋಗಿ ಸೂರ್ಯ ಹುಟ್ಟುವುದರ ಮೊದಲು ಆ ಮರಗಳ ಮಧ್ಯದಲ್ಲಿ ಎಲ್ಲೋ ಕುಳಿತುಕೊಂಡು ಮಾಡಿಕೊಂಡು ಬರುತ್ತಿದ್ದರು. ಇವತ್ತು ಆ ಹೆಣ್ಣುಮಕ್ಕಳಿಗೆ ಸ್ವಾಭಿಮಾನ. ನನ್ನ ಮಗಳು ಇದ್ದಾಳೆ, ನಿಮ್ಮ ಮಗಳು ಇದ್ದಾಳೆ, ನನ್ನ ಮೊಮ್ಮಗಳು ಇದ್ದಾಳೆ, ನಿಮ್ಮ ಮೊಮ್ಮಗಳು ಇದ್ದಾಳೆ. ಅವರು ಶಾಲೆಗೆ ಹೋಗಬೇಕು. ಸ್ನಾನ ಮಾಡಬೇಕೆಂದು ಇಷ್ಟಪಡುತ್ತಾರೆ. ಶೌಚಾಲಯಕ್ಕೆ ಹೋಗುವುದಕ್ಕೆ ಅವರಿಗೆ ಜಾಗವಿಲ್ಲ. ಏನು ಅವರು ಬಡತನದಲ್ಲಿದ್ದ ಮಾತ್ರಕ್ಕೆ, ಸಣ್ಣ ಸಮಾಜದಲ್ಲಿ ಹುಟ್ಟಿದ್ದ ಮಾತ್ರಕ್ಕೆ, ಶೋಷಿತರಾಗಿದ್ದಕ್ಕೆ, ದಲಿತರಾಗಿದ್ದಕ್ಕೆ, ಬಡವರಾಗಿದ್ದಕ್ಕೆ ಅವರಿಗೆ ಅವರ ಮಾನ-ಮರ್ಯಾದೆಯನ್ನು ಕಾಪಾಡಿಕೊಳ್ಳುವ ಹಕ್ಕಿವಲ್ಲವೇ? ಯೋಜನೆಯನ್ನು ಘೋಷಣೆ ಮಾಡುವಂಥದ್ದು ಮುಖ್ಯವಲ್ಲ. ಘೋಷಿತ ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೆ ಬದ್ಧತೆ ಇರಬೇಕಾಗುತ್ತದೆ. Come on take up. ಶೌಚಾಲಯಗಳು ಎಲ್ಲಿ implement ಆಗಿಲ್ಲವೆಂದು ಎಷ್ಟು ಕಡೆ spot inspection ಮಾಡಿದ್ದೀರಾ? ನಿಮ್ಮ ಅಧಿಕಾರಿಗಳು ಹೋಗಿದ್ದಾರಾ? Surprise inspection ಮಾಡಿದ್ದೀರಾ? ಏಕೆ ಶೌಚಾಲಯಗಳ ನಿರ್ಮಾಣ ಆಗಿಲ್ಲ? ಜನ ಮುಂದೆ ಬರಲಿಲ್ಲವೇ? ಅವರಿಗೆ ಶೌಚಾಲಯ ಬೇಡವೇ ಅಥವಾ ಅವರು ಕಟ್ಟಿದ್ದ ದುಡ್ಡು ಬರಲಿಲ್ಲವೇ? ನೀವು ಹಣವನ್ನು ಬಿಡುಗಡೆ ಮಾಡಲಿಲ್ಲವೇ? ನಾಲ್ಕು ಜನ ಅಧಿಕಾರಿಗಳ ಮೇಲೆ ಇವರು ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದ್ದಾರೆ, they have committeed violaiton of human rights ಎಂದು ಒಂದು charge sheet ಹಾಕಿ judicial custody ಗೆ ಕಳುಹಿಸಿದ್ದರೆ ಹೇಗಿರುತ್ತಿತ್ತು? ಪಾಪ ಬಸವಲಿಂಗಪ್ಪನವರು ಇದ್ದಿದ್ದರೆ ಮಾಡುತ್ತಿದ್ದರು. ಮಾನ್ಯ ಹೆಚ್.ಕೆ. ಪಾಟೀಲ್‌ರವರೆ ನೀವು ಬಸವಲಿಂಗಪ್ಪನವರ ರೀತಿ ಆಗಬೇಕು ಎನ್ನುವುದು ನನ್ನ ಆಸೆ. ಆ ರೀತಿ ಆಗುವುದಕ್ಕೆ ನಿಮಗೆ ಸಾಧ್ಯವಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. This is how I think, this is how I speak, this is how I behave. ಶೌಚಾಲಯ ಅಲ್ಲಿಯೇ ಇದೆ. ಮನೆ ಕಟ್ಟಬೇಕಾದರೆ ಅಧಿಕಾರ ನಮ್ಮ ಕಡೆಗೆ ಇರಬೇಕು. ತಮ್ಮ ಕ್ಷೇತ್ರಕ್ಕೆ 400-500 ಹಳ್ಳಿಗಳು ಬರುತ್ತವೆ. ತಾವೇ ಖುದ್ದಾಗಿ ಎಲ್ಲಾ ಹಳ್ಳಿಗಳಿಗೆ ಭೇಟಿ ನೀಡುತ್ತೀರಾ?

ಯಾರು ಅವನಿಗೆ ವೋಟು ಹಾಕುತ್ತಾನೋ, ಹಾಕುವುದಿಲ್ಲವೋ, ಚುನಾವಣೆಯ ದಿವಸದಂದು ಏನು ಹುಚ್ಚು ಹಿಡಿದಿರುತ್ತದೆಯೋ ನಮ್ಮ ಮೇಲೆ ಸಿಟ್ಟೋ, ನಮ್ಮ ಜೊತೆಯಲ್ಲಿರುವವನ ಮೇಲೆ ಸಿಟ್ಟೋ, ಅವನು ಬಡವನಾಗಿದ್ದು, ಅವನಿಗೊಂದು ನಿವೇಶನ ಇದ್ದು ಮನೆ ಇಲ್ಲವೆಂದರೆ ಅಲ್ಲಿ ರಾಜಕೀಯ ಅಡ್ಡ ಬರಬಹುದೆ? ಅಲ್ಲಿಗೆ ರಾಜಕೀಯ ಕಾರಣಗಳಿಗೆ ನಾವು ಮನೆ ಕೊಡುವುದೋ ಬೇಡವೋ ಎಂದು ನಿರ್ಣಯ ಮಾಡುವುದಾದರೆ ನಾವು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಇಲ್ಲ. ಪಾಳೆಗಾರಿಕೆ ವ್ಯವಸ್ಥೆಯಲ್ಲಿದ್ದೇವೆ ಎಂದು ಆಗುತ್ತದೆ. ಅಂದರೆ ಇದು ಪ್ರಜಾತಂತ್ರದಲ್ಲಿ ಪಾಳೇಗಾರಿಕೆಯಾ? ಈ ಎಲ್ಲವುಗಳ ನಿವಾರಣೆಗೆ ನಾವು ತಿದ್ದುಪಡಿಗಳನ್ನು ಕೊಟ್ಟಿದ್ದು. ಈಗ ಸಮಯ 2.15 ಗಂಟೆ ಆಗುತ್ತಿದೆ. ನೀವು ನನ್ನ ಮುಖ ನೋಡುತ್ತಿದ್ದೀರಿ. ಬಹಳ ಜನ diabetic patients ಇದ್ದಾರೆ. ಮಾತನಾಡುವ ವಿಚಾರ ಇನ್ನೂ ಅನೇಕ ಇವೆ. Works ಆಗಬಹುದು, ಇನ್ನೊಂದು ಆಗಬಹುದು, PDO's, EO ಗಳ ಮೇಲೆ ಹೆಚ್ಚು ಆಧಾರವಾಗಬೇಡಿ.

ಅಧ್ಯಕ್ಷರು:- ಅವರನ್ನು recruit ಮಾಡಲು ಇವರಿಗೆ ಏನಾಗಿದೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್:- ನಮಗೆ ಮಾನ್ಯ ಹೆಚ್.ಕೆ. ಪಾಟೀಲರಲ್ಲಿ ವಿಶೇಷವಾದಂತಹ ಸಂಬಂಧ ಇದೆ. ನನ್ನ ರಾಜಕೀಯ ಜೀವನ ರೂಪಿತವಾಗುವುದರಲ್ಲಿ ಪ್ರಮುಖ ಪಾತ್ರವಹಿಸಿದವರಲ್ಲಿ ಇವರ ಪೂಜ್ಯ ತಂದೆಯವರು ಕೂಡ ಇದ್ದಾರೆ. ನನಗೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಏನು ತಿಳಿದುಕೊಳ್ಳುತ್ತಾರೋ ಗೊತ್ತಿಲ್ಲ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ನನ್ನ ಮೈಮೇಲೆ ಬರುತ್ತಾರೆ. ಇವರಿಗೆ ಒಮ್ಮೆ ಕೂಡ ಬಂದಿದ್ದನ್ನೇ ನೋಡಿಲ್ಲ. ಏಕೆ ಈ ರೀತಿ ಆಗುತ್ತದೆ? ಮಾನ್ಯ ಸುರೇಶ್‌ಕುಮಾರ್‌ರವರೆ, ಮಾನ್ಯ ಕೆ.ಹೆಚ್. ಪಾಟೀಲ್‌ರವರು ಆಹಾರ ಸಚಿವರಾಗಿದ್ದರು. Food prices went up. As Minister he raided flour mills. ಅವರು ನಡುಕ ಹುಟ್ಟಿಸಿದರು. ಅವರು ಬಂದರೆ ಎಲ್ಲವೂ ನಡುಗುತ್ತಿದ್ದರು. ಇವರು ಬರುವಾಗಲೇ ನಡುಗಿಕೊಂಡು ಬರುತ್ತಾರೆ. ಮತ್ತೆ ನಾವು ಆ ರೀತಿ ಹೇಳಿದರೆ ಸಿಟ್ಟಾಗುತ್ತಾರೆ. ನಾನು ಇವರಿಗೆ ಎಲ್ಲಿ ಹೇಳಲಿ? ಮನೆಗೆ ಹೋಗಿ ಗುಟ್ಟಾಗಿ ಹೇಳಲೇ?

ನೆಪೋಲಿಯನ್ ಒಂದು ಮಾತು ಹೇಳುತ್ತಾನೆ. Love, ಪ್ರಣಯ ಪ್ರೀತಿ ಇದೆಯಲ್ಲಾ, ಅದು opposite sex ಗೆ ಸೇರಿದಂತಹ ಇಬ್ಬರು adults ಮಧ್ಯೆ absolute privacyಯಲ್ಲಿ ಮಾಡಿಕೊಳ್ಳುವಂಥದ್ದು. Love Leadership ಅಂದರೆ ಜನರ ಮತ್ತು ನಾಯಕ ಮಧ್ಯೆ ಸಾಮಾನ್ಯ ಜನರ ಎದುರು ಬಹಿರಂಗವಾಗಿ ನಡೆಯುವಂಥದ್ದು. ಇಲ್ಲಿ it is not love, it is leadership. If I want to love you I will come to your house and talk to you privately. It is a matter that involves leadership. You are the leader today as the Minister. That is the reason ನಾನು ಸಾರ್ವಜನಿಕವಾಗಿ, ಬಹಿರಂಗವಾಗಿ ವಿಧಾನಸಭೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅನೇಕ ವಿಚಾರಗಳು ಇವೆ. ಚುನಾವಣೆಯ ಹಂತ ಮುಗಿದು ಹೋಯಿತು. ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಹೋಗುತ್ತಿದ್ದೇವೆ. Funds ವಿಚಾರದಲ್ಲಿ, functions ವಿಚಾರದಲ್ಲಿ, functionaries ವಿಚಾರದಲ್ಲಿ, ಯೋಜನೆಯ ವಿಚಾರದಲ್ಲಿ, ಇಲಾಖೆಗಳನ್ನು ಒಪ್ಪಿಸುವುದರ ವಿಚಾರದಲ್ಲಿ ದಯಮಾಡಿ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ನನಗೆ ಈ ವರದಿ ಕೊಡುವುದರಲ್ಲಿ ಯಾವುದೇ ಸ್ವಾರ್ಥವಿಲ್ಲ. ಅತ್ಯಂತ ಪರಿಣಿತರು ನಮ್ಮ ಜೊತೆಗೆ ಈ ಸಮಿತಿಯಲ್ಲಿ ಕೆಲಸ ಮಾಡಿದ್ದಾರೆ. ನಾವು ಬಹಳ ಶ್ರದ್ಧೆಯಿಂದ ಈ ಕೆಲಸವನ್ನು ಮಾಡಿದ್ದೇವೆ. ಎಲ್ಲಾ ವರ್ಗದ ಜನರ ವಿಶ್ವಾಸವನ್ನು ತೆಗೆದುಕೊಂಡು ಈ ವರದಿಯನ್ನು ಸಿದ್ಧಪಡಿಸಿಕೊಟ್ಟಿದ್ದೇವೆ. ಮೂಲಭೂತವಾದ ವಿಚಾರವನ್ನು Panchayath sizes ಬಗ್ಗೆ ಮಾನ್ಯ ಬಸವರಾಜ ಬೊಮ್ಮಾಯಿಯವರು ಪ್ರಸ್ತಾಪ ಮಾಡಿದರು. ನಾನು ಮಾನ್ಯ ಹೆಚ್.ಕೆ. ಪಾಟೀಲ್‌ರವರನ್ನು ಕೇಳುತ್ತೇನೆ, ನೀವು ಒಂದು decision ತೆಗೆದುಕೊಂಡಿದ್ದೀರಿ. O.K. ಇವತ್ತಿಗೂ ಕೂಡ ನೀವು ಎಲ್ಲಾದರೂ ಹೋಗಿ ಮಂಡಲ ಪಂಚಾಯಿತಿಗಳು ಚೆನ್ನಾಗಿತ್ತಾ, ಚೆನ್ನಾಗಿರಲಿಲ್ಲವೇ ಎಂದು opinion poll ಮಾಡಿ. ಎಲ್ಲಿ ಹೋಗಿ ಕೇಳಿದರೂ Mandal Panchayaths were the best ಎಂದು ಹೇಳುತ್ತಾರೆ. ಅಬ್ದುಲ್ ನಜೀರ್ ಸಾಹೇಬರಿಗೆ ರಾಜಕಾರಣದಲ್ಲಿ ತಂದೆ ತಾಯಿ ಇರಲಿಲ್ಲ. ಯಾವುದೇ ದೊಡ್ಡ ಕುಟುಂಬದಿಂದ ಬರಲಿಲ್ಲ.

ಆದ್ದರಿಂದ ಅವರು ಬಂದರು, ಮಾಯವಾಗಿ ಹೊರಟು ಹೋದರು. ಅವರು ನನಗಿಂತ 16 ವರ್ಷ ದೊಡ್ಡವರು ನನ್ನ ಸ್ವಂತ ಅಣ್ಣನಿಗಿಂತ ಜಾಸ್ತಿ ಆಗಿದ್ದರು. ಆತನ ಜೀವ ಹೋಗುವ ಕಡೆ ನಿಮಿಷದವರೆಗೂ ಆತನ ಜೊತೆಯಲ್ಲಿ ಅತ್ಯಂತ ಆತ್ಮೀಯತೆಯಿಂದ ನಾನು ಇದ್ದೆ. ದೊಡ್ಡ ಪಂಚಾಯಿತಿ ಆಗಬೇಕಾದರೆ ನಮ್ಮ ಉದ್ದೇಶ ಇಷ್ಟೆ. ನಮಗೇನೂ ಪಾಳೇಗಾರಿಕೆ ಮಾಡಬೇಕೆಂದೇನೂ ಇಲ್ಲ. 29 ಇಲಾಖೆಗಳ ನಿರ್ವಹಣೆಯನ್ನು ಅದಕ್ಕೆ ವಹಿಸುವಾಗ ಹುಡುಗಾಟಿಕೆ ಆಗುತ್ತದೆ. ನಾವು ಸಣ್ಣ ಪಂಚಾಯಿತಿ ಮಾಡುವ ಹಾಗೆ ಮಾಡಿದರೆ ಆಗುತ್ತದೆಯೇ? ಬೇಡ ಎಂದು ಹೇಳಿ. ಯಾವ ರಾಜಕೀಯ ಸಿದ್ಧಾಂತವೋ, ಯಾವ ಕಾರಣವೋ, you have taken decision, o.k. We have crossed that stage now. ಈಗಲೂ ಕಾಲ ಮಿಂಚಿ ಹೋಗಿಲ್ಲ. ನೀವು reply ಕೊಡುವ ಸಂದರ್ಭದಲ್ಲಿ ನನಗೋಸ್ಕರ ಬೇಡಪ್ಪ. ರಾಜೀವ್‌ಗಾಂಧಿಯವರಿಗೋಸ್ಕರ. ಪಾಪ ಆ ಮನುಷ್ಯ ಪ್ರಾಣವನ್ನೇ ಬಿಟ್ಟುಬಿಟ್ಟ. ನೀವು ಸಚಿವರಾಗಿದ್ದೀರಿ. ಮೊದಲು ಒಂದು ಬಾರಿ ಸಚಿವರಾಗಿದ್ದೀರಿ. Opposition leader ಆಗಿದ್ದೀರಿ. MLC ಆಗಿದ್ದೀರಿ. MLAಯಾಗಿ ಬಂದಿದ್ದೀರಿ. ನಿಮಗೆ ಮುಖ್ಯಮಂತ್ರಿಗಳು ಆಗುವ chances ಇದೆ. ನಾವೇನೂ ಅದರ ಗಾಳಿಗೇ ಹೋಗುವುದಿಲ್ಲ. ನಿಮಗೆ ಇವೆಲ್ಲಾ in the name of Rajiv Gandhi, Sonia Gandhi. ಅವರ ಋಣ ತೀರಿಸಿಕೊಳ್ಳಿ. Declare ಮಾಡಿ. ವರದಿಯಲ್ಲಿರುವಂತಹ ಉಳಿದ ಎಲ್ಲಾ ಶಿಫಾರಸ್ಸುಗಳನ್ನು ರಾಜೀವ್ ಗಾಂಧಿಯವರಿಗೆ ಅರ್ಪಣೆ ಮಾಡಿ ಮಾಡುತ್ತೇವೆ ಎಂದು ಹೇಳಿ. ಬಿ.ಜೆ.ಪಿ. ಯವರು, ಜೆ.ಡಿ.ಎಸ್‌ನವರು ಸಿಟ್ಟು ಮಾಡಿಕೊಂಡರೂ ಚಿಂತೆ ಇಲ್ಲ. ನಿಮ್ಮ leader ಬಗ್ಗೆ ನೀವು ಅರ್ಪಣಾ ಮನೋಭಾವ ಇಟ್ಟುಕೊಂಡರೆ ತಪ್ಪೇನು? ಅವರು ಎದ್ದು ಹೇಳಿಬಿಟ್ಟರು. ವಿರೋಧ ಪಕ್ಷದ ನಾಯಕರು ನಾವು ಪಾಸ್ ಮಾಡಿಕೊಡುತ್ತೇವೆ, ಇದನ್ನು ಮಾಡಿ ಎಂದು ಹೇಳಿದರು. ಆದರೆ ನೀವು ಒಪ್ಪಲಿಲ್ಲ. I don't know what happened? ನನ್ನ ಮಾತನ್ನು ಇನ್ನೂ ಹೆಚ್ಚು ಮುಂದುವರೆಸುವುದಿಲ್ಲ. There are lot of issues. ಏನೇನು ಹೇಳಿದ್ದೇವೆ ಎಂದು Sectionwise ನಾನು

ಬರೆದುಕೊಂಡು ಬಂದಿದ್ದೇನೆ. ಆದರೆ ನೀವು ಮೂಲಭೂತವಾಗಿ ಏನು ಸಮರ್ಪಣೆ ಮಾಡಿಕೊಳ್ಳಬೇಕಾಗಿತ್ತು ವಿಶೇಷವಾಗಿ NREG.....

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ರಮೇಶ್‌ಕುಮಾರ್‌ರವರೆ, ಹೆಗಡೆ ಸಾಹೇಬರದ್ದು ಹಾಗೂ ನಜೀರ್ ಸಾಹೇಬರದ್ದು ಹೆಸರು ಬಹಳ ಮಹತ್ವವಾದವು.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಕೋನರೆಡ್ಡಿಯವರೆ ನೀವು ನಮ್ಮವರು. Address wrong ಆಗಿದೆ. ಇರಲಿ. ಮಾನ್ಯ ಅಧ್ಯಕ್ಷರೆ, ಪ್ರತಿ ಬಾರಿ NREG ಬಂದಾಗ ನೀವು ಮಾಡುವಂತಹ ವ್ಯಾಖ್ಯಾನವನ್ನು ನಾನು ಕೇಳಿದ್ದೆ. ಆ Philosophy ಯಲ್ಲಿ ಬಂದವರ ಮನಸ್ಸು, ಭಾಷೆ, ಆ ರೀತಿ ಇರುತ್ತದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಯಾವ ಕಾರಣಕ್ಕೂ ಕೂಡ ಈ ಯೋಜನೆ ವಿಫಲವಾಗಬಾರದು. ಅದರಲ್ಲಿ ಬರುವಂತಹ ನಿಧಿಯ ಬಳಕೆ ಕಡಿಮೆಯಾಗಬಾರದು, ದುರ್ಬಳಕೆಯಾಗಬಾರದು. ಆಸ್ತಿ ನಿರ್ಮಾಣವಾಗಬೇಕು. ಪ್ರತಿ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯ, ಕಾಂಪೌಂಡ್ ಮಾಡಿಕೊಡಿ. ಪ್ರತಿ ಸರ್ಕಾರಿ ಹೈಸ್ಕೂಲ್‌ಗಳಿಗೆ ಮಾಡಿಕೊಡಿ. ಸರ್ಕಾರಿ ಆಸ್ಪತ್ರೆಗೆ ಮಾಡಿಕೊಡಿ. ನೀವು ಹಣವನ್ನು ಎಲ್ಲಿಂದ ತರುತ್ತೀರಿ. ನಮ್ಮ ಅಂತ:ಕರಣವನ್ನು ನೀವು ಅರ್ಥಮಾಡಿಕೊಳ್ಳಬೇಕು. ಇದು ನಿಮ್ಮ ಮೇಲೆ ಮಾಡುತ್ತಿರುವ ಆಪಾದನೆಯಲ್ಲ, ಆರೋಪ ಅಲ್ಲ, ಜಗಳ ಅಲ್ಲ, ಮತ್ಸರ ಅಲ್ಲ, ದ್ವೇಷ ಅಲ್ಲ. ನಿರ್ಭಯವಾಗಿ ನಾನು ನಂಬಿದ ವಿಚಾರಗಳನ್ನು ಪ್ರತಿಪಾದನೆ ಮಾಡಬೇಕಾದಾಗ ಮಾಡತಕ್ಕಂತಹ ಶೈಲಿ ಸದುದ್ದೇಶದಿಂದ ಸ್ವೀಕಾರ ಮಾಡಬೇಕು. ನೀವು ಏನು ಬೇಡಿಕೆಯನ್ನಿಟ್ಟಿದ್ದೀರಿ. ಇಷ್ಟು ಮೊತ್ತಕ್ಕೆ ಮೀರಿದ ಮೊಬಲಗನ್ನು 2015–16ನೇ ಸಾಲಿಗೆ ನಾನು ಈ ರಾಜ್ಯದ ಮಂತ್ರಿಯಾಗಿ ಖರ್ಚು ಮಾಡುವುದಕ್ಕೆ ನನಗೆ ಮಂಜೂರು ಮಾಡಿಕೊಡಬೇಕೆಂದು ಕೇಳಿದ್ದೀರಿ. ಈ ಬಗ್ಗೆ ಪ್ರತಿಪಕ್ಷದಲ್ಲಿ ಇರುವವರು ಯಾರು ಕೂಡ ಇದುವರೆಗೂ ಮಾತನಾಡಿದರು ಇದನ್ನು ನಾವು ತಿರಸ್ಕರಿಸುತ್ತೇವೆ, ಈ ಹಣಕ್ಕೆ ನೀವು ಅರ್ಹರಲ್ಲ ಎಂದು ಅವರುಗಳು ಹೇಳಲೇ ಇಲ್ಲ. ಅವರೆಲ್ಲರೂ ಹರಿಕತೆ ತರಹ ಮಾತನಾಡಿ ಮನವಿ ಇಟ್ಟು ಕುಳಿತುಕೊಂಡರು. ನಾನು ಈಗ opposition

ತರಹ ಮಾತನಾಡುವಂತಹ ಗತಿ ಬಂತು. 1979ರಲ್ಲಿ ಜೆ.ಹೆಚ್. ಪಟೇಲ್‌ರವರು opposition ನಲ್ಲಿದ್ದರು. K.Prabhakar was RDPR Minister. ತಾವು ಈ ಬಗ್ಗೆ proceedings ಅನ್ನು ತೆಗೆದುನೋಡಿ. Last conclude ಮಾಡುವಾಗ ಜೆ.ಹೆಚ್. ಪಟೇಲ್‌ರವರು ಒಂದು ಮಾತನ್ನು ಹೇಳಿದರು. ಇವತ್ತಿಗೂ ಸಹ ನಾನು ಆ ಮಾತನ್ನು ಕೇಳಿದಂತೆ ಇದೆ. ಈ ಇಲಾಖೆಗೆ ಇವರು ನಡೆಸಿರುವಂತಹ ರೀತಿಯಲ್ಲಿ ಒಂದು ಚಿಕ್ಕ ಕಾಸಿಗೂ ಇವರಿಗೆ ಅರ್ಹತೆ ಇಲ್ಲ, ಈ ಬಗ್ಗೆ ನಾನು ವಿರೋಧ ಮಾಡುತ್ತೇನೆಂದು ಹೇಳಿ ಕುಳಿತುಕೊಂಡರು. ಇದು ಸಂಸದೀಯ ಪ್ರಜಾಪ್ರಭುತ್ವ ಅಲ್ಲವೇ? Give and take ಇರಬೇಕು. It should not cross its limits, it should not fail in its duties. I have asserted my right as member. ಸಮಯದ ಪರಿಸ್ಥಿತಿ, ಸಂದಿಗ್ಧತೆಯನ್ನು ಎಲ್ಲವನ್ನು ನೋಡಿಕೊಂಡು ತಾವು ನನಗೆ ಮಾತನಾಡುವುದಕ್ಕೆ ಮುಕ್ತ ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಮತ್ತೊಮ್ಮೆ ಮಾನ್ಯ ಮಂತ್ರಿಗಳೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ಅವರ ಅನುಪಸ್ಥಿತಿಯಲ್ಲಿ ದಯಮಾಡಿ ತಾವು ಇನ್ನೊಂದು ಸಾರಿ ಚರ್ಚೆ ಮಾಡಿಕೊಳ್ಳಿ, ನಾವು ಮಾಡಿರತಕ್ಕಂತಹ 88 ಶಿಫಾರಸ್ಸುಗಳ ಪೈಕಿ ನೀವು 4 ಅನ್ನೇ ಮುಟ್ಟಿರುವುದು. ನಿಮ್ಮ ಕೀರ್ತಿ ಉತ್ತುಂಗಕ್ಕೆ ಹೋಗುತ್ತದೆ. ನೀವು ಮಾದರಿ ರಾಜ್ಯವನ್ನಾಗಿ ಮಾಡುತ್ತೀರಿ. ಇದನ್ನು ಮಾಡುವುದಕ್ಕೆ ನಿಮಗೆ ಇನ್ನು ಮೂರು ವರ್ಷಗಳ time ಇದೆ. ದಯಮಾಡಿ ಅದನ್ನು ಗೌರವಿಸಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಸದನವನ್ನು ಮುಂದೂಡಿ ಪುನ: 3.30 ಗಂಟೆಗೆ ಸೇರುತ್ತದೆ.

(ಸದನವು ಭೋಜನ ವಿರಾಮಕ್ಕೆ ಮಧ್ಯಾಹ್ನ 2 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆ 42 ನಿಮಿಷಕ್ಕೆ ಪುನ: ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್ ರವರೆ ಪ್ರಾರಂಭ ಮಾಡಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮೇಲೆ . . . .

ಉಪಾಧ್ಯಕ್ಷರು:- Adjournment motion move ಮಾಡಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಐದು ನಿಮಿಷ ಕೊಡಿ.

ಉಪಾಧ್ಯಕ್ಷರು:- ಆಮೇಲೆ ಅವಕಾಶ ಕೊಡುತ್ತೇವೆ.

3. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: ಬೆಳಗಾವಿಯಲ್ಲಿ ನಡೆದ ಎಂ.ಇ.ಎಸ್ ಸಮಾವೇಶದಲ್ಲಿ ಸುವರ್ಣ ವಿಧಾನಸೌಧದ ಮೇಲೆ ನಮ್ಮ ಧ್ವಜ ಹಾರಿಸುತ್ತೇವೆಂದು resolution ಪಾಸ್ ಮಾಡಿರುವ ಬಗ್ಗೆ.

ಶ್ರೀ ಎ.ಎಸ್. ಸುರೇಶ್‌ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ. ಇವತ್ತು ಬೆಳಗಾವಿಯಲ್ಲಿ ನಡೆದ MES ಸಮಾವೇಶದಲ್ಲಿ ಒಂದು resolution ಅನ್ನು ಪಾಸ್ ಮಾಡಿ ಸುವರ್ಣಸೌಧದ ಮೇಲೆ ನಾವು ನಮ್ಮ ಧ್ವಜ ಹಾರಿಸುತ್ತೇವೆಂದು Whatsapp ನಲ್ಲಿ ಆ ಫೋಟೋ ಹಾಕಿ ಇಡೀ ರಾಜ್ಯದಲ್ಲಿ ಇವತ್ತು ಕಳುಹಿಸುತ್ತಿದ್ದಾರೆ. ಬೆಳಗಾವಿ ಕಾರ್ಪೋರೇಷನ್ ಮೇಯರ್ ರವರು ಸಹ ಅದಕ್ಕೆ ತಮ್ಮ ದೊಡ್ಡ ಧ್ವನಿಯನ್ನು ಸೇರಿಸಿದ್ದಾರೆ. ಹಿಂದೆ ಇದೇ ತರಹ ಬಂದಾಗ ಆ ಕಾರ್ಪೋರೇಷನ್ ಬಗ್ಗೆ ಒಂದು ದೊಡ್ಡ ಚರ್ಚೆ ಆಯಿತು. ಈ ಸುವರ್ಣ ಸೌಧದಲ್ಲಿ ನಾವು ಸಮಾವೇಶ ಮಾಡುವಾಗಲೇ ಈ ರೀತಿ